ಅಖಿಲ ಭಾರತ ಪತ್ರಿಕೆ

ನವೆಂಬರ್ 2023



# ಕೃಷ್ಣನ ಲೀಲೆ

ಬೆಲೆ : 15/-



ಫೋಟೊ: ಇಮೇಜಿಂಗ್ ಸಾವಿತ್ರಿ

ರಂಗೇರಿದಂಥ ಇದರ ನಾದಗಳು ಭವ್ಯದಲಿ ತೇಲಿ ಸಾಗಿ
ಅರಳುತಿವೆ ಈಗ ಬೆಡಗಿನಲಿ ಪರ್ಣ–ಪುಷ್ಪಗಳು ವರ್ಣವಾಗಿ.

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 4 ಪುಟ 139)**

**ಅಖಿಲ ಭಾರತ ಪತ್ರಿಕೆ**
**ನವೆಂಬರ್ 2023**

ಸಂಪುಟ: 33 ಸಂಚಿಕೆ: 11

# ಪರಿವಿಡಿ

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಕೃಷ್ಣನ ಲೀಲೆ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಕೃಷ್ಣನ ಲೀಲೆಗಳು** 3
ಅನು: ಕಿಶೋರಕುಮಾರ ಕಾಸಾರ

**ಪರಮಾತ್ಮನ ಅವತಾರಿಯಾಗಿ ಶ್ರೀ ಕೃಷ್ಣ** 13
ಅನು: ನಾಗಜ್ಯೋತಿ ಮಾನ್ವಿ
ಅನು: ಡಾ. ಮಹಾದೇವ ಸಕ್ರಿ

**ಶ್ರೀ ಕೃಷ್ಣನ ಬೋಧನೆಗಳು** 29
ಅನು: ಡಾ. ಮಹಾದೇವ ಸಕ್ರಿ

**ಶ್ರೀ ಕೃಷ್ಣನ ಸೂಕ್ತಿಗಳು** 32
ಅನು: ವಿಶಾಲಾಕ್ಷಿ ಸತ್ಯನ್


**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 41
ಅನು: ಜಾನ್ವಿ

**ತ್ರಾಟಕ ಸೂರ್ಯ** 60
– ಪುಟ್ಟು ಕುಲಕರ್ಣಿ

**ಕಾವ್ಯ (ಮುಖಪುಟಗಳು)** 72–74
ಅನು: ಪುಟ್ಟು ಕುಲಕರ್ಣಿ

---

**ಸಂಪಾದಕರ ಟಿಪ್ಪಣಿ:** ಭಾರತದ ಚಿತ್ತದಲ್ಲಿ ಅಚ್ಚೊತ್ತಿದಂತೆ ಸ್ಥಿರವಾಗಿ ನೆಲೆಸಿರುವ ಎರಡು ಹೆಸರುಗಳೆಂದರೆ ರಾಮ ಮತ್ತು ಕೃಷ್ಣ. ತ್ರೇತಾ ಯುಗದಲ್ಲಿ ಒಬ್ಬರು ಮತ್ತು ದ್ವಾಪರ ಯುಗದಲ್ಲಿ ಒಬ್ಬರ ಅವತಾರದಲ್ಲಿ ಇದು ಈಗಲೂ ಮುಂದುವರೆದಿದೆ. ಈ ಸಂಚಿಕೆಯಲ್ಲಿ ಶ್ರೀ ಕೃಷ್ಣ ಲೀಲೆಗಳ ಕುರಿತು ಶ್ರೀ ಅರವಿಂದರು ಮತ್ತು ಶ್ರೀಮಾತೆಯವರ ದೃಷ್ಟಿಕೋನದಲ್ಲಿ ಅಭಿವ್ಯಕ್ತಗೊಂಡಿರುವ ವಿಷಯಗಳನ್ನು ರೂಪಿಸಲಾಗಿದೆ.



## ಕೃಷ್ಣನ ಲೀಲೆ

**– ಅನು: ಕಿಶೋರಕುಮಾರ ಕಾಸಾರ, ಕಲಬುರ್ಗಿ**

ಅರ್ಜುನ ಮತ್ತು ಕೃಷ್ಣರೆಂಬ ಈ ನರ–ನಾರಾಯಣರು ಲೌಕಿಕದಿಂದ ದೂರವಾಗಿ ಗಿರಿನೆತ್ತಿಯ ಪ್ರಶಾಂತ ವಾತಾವರಣದ ಮಧ್ಯದ ಪರ್ಣ ಕುಟೀರದಲ್ಲಿ ಧ್ಯಾನಮಗ್ನರಾಗಿ ಕೂತವರಲ್ಲ. ಬದಲಾಗಿ ಯುದ್ಧ ಘೋಷಗಳು ಮೊಳಗುತ್ತಿರುವ ರಣರಂಗದ ಮಧ್ಯೆ, ಅಶ್ವಗಳ ಹೇಷಾರವ, ಗಜ ಪಡೆಗಳ ಘೀಂಕೃತಿಗಳ ಉದ್ಘೋಷದ ನಡುವೆ, ಉರುಳುತಿರುವ ಚಕ್ರ–ನೇಮಿಗಳ ರಥದಲ್ಲಿ ಓರ್ವ ಕದನಕಲಿತನದ ಕ್ಷಾತ್ರ ಪುರುಷನಾಗಿ ಹೋರಾಡುತ್ತಿದ್ದರೆ, ಇನ್ನೋರ್ವ ಆ ಕ್ಷಾತ್ರ ತೇಜಕ್ಕೆ ತನ್ನ ಬ್ರಾಹ್ಮ ಬಲವನ್ನು ತುಂಬಿ ಇಡೀ ವಿಶ್ವಕ್ಕೆ ಗೀತೋಪದೇಶವನ್ನು ನೀಡುತ್ತ ನಿಂತವರು. ಈ ನರ–ನಾರಾಯಣರಿಬ್ಬರೂ ಪ್ರತಿಮಾರೂಪದ ತತ್ತ್ವಗಳಲ್ಲಿ ಬೇರೆ–ಬೇರೆಯಾಗಿ ಕಂಡರೂ ಸಹ ಸಾಂಕೇತಿಕವಾದ ಸಿದ್ಧಾಂತದಲ್ಲಿ ಅವರೀರ್ವರೂ ಏಕಮೇವತೆಯ ಸಾಕಾರರೇ ಆಗಿದ್ದಾರೆ. ನರ ರೂಪದಲ್ಲಿರುವ ನಾರಾಯಣನಾಗಿ, ಜಂಗಮ ಜಿಷ್ಣುವಿನ ರೂಪದಲ್ಲಿ ಅವಿರ್ಭೂತನಾದ ಸ್ಥಾಣುವಿಷ್ಣುವಾಗಿ ನೆಲೆಸಿರುವ ಶ್ರಿ ಕೃಷ್ಣನು ಗೀತೋಪದೇಶಕನಾಗಿ ತನ್ನನ್ನು ತಾನು ಅನಾವರಣಗೊಳಿಸುವದರ ಜೊತೆಜೊತೆಗೆ, ಈ ಮೃಣ್ಮಯದ ಕರ್ಮ ಸ್ವರೂಪದ ಪ್ರಪಂಚವನ್ನು ಯುಗ ಧರ್ಮಕ್ಕನುಸಾರವಾಗಿ ನಡೆಸುವ ಮಹೋನ್ನತ ಜವಾಬ್ದಾರಿಯನ್ನೂ ಹೊತ್ತಿರುವನು. ಹಾಗಾಗಿ ಮರ್ತ್ಯವು ಎಲ್ಲಾ ಕಾಲ–ದೇಶಗಳ ಪರಿಧಿಯಲ್ಲಿ ನಿರ್ವಹಿಸುವ ಮಾನವೀಯತೆ – ಶ್ರಮತೆ – ಜೀವನ ಹೋರಾಟಗಳು ಅವ್ಯಕ್ತ ರೂಪದಲ್ಲಿ ಆ ಪರಮಾತ್ಮನಿಂದ ಬಂದು ಪುನಃ

ಆ ಪರಮ ಪುರುಷನಲ್ಲಿಯೇ ಅಂತರ್ಲೀನವಾಗುತ್ತವೆ. ನಮ್ಮೆಲ್ಲರ ತ್ಯಾಗ–ಕರ್ಮಗಳ ನಿಯಾಮಕನಾದ ಅವನು ಮನುಕುಲದ ಮಿತ್ರನಾಗಿ ಪ್ರತಿಯೋರ್ವರನ್ನು ಅವರವರ ಪರಮ ಪದದೆಡೆಗೆ ಆರೋಹಿಸುವ ಕಾರ್ಯದಲ್ಲಿ ನಿರತನಾಗಿರುತ್ತಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/19 – ಶ್ರೀ ಅರವಿಂದರು**

## ಕೃಷ್ಣನ ಲೀಲೆಗಳು

**ವಿಶ್ವನಿಯಾಮಕನಾದ ಅಮರಶಿಶು**

ಶ್ರೀ ಕೃಷ್ಣನು ಕೇವಲ ವಿಶ್ವ ನಿಯಾಮಕನಷ್ಟೇ ಅಲ್ಲದೆ ಅವನು ಮನುಕುಲದ ಆಂತರ್ಯದ ದೈವತವಾಗಿಯೂ ಪ್ರತಿನಿಧಿತವಾಗಿದ್ದಾನೆ. ಅವನು ತನ್ನಿಂದ ರೂಪುಗೊಂಡ ಸಕಲ ಸೃಷ್ಟಿಯ ಸರ್ವಾತ್ಮಗಳಲ್ಲೂ ಸ್ಥಾಯಿಯಾಗಿದ್ದು, ಅವನನ್ನು ಕಾಣಬಯಸುವ ಪ್ರತಿಯೋರ್ವ ಆತ್ಮಗಳಿಗೂ ದರ್ಶನವನ್ನಿತ್ತು, ಬಹುರೂಪಿಣಿಯಂತೆ ಸಕಲರಲ್ಲೂ ಏಕಕಾಲದಲ್ಲೇ ಪ್ರಕಟವಾಗುವ ಸಾಮರ್ಥ್ಯವನ್ನು ಹೊಂದಿರುವನು.

ನಿಮಗೆ ಗೊತ್ತಿರಬಹುದು ಕೃಷ್ಣನನ್ನು ಸದಾ ಅಂಬೆಗಾಲಿಕ್ಕುವ, ಎಡಗಾಲಿನ ಪಾದದಂಗುಷ್ಠವನ್ನು ಬಾಯೊಳಿಟ್ಟು ಚೀಪುವ ಹಸುಳೆಯಂತೆಯೇ ಚಿತ್ರಿಸಲಾಗಿರುತ್ತದೆ. ಅದಕ್ಕೂ ಒಂದು ಕಾರಣವಿದೆ. ಅದೇನೆಂದರೆ, ಅವನ ಪ್ರಗತಿಯು ಚಿರಂತನವಾಗಿದ್ದು, ವಿಶ್ವವು ಎಲ್ಲಿಯವರೆಗೆ ಪರಿಪೂರ್ಣತೆಯನ್ನು ಸಾಧಿಸುವದಿಲ್ಲವೋ, ಅಲ್ಲಿಯವರೆಗೂ ಅವನ ಲೀಲೆಯು ಹೀಗೆ ಸಾಗುತ್ತಲೇ ಇರುತ್ತದೆ. ಈ ವಿಶ್ವವು ಅನಂತ ಕಾಲದಿಂದಲೂ ಇನ್ನೂ ಬಾಲ್ಯಾವಸ್ಥೆಯಲ್ಲಿಯೇ ಇದ್ದು, ಇನ್ನೂ ಅನಂತದವರೆಗೆ ಇದರ ಶಿಶುವಾಗಿರುವ ಅವಧಿಯು ಹೀಗೇ ಮುಂದುವರಿಯುತ್ತಲೇ ಇರುವದರಿಂದ ಇದರ ನಿಯಾಮಕನಾದ ಶ್ರೀ ಕೃಷ್ಣನೂ ಸಹ ಇನ್ನೂ ಹಸುಳೆಯೇ ಹೌದು. ಜಗನ್ನಾಟಕ ಸೂತ್ರಧಾರನಾದ ಅವನು ಈ ವಿಶ್ವ ರಂಗದಲ್ಲಿ ನಿನ್ನೆ ಆಡಿದ ಆಟವನ್ನು ನಾಳೆ ಆಡುವದಿಲ್ಲ. ಅವನ ಲೀಲೆಗಳು ನಿತ್ಯನೂತನವಾಗಿದ್ದು, ಅವು ಸದಾ ಅಚಲ–ಆಧುನಿಕ–ಆನಂದಮಯವಾಗಿಯೇ ಇರುತ್ತವೆ. ಹಾಗಾಗಿಯೇ ವಿಶ್ವವು ಅವನ ಲೀಲೆಯನ್ನು ಪ್ರಾಕ್ತನದಿಂದಲೂ ಆರಾಧಿಸುತ್ತ ಬಂದಿರುವುದು, ಈ ಆಧುನಿಕದಲ್ಲಿಯೂ ಆನಂದಿಸುತ್ತಿರುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 15/14**

**ಬಾಲಮುರುಳಿ ಮೋಹನ**

ಚ್ಯುತಿಯಿರದ ಹಗಲಿನ ಪರಮಾನಂದ ಧಾಮವಾದ ಸೋಮ ಮಂಡಲದಿಂದ ಇಳೆಗಿಳಿದ ತರುಣಾವಸ್ಥೆಯ ಶ್ರೀ ಕೃಷ್ಣನನ್ನು ಕೊಳಲು ಹಿಡಿದ ಗೋಪಾಲಕನಾಗಿ ಚಿತ್ರಿಸಲಾಗಿದೆ. ಅವನ ಮುಗ್ಧ ಮುರಳಿ ಮೋಹನ ರಾಗವು ಮರ್ತ್ಯದ ಜಡ ಭೌತಿಕವಾದ ಅಜ್ಞಾನದ ನೆಲೆಯಲ್ಲಿ ತನ್ನ ಗೋಮಂಡಲದಿಂದ ತಂದ ದಿವ್ಯಾನಂದವನ್ನು ಸ್ಥಾಪಿಸಲೆಂದು ಸಾರುವ, ಅದನ್ನು ಸಾಧಿಸುವಂತೆ ಜಗಕ್ಕೆ ಕರೆ ನೀಡುವ ಸಂಗೀತವಾಗಿದೆ. ನಮ್ಮ ಆಂತರ್ಯದೊಳಗಿರುವ ದಿವ್ಯ ಚೈತನ್ಯವು ಆ ಮುರಳಿ ಗಾನವನ್ನು ಆಲಿಸಿ ಅದನ್ನು ಅನುಸರಿಸುತ್ತಿದೆ.

*

ಹೀಗೆ ದಿವ್ಯ ಪ್ರೇಮ ಮತ್ತು ದಿವ್ಯಾನಂದದ ಪ್ರತಿಮೆಯಾದ ಶ್ರೀ ಕೃಷ್ಣನ ಮುರಳಿಯು ಮೃಣ್ಮಯದ ಜಡ ನಿಯಮಗಳಲ್ಲಿ ಬಂಧಿತವಾದ ಮರ್ತ್ಯರನ್ನು ಈ ಭೌತಿಕ ಪ್ರಪಂಚದಿಂದ ಹಿಡಿದೆತ್ತಿ, ಅವರನ್ನು ಗೋವೃಜಗಳ ದಿವ್ಯ ಪ್ರೇಮ ಮತ್ತು ದಿವ್ಯಾನಂದಗಳೆಡೆ ಆರೋಹಿಸುವಂತೆ ಪ್ರೇರೇಪಿಸುವ ದೈವೀಕ ಶಬ್ದವಾಗಿದೆ ಎಂಬುದನ್ನು ನಾನು ಒಪ್ಪುತ್ತೇನೆ.

*

ರಾಧೆಯೊಂದಿಗಿನ ಕೃಷ್ಣನ ಸಾಂಗತ್ಯವು ಭುವಿಯ ಕಾಮಪ್ರಚೋದಿತ ಪ್ರೇಮವಲ್ಲ. ಬದಲಾಗಿ ಅದು ಈ ನೆಲೆಯ ಗಡಿಯನ್ನು ದಾಟಿದ, ಮನುಷ್ಯ ಮಾತ್ರನ ಪ್ರಜ್ಞೆಗೆ ನಿಲುಕದಿರುವ ದಿವ್ಯ ಪ್ರೇಮದ ಸಂಕೇತವಾಗಿದೆ. ಅವನ ಮುರಳಿ ಗಾನವು ದಿವ್ಯ ಪ್ರೇಮದ ಕರೆಯಾಗಿದೆ; ಹಾಗೂ ಅವನಿಡುವ ನವಿಲು ಗರಿಯು ಗೆಲುವಿನ ಸಂಕೇತವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/156–57 – ಶ್ರೀ ಅರವಿಂದರು**

**ಕೃಷ್ಣನ ಕುಟಿಲತನ**

ಕೆಲದಿನಗಳ ಹಿಂದೆ, ಅಂದರೆ ಕಳೆದ 29 ನೇ ತಾರೀಖು ಬೆಳಗಿನಜಾವ ನಾನೊಂದು ಪರಮಾದ್ಭುತವಾದ ಅನುಭವಕ್ಕೆ ಸಾಕ್ಷಿಯಾದೆ. ಅದು ನಡೆದದ್ದು ನನ್ನ ಮಹಡಿ ಮೇಲಿನ ಕೋಣೆಯಲ್ಲಿ. ಅಂದು ನಾನು ನನ್ನ ಕೋಣೆಯಲ್ಲಿ ಜಪ ಮಾಡುತ್ತ ಅತ್ತಿತ್ತ ನಡೆಯುತ್ತಿದ್ದೆ. ನನ್ನ ಕಣ್ಣುಗಳು ಅಗಲವಾಗಿ ತೆರೆದುಕೊಂಡಿದ್ದು, ನಾನಿರುವ ಕೋಣೆಯ ಎಲ್ಲ ವಸ್ತುಗಳು ಅತಿ ಸ್ಪಷ್ಟವಾಗಿ ನನಗೆ ಗೋಚರವಾಗುತ್ತಿದ್ದವು. ಆಗ

ಇದ್ದಕ್ಕಿದ್ದಂತೆ ಅದಾವುದೋ ಸ್ವರ್ಣಿಮ ಕಾಂತಿಯೊಂದು ಜಗ್ಗನೆ ಬೆಳಗಿ ಇಡೀ ಕೋಣೆಯನ್ನು ಪ್ರಕಾಶಮಯವಾಗಿಸಿತು. ನೋಡನೋಡುತ್ತಿದ್ದಂತೆ ಆ ಬಂಗಾರದ ಬೆಳಕಿನ ಮಧ್ಯೆ ಶ್ರೀ ಕೃಷ್ಣನು ಪ್ರಕಟಗೊಂಡನು. ಆ ಪ್ರಕಾಶದಿಂದಾಗಿ ನನಗೆ ಕೋಣೆಯ ಕಿಟಕಿಗಳಾಗಲೀ, ನಾನು ಕುಳಿತುಕೊಳ್ಳುವ ಹಾಸಿಗೆಯಾಗಲೀ ಕಾಣದಂತಾಯಿತು. ನೋಡುತ್ತೇನೆ, ಕೃಷ್ಣನು ಅವನ ಸರ್ವೇಸಾಮಾನ್ಯವಾದ ನೃತ್ಯದ ಉಡುಗೆಯನ್ನು ತೊಟ್ಟು ಸ್ವರ್ಣ ಪ್ರಕಾಶದ ಕೇಂದ್ರವಾಗಿ ನನ್ನೆದುರು ನಿಂತಿದ್ದಾನೆ. ಆ ಹೊಳೆಯುವ ಬೆಳಕಿನ ಮಧ್ಯೆ ಕೃಷ್ಣನು ನಾಟ್ಯವಾಡುತ್ತ ನಲಿಯುತ್ತಿದ್ದನು. ಈ ದರ್ಶನವು ಸುಮಾರು ಹದಿನೈದು ನಿಮಿಷಗಳ ಕಾಲ ಹೀಗೆಯೇ ಮುಂದುವರೆಯಿತು. ಕೊನೆಗೆ ಆಶೀರ್ವಚನವೆಂಬಂತೆ ನುಡಿದ ಕೃಷ್ಣನು ತಾನು ಈ ದಿನದ ಸಂಜೆಯ ದರ್ಶನ ಸಮಯದಲ್ಲಿ ಸಭಾಂಗಣದಲ್ಲಿ ಹಾಜರಿರುವೆನೆಂದೂ, ಆಗ ಅಲ್ಲಿ ನನಗೆ ಸ್ಥಳಾವಕಾಶವೇ ದೊರೆಯುವದಿಲ್ಲವೆಂದು ಚೋದ್ಯದಿಂದ ನುಡಿದನು. ಆಗ ನೋಡನೋಡುತ್ತಿದ್ದಂತೆ ನಾನು ದರ್ಶನ ಸಮಯದಲ್ಲಿ ಬಳಸುತ್ತಿದ್ದ ಕುರ್ಚಿಯು ನನ್ನ ಕೋಣೆಗೆ ಬಂದಿತು. ಕೃಷ್ಣನು ಆ ಕುರ್ಚಿಯನ್ನೇರಿದನು. ಅವನು ನೇತ್ರಗಳು ಚೇಷ್ಟೆಯಿಂದ ಮಿನುಗುತ್ತಿದ್ದವು.

ಆ ದಿನ ಸಂಜೆ ದರ್ಶನದ ಸಮಯಕ್ಕೆ ಸರಿಯಾಗಿ ನಾನು ಮೆಟ್ಟಿಲನ್ನಿಳಿದು ಕೆಳಕ್ಕೆ ಬಂದಾಗ ಸಭಾಂಗಣದಲ್ಲಿ ಯಾರೂ ಇರಕೂಡದೆಂದು ಮೊದಲೇ ಆಜ್ಞಾಪಿಸಿದ್ದೆ. ಏಕೆಂದರೆ ನಾನು ಸಭಾಂಗಣದ ವಾತಾವರಣದಲ್ಲಿ ಏಕಾಗ್ರತೆ ಮತ್ತು ಆತ್ಮದ ನಿಶ್ಚಲತೆಯನ್ನು ಸ್ಥಾಪಿಸಬಯಸಿದ್ದೆ. ಆದರೆ ಅಷ್ಟೊತ್ತಿಗಾಗಲೇ ಸುಮಾರು ಮೂವತ್ತು ಜನರು ಸಭಾಂಗಣವನ್ನು ಅಲಂಕರಿಸುವ ಕೆಲಸದಲ್ಲಿ ನಿರತರಾಗಿದ್ದರು. ಅವರ ಕೆಲಸದಲ್ಲಿರುವ ಉತ್ಸಾಹವನ್ನು ನೋಡುತ್ತಿದ್ದರೆ. ಆ ಮೂವತ್ತೂ ಜನರು ಅದಾವುದೋ ಅಜ್ಞಾತ ಶಕ್ತಿಯ ಕಂಪನದಿಂದಾಗಿ ಬಹು ಉತ್ಸುಕರಾಗಿದ್ದಂತೆ ಕಂಡುಬಂದಿತು. ಆದರೆ ನನ್ನ ಆಜ್ಞೆಯನ್ನೂ ಉಲ್ಲಂಘಿಸಿ ಅವರಷ್ಟೂ ಜನ ಸಭಾಂಗಣದಲ್ಲಿ ಸೇರಿದ್ದರಿಂದ ನಾನು ಸಹಜವಾಗಿಯೇ ಕೋಪಗೊಂಡಿದ್ದೆ. ಅಲ್ಲೇ ಪಕ್ಕದಲ್ಲಿದ್ದ ನನ್ನ ಕುರ್ಚಿಯನ್ನೆಳೆದುಕೊಂಡು ಅದರ ಮೇಲೆ ಕೂತ ನಾನು ಅಲ್ಲಿದ್ದವರೆಲ್ಲರನ್ನೂ 'ಇಲ್ಲಿಂದ ತೊಲಗಿರಿ' ಎಂದು ಗದರಿಸುವ ಮೊದಲೇ ಯಾರೋ ಒಬ್ಬರು ಬಂದು ನನ್ನ ತೊಡೆಯ ಮೇಲೆ ಮೆಡಲ್ಲುಗಳಿದ್ದ ಟ್ರೇಯನ್ನು ತಂದಿಟ್ಟು ಹಿಂದೆ ಸರಿದು ನಿಂತರು.

ಆದರೆ ಆಶ್ಚರ್ಯವೆಂಬಂತೆ ನೋಡನೋಡುತ್ತಿರುವಂತೆಯೇ ಅದಾವುದೋ ಅಗೋಚರ ಸಮ್ಮೋಹನಕ್ಕೆ ಒಳಗಾದಂತೆ ನನಗೆ ಸಭಾಂಗಣದಲ್ಲಿ ಯಾರೂ

ಇಲ್ಲವೇನೋ ಎಂಬಂತಹ ಏಕಾಂತತೆಯ ಅನುಭವವಾಯಿತು. ಆದರೆ ಅಸಲಿಗೆ ಅಲ್ಲಿ ನನ್ನ ಹೊರತಾದ ಉಳಿದ ಅಷ್ಟೂ ಜನರು ಮೆಡಲ್ಲುಗಳ ವಿತರಣೆಗಾಗಿ ಕುಳಿತಿದ್ದರಾದರೂ, ನನಗೆ ಮಾತ್ರ ಅಲ್ಲಿ ಪ್ರಶಾಂತತೆಯ ಆವರಣವು ಹೊದ್ದಿರುವಂತೆ ತೋರುತ್ತಿತ್ತು. ಇದ್ದಕ್ಕಿದ್ದಂತೆ ನನ್ನೊಳಗೆ ನಾನು ಎಲ್ಲರಾತ್ಮಗಳಲ್ಲಿರುವ ಸರ್ವಾಂತ–ರ್ಯಾಮಿಯಾಗಿರುವಂತೆ ಕಂಡಿತ್ತು. (ವಾಸ್ತವವಾಗಿ ನಾನು ಸರ್ವ ದೇಶ ಕಾಲದಲ್ಲಿ ಸರ್ವಾಂತರ್ಯಾಮಿಯಾಗಿರುವ ಪ್ರಜ್ಞೆಯನ್ನೇ ಹೊಂದಿರುವೆನು.) ನನಗೆ ಸಾಕ್ಷಾತ್ಕಾರಗಳಾದ ಸಂದರ್ಭಗಳಲ್ಲಿಯೂ ಸಹ ನನಗೆ ನನ್ನ ದೇಹದ ಭೌತಿಕ ಪ್ರಜ್ಞೆಯ ಅರಿವಿರುತ್ತಿತ್ತು. ಆದರೆ ಆ ದಿನ ಸಂಜೆಯೇಕೋ ನನಗೆ ನನ್ನ ದೈಹಿಕ ಕೇಂದ್ರದ ಅರಿವೇ ಇರಲಿಲ್ಲ. ನನ್ನ ಜಡ ಶರೀರವು ಪದಕಗಳನ್ನು ವಿತರಿಸುವ ಕಾರ್ಯದಲ್ಲಿ ನಿರತವಾಗಿದ್ದರೂ ನನ್ನ ಆಂತರ್ಯದ ಪ್ರಜ್ಞೆಯು ಮಾತ್ರ ಅನಂತದಲ್ಲಿಯೇ ಚರಿಸುತ್ತಿರುವಂತೆ ಭಾಸವಾಗುತ್ತಿತ್ತು. ಇತ್ತ ಪದಕಗಳ ವಿತರಣೆಯ ಕಾರ್ಯಕ್ರಮವು ತನ್ನ ಪಾಡಿಗೆ ಸಾಗುತ್ತಿತ್ತು. ನನ್ನ ಜಡ ಭೌತಿಕವು ಪದಕವನ್ನು ನೀಡುವ, ಅದನ್ನು ಸ್ವೀಕರಿಸುವ ಆನಂದವನ್ನು ತಾನೇತಾನಾಗಿ ಅನಿಭವಿಸುತ್ತಿತ್ತಾದರೂ ನನ್ನ ಮನೋಮಯವು ಅದರ ಅನುಭವಕ್ಕೆ ಸಾಕ್ಷಿಯಾಗಿರಲಿಲ್ಲ. ಏಕೆಂದರೆ ಆನಂದವನ್ನು ಅನುಭವಿಸಬೇಕಿದ್ದ ಮನವೂ ಸಹ ಆಂತರ್ಯದೊಡನೆ ಪಯಣಿಗನಾಗಿ ಅನಂತದೆಡೆಗೆ ಹೊರಟಿತ್ತು. ಆದರೂ ನನ್ನ ದೇಹವು ಮಾತ್ರ ವಿತರಣೆಯ ಕಾರ್ಯವನ್ನು ನಿರ್ವಿಘ್ನವಾಗಿ ಸಂಪನ್ನಗೊಳಿಸಿತ್ತು. ಕೊನೆಗೆ ಎಲ್ಲವೂ ಮುಗಿದ ಮೇಲೆ ನಾನು ನನ್ನ ಮೇಲಿನ ಕೋಣೆಗೆ ಬಂದಾಗಲೇ ನನ್ನ ಚೈತನ್ಯವು ಮರಳಿ ದೇಹವನ್ನು ಸೇರಿಕೊಂಡಿತ್ತು. ಆಗಲೇ ನನ್ನ ಪ್ರಜ್ಞೆಯು ಮರಳಿ ಜಾಗೃತಗೊಂಡಿತ್ತು.

ಶ್ರೀ ಅರವಿಂದರ ಸಾವಿತ್ರಿ ಮಹಾಕಾವ್ಯದ ಒಂದು ಸಾಲು ನನಗಾದ ಅಂದಿನ ಅನುಭವವನ್ನು ಸರಿಯಾಗಿ ವ್ಯಕ್ತಪಡಿಸುತ್ತದೆ: ಪರಮಾತ್ಮನ ಸನ್ನಿಧಿಯಿದ್ದಾಗ ವ್ಯಕ್ತಿಗತವಾದ ಅಸ್ತಿತ್ವಗಳು ಸಹ ಗೌಣವಾಗುತ್ತವೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 3 ಮಾರ್ಚ್ 1960**

## ಶ್ರೀ ಕೃಷ್ಣನ ಬೆಳಕು

ಬೆಳಕು ಕೆಲವು ಶಕ್ತಿಯ ಇರುವಿಕೆಯನ್ನು ಸೂಚಿಸುವ ಸಂಕೇತವಾಗಿ ಪ್ರತಿನಿಧಿಸಲ್ಪಡುತ್ತದೆ. ಸಾಮಾನ್ಯವಾಗಿ ಬಣ್ಣಗಳಿಂದ ಕೂಡಿದ ಬೆಳಕು ಅಂತಹ

ವಿಶೇಷ ಸಾಮರ್ಥ್ಯವನ್ನು ಪಡೆದಿರುತ್ತವೆ. ಉದಾಹರಣೆಗೆ, ಶ್ವೇತನೀಲ ವರ್ಣವು ಶ್ರೀ ಅರವಿಂದರನ್ನು ಇನ್ನೂ ಕೆಲವೊಮ್ಮೆ ಶ್ರೀ ಕೃಷ್ಣನ ಬೆಳಕನ್ನು ಸೂಚಿಸುತ್ತದೆ.

ಶ್ವೇತನೀಲವು ಶ್ರೀ ಕೃಷ್ಣನ ಹಾಗೂ ನನ್ನ ಬೆಳಕನ್ನು ಸೂಚಿಸಿದರೆ, ಗಾಢನೀಲ ವರ್ಣವು ಉನ್ನತ ಪ್ರಜ್ಞೆಯ ಬೆಳಕನ್ನು ಪ್ರತಿನಿಧಿಸುತ್ತದೆ.

ನೀಲ ವರ್ಣಗಳಲ್ಲಿ ಎರಡು ವಿಧಗಳಾದ ಶ್ವೇತನೀಲವು ಶ್ರೀ ಕೃಷ್ಣನದ್ದಾದರೆ, ಕಡುನೀಲ ವರ್ಣವು ಮನೋಮಯಕ್ಕಿಂತಲೂ ಉರ್ಧ್ವದಲ್ಲಿರುವ ಉಚ್ಚಮಾನಸದ ಸಂಕೇತವಾಗಿದೆ.

ನೀಲ ವರ್ಣವು ಅದಕ್ಕಿರುವ ನಿಖರವಾದ ಬೆಳಕು ಮತ್ತು ಬಣ್ಣಗಳ ಆಧಾರದ ಮೇಲೆ ಅದರ ಸ್ವಭಾವವು ಅವಲಂಬಿತವಾಗಿರುತ್ತದೆ. ಈಗ ಚಂದ್ರಕಾಂತಿಯಂತೆ ಹೊಳೆಯುವ ಶ್ವೇತನೀಲವು ಶ್ರೀ ಕೃಷ್ಣನನ್ನು ಅಥವಾ ಶ್ರೀ ಅರವಿಂದರನ್ನು ಸೂಚಿಸುತ್ತದೆ. ಇದು ಸಂಬುದ್ಧ ಮಾನಸವನ್ನು ಸಂಕೇತಿಸುತ್ತದೆ; ಕಡುನೀಲ ವರ್ಣವು ಉಚ್ಚಮಾನಸವನ್ನು ಸಂಕೇತಿಸುತ್ತದೆ; ಕೊನೆಯದಾಗಿ ನೇರಳೆ ಬಣ್ಣಕ್ಕೆ ಹತ್ತಿರವಾದ ನೀಲವರ್ಣವು ವೈಚಾರಿಕ ಮನವನ್ನು ಪ್ರತಿನಿಧಿಸುತ್ತದೆ.

ಕಡುನೀಲವು ಉಚ್ಚಮಾನಸದ್ದಾದರೆ, ಶ್ವೇತನೀಲವು ನಮ್ಮ ಮನದೊಳಗಿರುವ ಶ್ರೀ ಕೃಷ್ಣನ ಸನ್ನಿಧಿಯ ಸಂಕೇತವಾಗಿದೆ.

ಇನ್ನು ಹಲವು ತರಹದ ಕೃಷ್ಣನ ಬೆಳಕಿನ ಬಣ್ಣಗಳಿವೆ. ಉದಾಹರಣೆಗೆ ಇಂದ್ರನೀಲ, ನೇರಳೆ, ಕಡುನೀಲ ಇತ್ಯಾದಿ.., ಅವು ಪ್ರತಿಯೊಂದೂ ಬೇರೆಬೇರೆ ಸ್ತರಗಳನ್ನು ಪ್ರತಿನಿಧಿಸುವ ಸಂಕೇತಗಳಾಗಿವೆ.

ಇವುಗಳಲ್ಲಿ ಇಂದ್ರನೀಲವು ಅಧಿಮಾನಸದಲ್ಲಿ ಕೃಷ್ಣನ ಬೆಳಕನ್ನು ಪ್ರತಿನಿಧಿಸಿದರೆ, ನೇರಳೆಯು ಅಂತಸ್ಫುರಿತ ಮಾನಸವನ್ನು ಸಂಕೇತಿಸುತ್ತದೆ.

ಚಂದ್ರಕಾಂತಿಯನ್ನು ಬೀರುವ ಶ್ವೇತನೀಲವು ಕೃಷ್ಣನ ಬೆಳಕನ್ನು, ನೇರಳೆಯು ಭಕ್ತಿಯ ಪ್ರಾಧಾನ್ಯತೆಯನ್ನು, ಕಡುನೀಲವು ಭೌತಿಕ ಮನವನ್ನು, ಇಂದ್ರನೀಲವು ಉಚ್ಚಮಾನಸವನ್ನು ಪ್ರತಿನಿಧಿಸುತ್ತವೆ.

ಎಲ್ಲಾ ನೀಲವರ್ಣಗಳೂ ಕೃಷ್ಣನಿಗೆ ಸಂಬಂಧಿಸಿರುವ ಬೆಳಕೇ ಆಗಿರಬೇಕೆಂಬ ನಿಯಮವೇನಿಲ್ಲ. ಉದಾಹರಣೆಗೆ ನೀಲವರ್ಣವು ರಾಧೆಯ ಬೆಳಕನ್ನು ಸಂಕೇತಿಸುತ್ತದೆ. ತಿಳಿನೇರಳೆಯು ದೈವೀ ಅನುಗ್ರಹ ಮತ್ತು ಸಹಾನುಭೂತಿಯ ಬಣ್ಣವಾಗಿದೆ.

ತಿಳಿನೇರಳೆಯು ಉಪಕಾರ ಮತ್ತು ಸಹಾನುಭೂತಿಯನ್ನು ಸಂಕೇತಿಸಿದರೂ, ಅದು ಹೆಚ್ಚಾಗಿ ದೈವೀ ಕೃಪೆಯ ಮಟ್ಟದ ಅನುಭೂತಿಯೇ ಆಗಿರುತ್ತದೆ. ಹಿರಣ್ಮಯ ಪಾತ್ರೆಯಂತಿರುವ ಆ ದೈವೀ ಕೃಪೆಯು ಊರ್ಧ್ವ ಲೋಕಗಳಿಂದ ಇಳೆಗೆ ತನ್ನ ಆಧ್ಯಾತ್ಮಿಕ ಪ್ರಜ್ಞೆಯನ್ನು ನಿರಂತರವಾಗಿ ಹರಿಸುತ್ತಲೇ ಇರುತ್ತದೆ. ಈ ಹಿರಣ್ಮಯ ಪಾತ್ರೆಯನ್ನು 'ಋತಚೇತನ' ಅಥವಾ 'ಋತಂಬರ ಪ್ರಜ್ಞೆ' ಎಂದು ಅರ್ಥೈಸಿಕೊಳ್ಳಬಹುದು.

ಈ ತಿಳಿನೇರಳೆ ಬಣ್ಣವು ದೈವೀ ಅನುಗ್ರಹವನ್ನು ಸಂಕೇತಿಸುವದರಿಂದ ಇದನ್ನೂ ಕೃಷ್ಣನ ವರ್ಣವೆಂದೇ ತಿಳಿದುಕೊಳ್ಳಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/126–28 – ಶ್ರೀ ಅರವಿಂದರು**

ಕೃಷ್ಣ ಲೀಲೆ: ಪ್ರಗತಿಯ ತೆರೆಮರೆಯಲ್ಲಿದ್ದುಕೊಂಡು ಜಗತ್ತನ್ನು ಉದ್ಧರಿಸಲಿರುವ ವಿಶ್ವನಿಯಾಮಕವಾದ ಒಂದು ಶಕ್ತಿ.

ಭೌತಿಕದಲ್ಲಿ ಕೃಷ್ಣ ಲೀಲೆ: ಸೌಂದರ್ಯ, ಪ್ರೇಮ ಆನಂದಗಳ ಮೂಲಕ ಭೌತಿಕತೆ–ಯನ್ನು ಪ್ರಗತಿಯ ಉತ್ತುಂಗದೆಡೆ ಕರೆದೊಯ್ಯಲಿರುವ ಶಕ್ತಿ.

ಜಡತ್ವದಲ್ಲಿ ಕೃಷ್ಣ ಲೀಲೆ: ಅವತಾರಗಳ ಮೂಲಕ ಇಳೆಗಿಳಿದು ಭುವಿಯಲ್ಲಿ ದೈವೀ ಪ್ರಪಂಚವನ್ನು ಸ್ಥಾಪಿಸಲಿರುವ ಶಕ್ತಿ.

*

**ರಾಧೆ**

ರಾಧೆಯೆಂಬುವಳೊಬ್ಬಳು ಈ ಭೂಮಿಯ ಮೇಲೆ ಬದುಕಿದ್ದಳೇ ಎಂಬ ಪ್ರಶ್ನೆಗೆ ನಿಖರವಾದ ಉತ್ತರವನ್ನು ಕೊಡಬಲ್ಲಿರಾ? ಅವಳು ಇಲ್ಲವೆಂದು ಸಾಬೀತುಪಡಿಸಲು ಸಂಪುಟಗಟ್ಟಲೆ ವಾದಗಳನ್ನು ಮಂಡಿಸಬಹುದು.

ಆದರೆ ವಾಸ್ತವವಾಗಿ ರಾಧೆಯು ನಿಜವಾಗಿಯೂ ಬದುಕಿದ್ದಳು. ಹಾಗೂ ಅವಳು ಇನ್ನೂ ಬದುಕಿಯೇ ಇದ್ದಾಳೆ.

ರಾಧೆಯ ಪ್ರಜ್ಞೆಯೆಂಬುದು ದೈವೀ ಚೈತನ್ಯದೊಡನೆ ಪರಿಪೂರ್ಣವಾದ ಬಾಂಧವ್ಯವನ್ನು ಸಂಕೇತಿಸುವ ಪ್ರತಿಮೆಯಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/14–15**

## ನೀಲಕೃಷ್ಣ (ನೀಲಮೇಘ ಶ್ಯಾಮ)

ನೀವು ಶುಕ್ರ ಗ್ರಹವನ್ನು ನೋಡಿದರೆ ಅದರ ಸುತ್ತಲಿನ ಹಸಿರು ಬಣ್ಣದ ವೃತ್ತಾಕಾರದ ಗೋಳವನ್ನು ಕಾಣಬಹುದು. ಅದೇನಿರಬಹುದು ಎಂದು ಎಂದಾದರೂ ಯೋಚಿಸಿರುವಿರಾ? ಅದು ಶುಕ್ರನ ದಿವ್ಯ ತೇಜಸ್ಸಿನ ಪ್ರತಿಫಲನವೇ ಆಗಿದೆ. ಹಾಗಾಗಿ ಕೆಲವೊಂದು ವರ್ಣಗಳು ವಾಸ್ತವವಾಗಿ ಕೆಲವು ಪ್ರತಿಮೆಗಳನ್ನು ಸೂಚಿಸುವ ಸಂಕೇತಗಳಾಗಿವೆ ಎಂಬುದನ್ನು ನಾವು ಮನಗಾಣಬಹುದು. ಒಂದು ವೇಳೆ ನೀವು ನಿಮ್ಮ ಯೋಗ ಮಾರ್ಗದಲ್ಲಿ ನೀಲ ಅಥವಾ ನೇರಳೆ ಬಣ್ಣದ ಬೆಳಕನ್ನು ಕಂಡಿದ್ದೇ ಆದಲ್ಲಿ ಅದು ಖಂಡಿತವಾಗಿಯೂ ಶ್ರೀ ಕೃಷ್ಣನ ದರ್ಶನದ ಮುನ್ಸೂಚನೆ ಎಂಬುದನ್ನು ಅರಿತುಕೊಳ್ಳಿ. ಏಕೆಂದರೆ ಆ ಎರಡೂ ವರ್ಣಗಳು ಶ್ರೀ ಕೃಷ್ಣನನ್ನೇ ಪ್ರತಿನಿಧಿಸುತ್ತವೆ. ಮುಖ್ಯವಾಗಿ ನೀಲ ವರ್ಣವು ಕೃಷ್ಣನ ದಿವ್ಯಕಾಂತಿಯ ಬೆಳಕೇ ಆಗಿರುವದರಿಂದ. ಆ ವರ್ಣವು ಕೃಷ್ಣನ ಸಾಕ್ಷಾತ್ಕಾರವನ್ನು ಸೂಚಿಸಲಿರುವ ಪೂರ್ವಭಾವಿ ಸಂಕೇತ–ವಾಗಿರುವದರಿಂದ. ನಿಮ್ಮ ಸಾಧನಾ ಮಾರ್ಗದಲ್ಲಿ ನೀವು ಈ ನೀಲ ವರ್ಣದ ಬೆಳಕನ್ನು ಆಗಾಗ ಕಾಣುತ್ತಿದ್ದಿರೆಂದಾದರೆ ಆದಷ್ಟು ಬೇಗ ನಿಮಗೆ ಕೃಷ್ಣ ದರ್ಶನವು ಲಭಿಸಲಿದೆ ಎಂದೇ ಅರ್ಥ. ಹಾಗಾಗಿಯೇ ಕೃಷ್ಣನನ್ನು ನೀಲ ವರ್ಣದ ಬಾಲಕೃಷ್ಣನೆಂದೂ, ನೀಲಮೇಘ ಶ್ಯಾಮನೆಂದೂ ಕರೆಯುವರು. ಹಾಗೆಂದ ಮಾತ್ರಕ್ಕೆ ಐತಿಹಾಸಿಕವಾದ ಒಂದು ಕಾಲಘಟ್ಟದಲ್ಲಿ ಬೃಂದಾವನ, ಮಥುರಾ ಹಾಗೂ ದ್ವಾರಕಾ ನಗರಗಳಲ್ಲಿ ತನ್ನ ಭೌತಿಕ ಶರೀರದೊಂದಿಗೆ ನೆಲೆಸಿದ್ದ ಕೃಷ್ಣ ಪರಮಾತ್ಮನು ವಾಸ್ತವವಾಗಿ ನೀಲ ವರ್ಣದವನಾಗಿದ್ದನೆಂದಾಗಲೀ, ಕಪ್ಪು ಅಥವಾ ಕೃಷ್ಣ ವರ್ಣದವನಾಗಿದ್ದನೆಂದಾಗಲೀ ಅರ್ಥವಲ್ಲ. ಬದಲಾಗಿ ನೀಲ–ನೇರಳೆ ವರ್ಣವು ಕೃಷ್ಣನ ಆತ್ಮದಿಂದ ಹೊರಸೂಸುವ ಒಂದು ದೈವೀ ಕಾಂತಿಯ ಸಂಕೇತವಾಗಿದೆ ಎಂದು ಹೇಳಬಹುದು. ಶ್ರೀಮಾತೆಯವರು ಹೇಳುವಂತೆ ಅವರು ಯಾವಾಗೆಲ್ಲಾ ಕೃಷ್ಣನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾರೋ, ಆವಾಗೆಲ್ಲ ಈ ನೀಲ–ನೇರಳೇ ವರ್ಣದ ಬೆಳಕು ಅವರೆದುರು ಸುಳಿದಂತಾಗುತ್ತದೆ. ಹಾಗೂ ಕೃಷ್ಣನ ಸನ್ನಿಧಿಯನ್ನು ಸೂಚಿಸುವ ಈ ವರ್ಣವು ಇಡೀ ಆಶ್ರಮವನ್ನು ವ್ಯಾಪಿಸಿ ಅದನ್ನು ಸದಾ ರಕ್ಷಿಸುತ್ತಿದೆ ಎಂಬುದಂತೂ ಸತ್ಯ. ಇದರ ಪ್ರಕಾರ ದೈವತಗಳು ತಮ್ಮ ಸ್ತರದಿಂದ ಭೌತಿಕಕ್ಕಿಳಿದು ದರ್ಶನನ್ನೀಯುವ ಸಂದರ್ಭದಲ್ಲಿ ಆಯಾ ದೈವತಗಳ ಸಾಂಕೇತಿಕ ವರ್ಣದ ಬೆಳಕು ಪೂರ್ವಭಾವಿಯಾಗಿ ಸಾಧಕನ ಅಂತಃಚಕ್ಷುವಿಗೆ ಗೋಚರವಾಗುತ್ತದೆ. ಹಾಗೂ ಆ ವರ್ಣದ ಬೆಳಕು ತೋರಬೇಕಾದರೆ ಅದರ ಅಸ್ತಿತ್ವದ ತುಣುಕು ನಮ್ಮಲ್ಲಿ

ಮೊದಲಿನಿಂದಲೇ ಇದೆ ಎಂದಂತಾಯಿತು. ಅದು ಈಗ ನಮ್ಮ ಆಂತರ್ಯದ ಮೂಲಕ ಹೊರಬಂದು ನಮ್ಮ ಸುತ್ತಲಿನ ವಾತಾರಣವನ್ನು ಸೇರಿಕೊಳ್ಳುತ್ತಿದೆ ಎಂದುಅರ್ಥ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/157**

## ಮಾನವತೆಯಲ್ಲಿ ದೈವೀಕತೆಯ ಹಸ್ತಕ್ಷೇಪ

ಕಳೆದುಹೋದ ಕಾಲಘಟ್ಟದಲ್ಲಿ ಹಿಂದೊಮ್ಮೆ ಘಟಿಸಿಹೋದ ಮಹಾಭಾರತವೆಂಬ ಮಹಾಯುದ್ಧದಲ್ಲಿ ಶ್ರೀ ಕೃಷ್ಣನ ಪಾತ್ರವು ಭೌತಿಕಕ್ಕಿಂತಲೂ ಹೆಚ್ಚಾಗಿ ಒಂದು ವಿಶಿಷ್ಟವಾದ ಸಂಕೇತವಾಗಿ ನಿರ್ವಹಿತವಾಗಿದೆ. ಕೃಷ್ಣನು ಆ ಮಹಾನಾಟಕದ ನಾಯಕನಲ್ಲ. ಬದಲಾಗಿ ಇಡೀ ನಾಟಕವನ್ನು ನಡೆಸಲಿರುವ ಗುಪ್ತ ಸೂತ್ರಧಾರನೂ, ರಹಸ್ಯ ಮಾರ್ಗದರ್ಶಕನೂ ಆಗಿ ಎಲ್ಲವನ್ನೂ ನಡೆಸಿರುವವನು. ಆ ಘಟನೆಯು ಕೇವಲ ಒಬ್ಬನ ವ್ಯಕ್ತಿಗತವಾದ ಕಥೆಗೆ ಸಂಬಂಧಿಸಿದ್ದಲ್ಲ. ಬದಲಾಗಿ ಒಂದಿಡೀ ರಾಷ್ಟ್ರದ ಜನಾಂಗದ ಆಂತರ್ಯದ ಕಥಾನಕವಾಗಿದೆ. ಈ ಪ್ರಕರಣದಲ್ಲಿ ಕೆಲವರು ಶ್ರೀ ಕೃಷ್ಣನ ಸಹಾಯಕ ಅಂಶಗಳಾಗಿ ಕಂಡುಬಂದಿದ್ದು ಅವರಿಗೆ ಕೃಷ್ಣನೇ ಸಾರಥಿ; ಇನ್ನೂ ಕೆಲವರು ಕೃಷ್ಣನು ವಿರೋಧಕ ಅಂಶಗಳಾಗಿ ಅವನನ್ನು ಸದಾ ದ್ವೇಷಿಸುವ ಅಂಶಗಳಾಗಿ ತೋರಿಬಂದಿದ್ದು ಅವರಿಗೆ ಕೃಷ್ಣನೇ ಪರಮ ವೈರಿಯಾಗಿದ್ದು, ಕೃಷ್ಣನೇ ಅವರಂತ್ಯಕ್ಕೂ–ಸಂಹಾರಕ್ಕೂ ಮೂಲಕಾರಣನಾಗಿರುವನು. ಅಷ್ಟೇ ಅಲ್ಲದೇ ದುಷ್ಟರ ಮನ ಪರಿವರ್ತಿಸಿ ಅವರಲ್ಲಿ ಪರಮ ಸದ್ಗುಣವನ್ನು ತುಂಬುವ ಸಭ್ಯತೆಯ ಮೂಲವೂ ಆಗಿರುವನು. ಕೃಷ್ಣನ ಸಾಮಿಪ್ಯಕ್ಕೆ ಬಂದ ಪ್ರತಿಯೋರ್ವರಿಗೂ ಆತ ಸಲಹೆಗಾರನಾಗಿ, ಸಹಾಯಕನಾಗಿ, ಸ್ನೇಹಿತನಾಗಿ ಪೊರೆದಿದ್ದಾನೆ. ಅಂತಹವರು ಶತ್ರುಗಳ ಮಧ್ಯದಲ್ಲಿ ಸಿಕ್ಕಿ ನರಳಾಡುವಾಗ, ಅಗ್ನಿಪರೀಕ್ಷೆಯಂತಹ ದುಸ್ಥಿತಿಗೆ ಒಳಗಾಗಿರುವಾಗ ಕೃಷ್ಣನು ಸ್ವತಃ ದರ್ಶನವನ್ನಿತ್ತು ಸಹಕರಿಸದಿದ್ದರೂ ಅವನ ಅಭಯ ಹಸ್ತವೇ ಅವರನ್ನು ಅವರ ಕಷ್ಟಗಳಿಂದ ಪಾರುಮಾಡಿದೆ. ಹಾಗೆಂದೂ ಕೃಷ್ಣನ ಸಮೀಪವರ್ತಿಗಳಾದ ಪ್ರತಿಯೋರ್ವರೂ ತಮ್ಮ ಕಷ್ಟಗಳನ್ನು ಕೃಷ್ಣನೇ ಪರಿಹರಿಸಲಿ ಎಂದು ಜಡತ್ವದಿಂದ ಕಾಲಹರಣ ಮಾಡಿರಲಿಲ್ಲ. ಉದಾಹರಣೆಗೆ ಕೃಷ್ಣನ ಪರಮಾಪ್ತ ಮಿತ್ರನಾದ ಅರ್ಜುನನಿಗೆ ಕೃಷ್ಣನ ಸಂಪೂರ್ಣ ಸಹಕಾರದ ಅವಶ್ಯಕತೆ ಇತ್ತಾದರೂ, ಅವನೆಂದಿಗೂ ಅದನ್ನು ಬಯಸಿದವನಲ್ಲ. ಬದಲಾಗಿ ಅರ್ಜುನನಿಗೆ ಬೇಕಿರುವುದು, ಕೃಷ್ಣನ ಶಕ್ತಿಯ ಸಾಂಗತ್ಯ, ಅವನ ಪ್ರಜ್ಞಾಯುತ

ಸಲಹೆ, ಅವನ ಪರಮ ಪಾವನವಾದ ದಿವ್ಯ ಪ್ರೇಮ. ಅಷ್ಟೇ ಅವನಿಗೆ ಬೇಕಿರುವುದು. ಅವುಗಳನ್ನು ಅವನು ಪಡೆದಿದ್ದನೂ ಕೂಡ. ಆದರೆ ಕೃಷ್ಣನ ನೇರ ಸಾಂಗತ್ಯದಿಂದಾಗಿ ಅಹಮಿಕೆಯ ಪರಿಧಿಯೊಳಗೆ ಸಾಗಿದ್ದ ಅರ್ಜುನನು ಕೃಷ್ಣನ ದಿವ್ಯ ಸ್ವಭಾವವನ್ನು ಅರಿಯದೆ ಕೇವಲ ಭಕ್ತಿಯಿಂದ ಅವನನ್ನು ಆರಾಧಿಸಿದ್ದನು. ಪ್ರತಿಯೋರ್ವರಂತೆ ಅವನೂ ಕೃಷ್ಣನ ಸಲಹೆಗಳನ್ನು ಅದರ ಅಂತರಾರ್ಥದ ಮೂಲಕವಲ್ಲದೇ ಕೇವಲ ಭೌತಿಕಾರ್ಥದಿಂದಲೇ ಸ್ವೀಕರಿಸಿ ಅದರಂತೆ ನಡೆದಿದ್ದನು. ಆದರೆ ಕುರುಕ್ಷೇತ್ರದ ರಣಾಂಗಣದ ಮಧ್ಯೆ ಅವನಿಗೆ ಕೃಷ್ಣನ ನೈಜ ದರ್ಶನವು ಲಭಿಸಿತ್ತು. ಆದರೆ ಕೊನೆಯವರೆಗೂ ಕೃಷ್ಣನು ತನ್ನ ಭೌತಿಕ ರೂಪದಿಂದಲೇ ಅರ್ಜುನನಿಗೆ ಸಾರಥ್ಯವನ್ನು ವಹಿಸಿ ಧರ್ಮಕ್ಕೆ ಜಯವು ಲಭಿಸುವಂತೆ ಗೈದನು.

ಹೀಗೆ ಕೃಷ್ಣನು ತನ್ನ ಭೌತಿಕ ರೂಪದಿಂದ ಮಾನವತೆಯಲ್ಲಿ ದಿವ್ಯತೆಯ ಹಸ್ತಕ್ಷೇಪದ ಸಂಕೇತವಾಗಿ ಧರ್ಮ ಸ್ಥಾಪನೆಯನ್ನು ಮಾಡಿದನು. ನಾವು ಸದಾ ನಮ್ಮ ಅಹಮಿಕೆ ಮತ್ತು ಅಜ್ಞಾನದ ನೆಲೆಯಿಂದಲೇ ನಮ್ಮ ಸಾಧನೆಯನ್ನು ಮಾಡುತ್ತಿರುವೆವು ಎಂಬ ಭ್ರಾಂತಿಯಲ್ಲಿದ್ದೇವೆ. ಮತ್ತು ನಮ್ಮ ಈ ಕಾರ್ಯಕ್ಕೆ ತಕ್ಕ ಪ್ರತಿಫಲವು ದೊರಕಿದಾಗ ಅದರ ಹಿಂದಿರುವ ಸಹಾಯಕ ಶಕ್ತಿಯ ಕುರಿತು ಯೋಚಿಸುವುದೇ ಇಲ್ಲ. ನಮ್ಮ ಸಾಧನೆಗೆ ಪೂರಕವಾಗಿರುವ ಸಾಮರ್ಥ್ಯವು ಮಾನವ ನಿರ್ಮಿತವಾದ ಜ್ಞಾನ, ಆಕಾಂಕ್ಷೆ, ಬಲಾಧಾರಿತವಾದ ಭೌತಿಕ ಚಿಲುಮೆಯಿಂದಲೇ ಲಭಿಸಿರುತ್ತದೆ ಎಂದು ತಪ್ಪಾಗಿ ಅರ್ಥೈಸಿಕೊಳ್ಳುತ್ತೇವೆ. ಆದರೆ ಕೊನೆಗೊಮ್ಮೆ ಆ ಶಕ್ತಿ ಸ್ಥಾವರದ ಮುಂದೆ ನಿಂತ ನಮಗೆ ಅದರ ತೆರೆಮರೆಯಲ್ಲಿರುವ ದಿವ್ಯತೆಯ ಅನಾವರಣವಾಗುವವರೆಗೂ ನಮ್ಮ ಅಜ್ಞಾನ–ಅಹಮಿಕೆಗಳು ನಮ್ಮಿಂದ ದೂರವಾಗುವದಿಲ್ಲ. ಯಾವಾಗ ಆ ಪರಮ ದಿವ್ಯತೆಯು ತನ್ನ ಮುಸುಕನ್ನು ಸರಿಸಿ ಪ್ರಕಟವಾಗುತ್ತದೆಯೋ ಆಗ ಮಾತ್ರ ನಮ್ಮ ಅಜ್ಞಾನದ ಕಟ್ಟಡವು ಬಿದ್ದುಹೋಗುತ್ತದೆ. ಅಲ್ಲಿ ಜ್ಞಾನದ ಭವ್ಯ ಸೌಧವು ತಲೆಯೆತ್ತುತ್ತದೆ. ಆ ಜ್ಞಾನಧಾರೆಯು ನಮ್ಮ ಭೌತಿಕ ಸಾಧನೆಯಲ್ಲಿ ಮಾತ್ರವಲ್ಲದೇ ನಮ್ಮ ಆಂತರ್ಯದ ಅಭಿಜ್ಞತೆಯಲ್ಲಿಯೂ ಪ್ರಭೃತಿಯನ್ನು ವಹಿಸುತ್ತದೆ. ನಮಗೆಲ್ಲ ಪ್ರಪಂಚದ ಜಡ ಭವಿಷ್ಯದ ಚಿಂತೆ ಹಾಗಾಗಿ ನಾವು ಅದನ್ನು ನಮ್ಮದೇ ಆದ ಮುಸ್ಸಂಜೆಯ ನಸು ಬೆಳಕಿನಂತಹ ಅಸ್ಪಷ್ಟ ದೃಷ್ಟಿಕೋನದಿಂದಲೇ ನೋಡಬಯಸುತ್ತೇವೆ. ಇದು ಪೂರ್ಣ ರೂಪದ ದರ್ಶನವನ್ನು ಕೊಡಲಾಗದಿದ್ದರೂ, ನಮ್ಮ ಮುನ್ನಡೆಗೂ ಕೊಂಚ ಮಾತ್ರ ಮುಂದಿರುವ ಕಲ್ಪನೆಯನ್ನು ತೋರಿಕೊಳ್ಳಬಹುದು. ಆದರೆ ಗೀತೆಯ ಸಾರವು

ನಮಗೆ ಲೋಕದ ಆದ್ಯಂತದ ಸ್ಪಷ್ಟ ಚಿತ್ರಣವನ್ನೂ ಸಹ ದೊರಕಿಸಿ ಕೊಟ್ಟಿದೆ. ಅದು ಬೇರೆಯಾವ ಮೂಲವೂ ಕೊಡಲಾರದಂತಹ ಜ್ಞಾನ–ಬಲಗಳನ್ನು ಕರುಣಿಸುತ್ತದೆ. ಗೀತೆ ಮಾತ್ರವಲ್ಲ ಮಹಾಭಾರತದ ಇತರ ಭಾಗಗಳಲ್ಲೂ ಎಲ್ಲೆಲ್ಲಿ ಕೃಷ್ಣನ ದರ್ಶನವಿದೆಯೋ ಅಲ್ಲೆಲ್ಲ ವೈಶ್ವೀಕ ಸತ್ಯದ ಹಿಂದೆ ಮರೆಯಾಗಿರುವ ಪ್ರತಿಯೊಂದೂ ಜ್ಞಾನವನ್ನು, ಅದರ ಪ್ರಭೃತಿಯಾದ ದೈವತವನ್ನು ವಿಶಿಷ್ಟವಾಗಿ ಪರಿಚಯಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/17–19**

## ಲೀಲಾಮಯನಾದ ಶ್ರೀ ಕೃಷ್ಣ

ಅಗಣಿತವೂ ಅನಂತವೂ ಆದ ಈ ಬ್ರಹ್ಮಾಂಡವು ಜಗನ್ನಾಟಕ ಸೂತ್ರಧಾರನ ಅಭಿವ್ಯಕ್ತಿಯಾಗಿದೆ ಎಂದು ಅಥವಾ ಈ ಇಡೀ ವಿಶ್ವವು ಅವನ ಲೀಲೆಯನ್ನು ಪ್ರಚುರಪಡಿಸುತ್ತಿರುವ ನಾಟಕ ರಂಗವಾಗಿದೆ ಎಂದು ಅರ್ಥೈಸಿಕೊಂಡಾಗ ಮಾತ್ರ ನಿಮ್ಮ ಪ್ರಜ್ಞೆಯಲ್ಲಿ ಯೋಗದ ಅಂತಿಮ ಸ್ತರವು ಜಾಗೃತಗೊಳ್ಳುವುದು. ಆ ಹಂತದಲ್ಲಿ ನಮ್ಮ ಅಸ್ತಿತ್ವಕ್ಕೆ ಮೂಲಕಾರಣವಾಗಿರುವ ದುಃಖಿ ಆತ್ಮದ ಕುರಿತಾದ ಜಡ ಚಿಂತನೆಗಳು ನಮ್ಮಿಂದ ದೂರವಾಗಿ ನಮ್ಮ ಇಡೀ ಚೈತನ್ಯವು ಆ ಋತಂಬರ ಪ್ರಜ್ಞೆಯಲ್ಲಿ ಒಂದಾಗಿ ಬಿಡುತ್ತದೆ. ಒಂದೊಮ್ಮೆ ಆ ಆನಂದಮಯದ ಅನುಭವಕ್ಕೆ ಒಳಗಾಗಿದ್ದೇ ಆದಲ್ಲಿ, ಆ ಸಾಕ್ಷಾತ್ಕಾರವನ್ನು ನೀವೆಂದೆಂದಿಗೂ ಮರೆಯಲಾರಿರಿ. ಏಕೆಂದರೆ ಆ ಒಂದೇ ಕಾಲದಲ್ಲಿ ಶ್ರೀ ಕೃಷ್ಣನು 'ಅವ್ಯಕ್ತೋ ವ್ಯಕ್ತೋ ಪರಾ' ಎಂಬಂತೆ ವಿಶ್ವದ ಸಕಲ ವ್ಯಕ್ತ–ಅವ್ಯಕ್ತ ಚೇತನಗಳಲ್ಲಿ ತನ್ನ ಇರುವಿಕೆಯನ್ನು ಪ್ರಚುರಪಡಿಸಿರುತ್ತಾನೆ. ಪ್ರತಿಯೋರ್ವ ದುಃಖಿ ಆತ್ಮದ ಹಿಂದೆ ಅಸತ್ ಎಂಬ ಶೂನ್ಯ ಪರಿಭಾವವಿದ್ದು, ಅದನ್ನು ಬೌದ್ಧ ದಾರ್ಶನಿಕರು 'ನ್ಯಾಮ್' ಎಂದು ಕರೆಯುತ್ತಾರೆ. ಆ ಅಸತ್‌ನ ಹಿಂದೆ ಪರಾತ್ಪರ ಪುರುಷನ ಸನ್ನಿಧಾನವಿದೆ. ಈ ಇಡೀ ವಿಶ್ವವನ್ನು ತನ್ನ ಸ್ವ–ಅಸ್ತಿತ್ವದಿಂದಲೇ ಸೃಷ್ಟಿಸಿರುವ ಆ ಪರಾತ್ಪರ ಪುರುಷನು ಅದನ್ನು ಕ್ಷರ–ಅಕ್ಷರ, ಅಂತರ–ಸಂತರ, ಶಿವ–ನಾರಾಯಣಗಳೆಂಬ ದ್ವಿತ್ವರೂಪಿಯಾಗಿ ನಿಯಮಿಸಿದ್ದಾನೆ. ಹೀಗೆ ಸಕಲವನ್ನು ಸೃಜಿಸಿ–ಕಾಯುವ ಲೀಲಾಮಯನಾದ ಕೃಷ್ಣನು ತನ್ನ ವಿದ್ವತ್ತಿನ ಮುಖೇನ ಇಡೀ ವಿಶ್ವವನ್ನು ಚೈತನ್ಯವಾಗಿರಿಸಿದ್ದಾನೆ. ಹಾಗೂ ತನ್ನ ದಿವ್ಯ ಶಕ್ತಿ–ದಿವ್ಯಾನಂದ–ದಿವ್ಯ ಸೌಂದರ್ಯಗಳ ಮೂಲಕ ಈ ಅನಂತ ವಿಶ್ವವನ್ನು ತನ್ನ ನಾಟಕ ರಂಗವನನ್ನಾಗಿಸಿಕೊಂಡು ನಟಿಸಿ–ನಾಟ್ಯವಾಡುತ್ತಾನೆ.

ಈ ಇಡೀ ಪ್ರಪಂಚವು ಸತ್–ಚಿತ್–ಆನಂದಗಳೆಂಬ ಪರಮ ಪುರುಷನ ಅಸ್ತಿತ್ವ–ಜ್ಞಾನ–ಆನಂದಗಳ ಲೀಲೆಯಾಗಿದೆ. ಹಾಗಾಗಿ ಇದು ಕೇವಲ ಜಡವಲ್ಲ, ಬರಿಯ ಭೌತಿಕವಲ್ಲ ಬದಲಾಗಿ ಇದು ದಿವ್ಯ ಪ್ರಜ್ಞೆಯ ಒಂದು ಭಾಗವಾಗಿದೆ ಎಂಬ ಈ ಸತ್ಯವು ನಿಮ್ಮ ಪ್ರಜ್ಞೆಯಲ್ಲಿ ಜಾಗೃತಗೊಳ್ಳುತ್ತದೆ. ಗುಣಗಳು ಎಂಬುದು ಇಂದ್ರಿಯ ಜ್ಞಾನದಿಂದ ಗ್ರಹಿಸುವ ಜ್ಞಾನವಾಗಿದ್ದು, ಘನತೆ ಎಂಬುದು ಗುಣ, ಸಂಹತಿ ಮತ್ತು ಧೃತಿಯ ಸಮಗ್ರ ಶಾಶ್ವತ ಸಂಯೋಜನೆಯಾಗಿದೆ. ಈ ಒಟ್ಟು ಸಿದ್ಧಾಂತವು ಅನ್ನ–ಪ್ರಾಣ–ಮನಕ್ಕೂ ಮೀರಿದ ಸಚ್ಚಿದಾನಂದವೆಂದ ಆನಂದ ನಿಲಯದಲ್ಲಿ ನೆಲೆಸಿದ ವಿಶ್ವ ನಾಟಕದ ಸೂತ್ರಧಾರನೂ, ಅನಂತ ಗುಣ ಸೋಪಾನನೂ ಆದ ಶ್ರೀ ಕೃಷ್ಣನ ಲೀಲೆಯಾಗಿದೆ. ಯಾವಾಗ ನಾವು ಈ ಸತ್ಯವನ್ನು ಅರಿತುಕೊಳ್ಳುತ್ತೇವೆಯೋ ಆಗ ಈ ಅಮರವೂ–ಅಮೃತಮಯವೂ ಆದ ಈ ಲೋಕದಲ್ಲಿ ಭಯ, ದುಃಖ, ಪಾಪ, ನೋವು, ಕಲಹಗಳಿಂದ ಮುಕ್ತರಾಗಿ, ನಮ್ಮೊಳಗೆ ಉಪನಿಷತ್ತಿನ ಸತ್ಯವು ಪ್ರಕಟಗೊಳ್ಳುತ್ತದೆ.

ಈಶೋಪನಿತ್ತಿನ ವ್ಯಾಖ್ಯಾನ: "ಬ್ರಹ್ಮಾನಂದವನ್ನು ಪಡೆದವನಿಗೆ ಜಗತ್ತಿನ ಬೇರಾವ ಶಕ್ತಿಯ ಭಯವೂ ಇರುವದಿಲ್ಲ."

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/76–77 – ಶ್ರೀ ಅರವಿಂದರು**

## ಪರಮಾತ್ಮನ ಅವತಾರಿಯಾಗಿ ಶ್ರೀ ಕೃಷ್ಣ

**– ಅನು: ನಾಗಜ್ಯೋತಿ ಮಾನ್ವಿ**

**ಐತಿಹಾಸಿಕ ಕೃಷ್ಣ**

ಕೃಷ್ಣನ ಐತಿಹಾಸಿಕತೆಯು ಆಧ್ಯಾತ್ಮಿಕ ದೃಷ್ಟಿಯಿಂದ ಕಡಿಮೆ ಮಹತ್ವದ್ದಾಗಿದೆ. ಹಾಗೂ ಅತ್ಯವಶ್ಯಕವೇನಲ್ಲ, ಆದರೆ ಅದರದೇ ಆದ ಗಣನೆ ಯೋಗ್ಯ ಮೌಲ್ಯವಿದೆ. ನನ್ನ ತಿಳುವಳಿಕೆಯ ಪ್ರಕಾರ ಶ್ರೀ ಕೃಷ್ಣನು ಕೇವಲ ದಂತಕಥೆ ಅಥವಾ ಕಾವ್ಯಾತ್ಮಕ ಸೃಷ್ಟಿಯಲ್ಲ, ಆತನು ಪೃಥ್ವಿಯ ಮೇಲಿದ್ದು ಭಾರತದ ಭೂತ ಕಾಲದಲ್ಲಿ ತನ್ನದೇ ಪಾತ್ರ ವಹಿಸಿದ್ದನು. ಎರಡು ನಿಜಾಂಶಗಳು ಸ್ಪಷ್ಟವಾಗಿ ತಿಳಿಯುತ್ತವೆ. ಅದೇನೆಂದರೆ, ಈತರನನ್ನು ಪ್ರಮುಖ ಆಧ್ಯಾತ್ಮಿಕ ಜ್ಞಾನದ ಬಗ್ಗೆ ಒಂದು ಉಪನಿಷತ್ತಿನಲ್ಲಿ ನಮೂದಿಸಲಾಗಿದೆ. ಮತ್ತು ಸಾಂಪ್ರದಾಯಿಕವಾಗಿ ಆತನನ್ನು ದೈವೀ ಮಾನವನೆಂದು ಪರಿಗಣಿಸಿದ್ದರು. ಆತನ ಮರಣದ ನಂತರ ದೇವರೆಂದು ಆರಾಧಿಸುತ್ತಿದ್ದರು;

ಇದೆಲ್ಲವೂ ಮಹಾಭಾರತ ಮತ್ತು ಪುರಾಣದಲ್ಲಿರುವ ಆತನ ಬಗೆಗಿನ ಕಥೆಯನ್ನು ಹೊರತುಪಡಿಸಿದುದಾಗಿದೆ. ಭಾರತದ ಅತಿ ಮುಖ್ಯ ಆಧ್ಯಾತ್ಮಿಕ ಮಾರ್ಗಗಳಲ್ಲಿ ಅತಿ ಮುಖ್ಯವಾದ ಭಾಗವತದ ಧರ್ಮದ ಜೊತೆಗೆ ಈತನ ಹೆಸರಿನ ನಂಟಿದೆ. ಹಾಗಾಗಿ ಈತನು ಕೇವಲ ದಂತಕಥೆ ಅಥವಾ ಕಾವ್ಯಾತ್ಮಕ ಸೃಷ್ಟಿಯಾಗಿರಲು ಸಾಧ್ಯವಿಲ್ಲ. ಮಹಾಭಾರತವು ಒಂದು ಕಾವ್ಯವಾಗಿದೆ ಹೊರತು ಇತಿಹಾಸವಲ್ಲ. ಆದರೆ ಅದು ಸಾಂಪ್ರದಾಯಿಕ ನೆನಪಾಗಿ ಅದನ್ನು ಕಾಪಾಡಲಾಗಿದೆ. ಮಹಾಭಾರತದಲ್ಲಿ ಬರುವ ಧೃತರಾಷ್ಟ್ರ, ಪರೀಕ್ಷಿತ ನಿಜವಾಗಿಯೂ ಬದುಕಿದ್ದರು ಮತ್ತು ಕೃಷ್ಣನು ಆ ಕಥೆಯಲ್ಲಿ ನಾಯಕನಾಗಿ, ಯೋಧನಾಗಿ, ರಾಜಕೀಯ ಧುರೀಣನಾಗಿದ್ದುದನ್ನು ನಾವು ಒಪ್ಪಬಹುದಾಗಿದೆ. ಮತ್ತು ಇದು ಸಾಂಪ್ರದಾಯಿಕವಾಗಿ ಇದು ಐತಿಹಾಸಿಕ ಮೌಲ್ಯ ಹೊಂದಿದೆ. ಹಾಗಾಗಿ ಇದು ಕೇವಲ ದಂತಕಥೆ ಅಥವಾ ಕಾವ್ಯಾತ್ಮಕ ಸೃಷ್ಟಿಯಾಗಿರಲು ಸಾಧ್ಯವಿಲ್ಲ. ಇಷ್ಟು ಮಾತ್ರ ಕೃಷ್ಣನ ಐತಿಹಾಸಿಕತೆಯ ಬಗ್ಗೆ ಧನಾತ್ಮಕವಾಗಿ ಹೇಳಬಹುದು; ಆದರೆ ನನ್ನ ದೃಷ್ಟಿಯಲ್ಲಿ ಇನ್ನೂ ಹೆಚ್ಚಿನ ಅಂಶಗಳಿವೆ. ಮತ್ತು ನಾನು ಯಾವಾಗಲೂ ಕೃಷ್ಣನನ್ನು ಐತಿಹಾಸಿಕವಾಗಿ ಒಬ್ಬ ಅವತಾರನೆಂದು ನಂಬಿದ್ದೇನೆ, ಕ್ರೈಸ್ತನ ಐತಿಹಾಸಿಕತೆಯನ್ನು ಒಪ್ಪಿದ ಹಾಗೆ ಕೃಷ್ಣನನ್ನೂ ಸಹ ಒಪ್ಪಿಕೊಂಡಿದ್ದೇನೆ.

## ಬೃಂದಾವನದ ಕಥೆ

ಬೃಂದಾವನದ ಕಥೆಯು ಇನ್ನೊಂದು ವಿಷಯವಾಗಿದೆ; ಇದು ಮಹಾಭಾರತದ ಮೂಲ ಕಥೆಯಲ್ಲಿ ಬರುವದಿಲ್ಲ. ಮತ್ತು ಇದು ಮೂಲಪುರಾಣವಾಗಿದೆ. ಇದರ ಉದ್ದೇಶವು ಸಾಂಕೇತಿಕವಾಗಿದೆ. ಒಂದು ಕಾಲದಲ್ಲಿ ನಾನು ಈ ರೀತಿಯ ವಿವರಣೆಯನ್ನು ಒಪ್ಪಿದ್ದೆನು, ಆದರೆ ನಂತರ ಇದನ್ನು ತ್ಯಜಿಸಬೇಕಾಯಿತು. ಪುರಾಣದಲ್ಲಿರುವ ಈ ಉದ್ದೇಶಕ್ಕೆ ಏನೂ ದ್ರೋಹ ಬಗೆದಂತಾಗುವದಿಲ್ಲ. ನನ್ನ ಪ್ರಕಾರ ಇದು ನಿಜವಾಗಿ ನಡೆದ ಘಟನೆಯಾಗಿದೆ. ಅಥವಾ ಎಲ್ಲಿಯಾದರೂ ನಡೆದಿರಲೇಬೇಕು; ಪುರಾಣದಲ್ಲಿರುವ ಗೋಪಿಯರು ಅವರಿಗೆ ನೈಜವಾಗಿದ್ದರು ಹೊರತು ಸಾಂಕೇತಿಕವಲ್ಲ. ಇದು ಅವರಿಗೆ ಕನಿಷ್ಠ ಒಂದು ಗುಹ್ಯ ಸತ್ಯವಾಗಿತ್ತು, ಮತ್ತು ಗುಹ್ಯ ಮತ್ತು ಸಾಂಕೇತಿಕಗಳು ಎರಡೂ ಒಂದೇ ಅಲ್ಲ, ಸಾಂಕೇತಿಕವು ಒಂದು ಮಹತ್ವದ ಮಾನಸಿಕ ಸೃಷ್ಟಿಯಾಗಿರಬಹುದು. ಅಥವಾ ಕಾಲ್ಪನಿಕ ಆವಿಷ್ಕಾರವಾಗಿರಬಹುದು. ಆದರೆ ಗುಹ್ಯಕ್ಕೆ ತನ್ನದೇ ಆದ ನಿಜ ಅಸ್ತಿತ್ವವು ಎಲ್ಲೋ ಇದೆ, ಅದು ಭೌತಿಕದ ಹಿಂದಿದ್ದುಕೊಂಡು ಅದರ ಸತ್ಯದ ಪ್ರಭಾವವು ಭೌತಿಕ

ಜೀವನಕ್ಕೆ ಅದು ಸತ್ಯವಾಗಿದೆ. ಮತ್ತು ಅದರ ಮೇಲೆ ಪ್ರಭಾವ ಬಿರುತ್ತದೆ, ಅಲ್ಲಿ ಅದು ಧಾರಣೆಯನ್ನು ಪಡೆಯಬಹುದು. ಮತ್ತು ದೈವೀ ಗೋಕುಲದಲ್ಲಿ ಗೋಪಿಯರ ಲೀಲೆಯು ಯಾವಾಗಲೂ ನಡೆದಿದೆ ಎಂದು ತಿಳಿಯಲಾಗಿದೆ. ಮತ್ತು ತನ್ನನ್ನು ಭೌತಿಕ ಬೃಂದಾವನದಲ್ಲಿ ಯೋಜಿತಗೊಳಿಸಿಕೊಂಡಿದೆ. ಮತ್ತು ಅದನ್ನು ಯಾವಾಗಲೂ ಸಾಕ್ಷಾತ್ಕಾರ ಮಾಡಿಕೊಳ್ಳಬಹುದು. ಹಾಗಾಗಿ ಅದರ ಅರ್ಥವನ್ನು ಆತ್ಮದಲ್ಲಿ ನಿಜವಾಗಿಸಿಕೊಳ್ಳಬಹುದು. ಪುರಾಣಕಾರರು ಇದು ನಿಜವಾಗಿಯೂ ಪೃಥ್ವಿಯ ಮೇಲೆ ಶ್ರೀ ಕೃಷ್ಣನ ಅವತಾರದ ಕಾಲದಲ್ಲಿ ಆದ ಘಟನೆಯೆಂದು ಹೇಳುತ್ತಾರೆ. ಮತ್ತು ಇದನ್ನು ಭಾರತೀಯ ಧಾರ್ಮಿಕ ಮನಸ್ಸು ಒಪ್ಪಿಕೊಂಡಿದೆ.

ಈ ಉದ್ಭವವಾಗಿರುವ ಪ್ರಶ್ನೆಗಳು ಮತ್ತು ಊಹಾಪೋಹಗಳು ಆಧ್ಯಾತ್ಮಿಕ ಜೀವನಕ್ಕೆ ಯಾವುದೇ ಅನಿವಾರ್ಯವಾದವುಗಳಲ್ಲ, ಅಲ್ಲಿ ಶ್ರೀ ಕೃಷ್ಣನ ಜೊತೆಗಿರುವ ಸಂಪರ್ಕ ಮತ್ತು ಶ್ರೀ ಕೃಷ್ಣನ ಪ್ರಜ್ಞೆಯೆಡೆಗೆ ಬೆಳೆಯುವದು, ಸಾನಿಧ್ಯ, ಆಧ್ಯಾತ್ಮಿಕ ಸಂಬಂಧ, ಆತ್ಮದಲ್ಲಿನ ಐಕ್ಯತೆ, ಮತ್ತು ಇಲ್ಲಿಯವರೆಗೆ ಮುಟ್ಟುವದಕ್ಕೆ ಮುನ್ನ ಅಭೀಪ್ಸೆ, ಭಕ್ತಿಯ ಬೆಳವಣಿಗೆ ಮತ್ತು ಆ ಮಾರ್ಗದಲ್ಲಿ ಬೇಕಾದ ಜ್ಞಾನವು ಮುಖ್ಯವಾಗಿದೆ. ಯಾರು ಇವೆಲ್ಲವನ್ನು ಹೊಂದಿದ್ದಾರೋ ಅವನು ಆ ಸಾನಿಧ್ಯದಲ್ಲಿ ಬದುಕಿ, ಆತನ ವಾಣಿಯನ್ನು ಕೇಳಿಸಿಕೊಂಡು, ಶ್ರೀ ಕೃಷ್ಣನನ್ನು ಗೆಳೆಯ ಅಥವಾ ಪ್ರಿಯತಮ, ಮಾರ್ಗದರ್ಶಕ, ಗುರು, ಒಡೆಯನೆಂದು ತಿಳಿದವನು ಅಥವಾ ಇದಕ್ಕಿಂತಲೂ ಹೆಚ್ಚಾಗಿ ಆತನ ಸಂಪರ್ಕದಿಂದ ಇಡೀ ತನ್ನ ಪ್ರಜ್ಞೆಯನ್ನು ಬದಲಾಯಿಸಿಕೊಂಡವನು ಅಥವಾ ಅವನ ಸಾನಿಧ್ಯವನ್ನು ಅಂತರಂಗದಲ್ಲಿ ಪಡೆದವನಿಗೆ ಈ ಎಲ್ಲಾ ಪ್ರಶ್ನೆಗಳು ಕೇವಲ ಬಾಹ್ಯ ಮತ್ತು ಮೇಲ್ನೋಟದ ಆಸಕ್ತಿಗಳಾಗಿ ಉಳಿಯುತ್ತವೆ. ಅದೇ ರೀತಿ, ಯಾರಿಗೆ ಅಂತರಂಗದ ಬೃಂದಾವನ ಮತ್ತು ಗೋಪಿಯರ ಲೀಲೆಯ ಜೊತೆ ಸಂಪರ್ಕವಿದೆಯೋ, ಆತ್ಮ ಸಮರ್ಪಣೆ ಮಾಡಿ ಅದರ ಆನಂದ ಮತ್ತು ಸೌಂದರ್ಯವನ್ನು ಅನುಭವಿಸಿದ್ದಾನೋ, ಅಥವಾ ಆ ಕೊಳಲಿನ ನಾದಕ್ಕೆ ಓಗೊಟ್ಟಿದ್ದಾನೋ, ಆತನಿಗೆ ಉಳಿದವೆಲ್ಲವೂ ಮಹತ್ವದ್ದಾಗಿರುವದಿಲ್ಲ. ಆದರೆ ಇನ್ನೊಂದು ದೃಷ್ಟಿಯಿಂದ ಯಾರು ಅವತಾರನ ಐತಿಹಾಸಿಕತೆಯ ನೈಜತೆಯನ್ನು ಒಪ್ಪಿಕೊಂಡಿರುತ್ತಾನೋ, ಈ ಆಧಾರದ ಮೇಲೆ ಒಂದು ಶ್ರೇಷ್ಠ ಆಧ್ಯಾತ್ಮಿಕ ಲಾಭ ಪಡೆದುಕೊಳ್ಳಬಹುದು, ಅದೇನೆಂದರೆ, ದೈವವು ಒಮ್ಮೆಯಾದರೂ ಗೋಚರವಾಗುವಂತೆ ಪೃಥ್ವಿಯನ್ನು ಸ್ಪರ್ಶಿಸಿದ್ದಾನೆ ಎಂದು ನಾವು ಒಂದು ಗಟ್ಟಿಯಾದ ಸಾಕ್ಷಾತ್ಕಾರ ಮಾಡಿಕೊಳ್ಳಲು ಭರವಸೆಯಾಗುತ್ತದೆ. ಸಂಪೂರ್ಣ

ಪ್ರಕಟಣೆಯು ಸಾಧ್ಯವೆಂದು ಈ ಅಪರಿಪೂರ್ಣ ಭೌತಿಕ ಪ್ರಕೃತಿಯ ವಿಕಾಸದಲ್ಲಿ ದೈವೀ ಪರಾಕೃತಿಯನ್ನು ಅವರೋಹಿಸಲು ಸಾಧ್ಯವೆಂದೆನಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/482–84**

**ಶ್ರೀ ಕೃಷ್ಣನ ಕಥೆಗಳು**

ಶ್ರೀ ಕೃಷ್ಣನ ಬಗೆಗಿನ ಪ್ರಶ್ನೆಗಳಿಗೆ ಉತ್ತರವು (ಬೃಂದಾವನದ ಕೃಷ್ಣನ ಮತ್ತು ಆತನ ಲೀಲೆಯ ಕಥೆಗಳು ನಿಜಾಂಶಗಳೇ ಅಥವಾ ಆಳವಾದ ಆಧ್ಯಾತ್ಮಿಕ ಸತ್ಯದ ಸಂಕೇತಗಳೇ) ನಾವು ಆಧ್ಯಾತ್ಮಿಕ ಅನುಭಾವ ಮತ್ತು ಅತೀಂದ್ರಿಯ ಮತ್ತು ಗುಹ್ಯ ಅನುಭವಕ್ಕೆ ಯಾವ ಮೌಲ್ಯವನ್ನು ಕೊಡುತ್ತೇವೆ ಅಂದರೆ ಅತಿ ಭೌತಿಕ ಪ್ರಜ್ಞಾ ಸ್ತರಗಳು, ವಿಶ್ವಾತ್ಮಕ ಪ್ರಜ್ಞೆ, ಮತ್ತು ವೈಯಕ್ತಿಕ ಮತ್ತು ಸಾಮೂಹಿಕ ಪ್ರಜ್ಞೆಯ ನಡುವೆ ಇರುವ ಸಂಬಂಧದ ಮೇಲೆ ಅವಲಂಬಿತವಾಗಿದೆ. ಆಧ್ಯಾತ್ಮಿಕ ಮತ್ತು ಗುಹ್ಯ ಸತ್ಯದ ದೃಷ್ಟಿಯಿಂದ ಮನುಷ್ಯನ ಪ್ರಜ್ಞೆಯಲ್ಲಿ ಏನು ರೂಪುಗೊಳ್ಳುತ್ತದೆಯೋ ಅದು ವಿಶ್ವಾತ್ಮಕ ಪ್ರಜ್ಞೆಯ ಪ್ರತಿಫಲನ ಮತ್ತು ಒಂದು ನಿರ್ದಿಷ್ಟ ಅಂಶವಾಗಿದೆ. ವಿಶ್ವಾತ್ಮಕ ಪ್ರಜ್ಞೆಯ ಉನ್ನತ ಬೆಳಕು ಮತ್ತು ಶಕ್ತಿ ಮತ್ತು ಸೌಂದರ್ಯವು ಈ ಮಾನವನ ಕಷ್ಟಕರ ಮಾಧ್ಯಮದಲ್ಲಿ ಅವರೋಹಿತವಾಗಬೇಕಾಗುತ್ತದೆ. ಈಗಿನ ವಿಕಾಸದ ಹಂತದಲ್ಲಿ ಮಾನವನ ಪ್ರಜ್ಞೆಯು ಒಂದು ಅಜ್ಞಾನದ ಭಾಗವಾಗಿದೆ. ಈ ಮೇಧಾವಿ ಜನಾಂಗದ ಬಗೆಗಿನ ವಿವರಣೆಯು ಈ ದೇಶದ ಪ್ರಜ್ಞೆಯು, ದೇವರು ಮತ್ತು ಅವನ ರೂಪಗಳನ್ನು ಸೃಷ್ಟಿಸಿತು ಎನ್ನುವುದು ಭಾಗಶಃ, ಮೇಲೆ ಮೇಲಿನ ಮತ್ತು ತಪ್ಪು ದಾರಿಗೆ ಎಳೆಯುವ ಸತ್ಯವಾಗಿದೆ. ಮನುಷ್ಯನ ಮನವು ಮೂಲ ಸೃಷ್ಟಿಕರ್ತ ಅಲ್ಲ ಅದು ಒಂದು ಮಾಧ್ಯಮ ವಿಶ್ವಾತ್ಮಕ ಪ್ರಜ್ಞೆಯಿಂದ ಇಳಿದು ಬಂದ 'ಸ್ಫೂರ್ತಿ' ಸಲಹೆಯಿಂದ ಮಾತ್ರ ಅದು ಏನನ್ನಾದರೂ ಸೃಷ್ಟಿ ಮಾಡಬಹುದು. ದೇವರು ಇದ್ದಾನೆ, ಆದರೆ ಮಾನವನ ದೇವರ ಬಗೆಗಿನ ಕಲ್ಪನೆಗಳು ಅವನ ಮಾನಸಿಕತೆಯಲ್ಲಿ ಪ್ರತಿಫಲನಗೊಂಡ ಅಂಶಗಳೇ ಆಗಿವೆ, ಕೆಲವೊಮ್ಮೆ ದೈವದ, ಕೆಲವೊಮ್ಮೆ ಬೇರೆ 'ಅಸ್ತಿತ್ವಗಳ', 'ಶಕ್ತಿಗಳ' ಮತ್ತು ಅವುಗಳಿಂದ ಬಂದಂತಹ ಸಲಹೆಗಳ ಮೇಲೆ ಮಾನವನು ಕಲ್ಪಿಸಿಕೊಳ್ಳುತ್ತಾನೆ, ಎಲ್ಲಿಯವರೆಗೆ ಮಾನವನು ಒಂದು ಉನ್ನತ ಮತ್ತು ನಿಜವಾದ, ಆಧ್ಯಾತ್ಮಿಕ ಅಥವಾ ಅತೀಂದ್ರಿಯ ಜ್ಞಾನವನ್ನು ಪಡೆದಿರುವದಿಲ್ಲವೋ, ಅಲ್ಲಿಯವರೆಗೆ ಅವು ಮಾನಸಿಕ ಸ್ಥರದಿಂದ ಕೂಡಿರುತ್ತವೆಯೋ ಅವು ಸಾಮಾನ್ಯವಾಗಿ ಭಾಗಶಃ ಮತ್ತು ಅಪರಿಪೂರ್ಣವಾಗಿರುತ್ತವೆ. ದೇವರುಗಳು ಈಗಾಗಲೇ ಅಸ್ತಿತ್ವದಲ್ಲಿದ್ದಾರೆ. ಮನುಷ್ಯರು ಅವರನ್ನು ಸೃಷ್ಟಿ ಮಾಡಿಲ್ಲ ಆದಾಗ್ಯೂ, ತನ್ನದೇ

ಚಿತ್ರಣದಲ್ಲಿ ಅವುಗಳನ್ನು ರೂಪಿಸಿಕೊಳ್ಳುತ್ತಾನೆ; ಮೂಲಭೂತವಾಗಿ, ವಿಶ್ವಾತ್ಮಕ ನಿಜ ಅಸ್ತಿತ್ವದಿಂದ ಅವನು ಎಷ್ಟನ್ನು ಅರಿಯುತ್ತಾನೋ ಆ ಪ್ರಕಾರ ದೇವತೆಗಳ ಬಗ್ಗೆ ರೂಪಿಸುತ್ತಾನೆ. ಒಬ್ಬ ಕಲಾವಿದ ಅಥವಾ ಭಕ್ತನು ದೇವತೆಗಳ ಬಗ್ಗೆ ಒಂದು ದರ್ಶನವನ್ನು ಪಡೆಯುತ್ತಾನೆ. ಮತ್ತು ಇದು ಜನಾಂಗದ ಪ್ರಜ್ಞೆಯಲ್ಲಿ ಸ್ಥಾಪಿತವಾಗುತ್ತದೆ. ಹಾಗೂ ಈ ದೃಷ್ಟಿಕೋನದಿಂದ ಮನುಷ್ಯನು ದೇವತೆಗಳಿಗೆ ರೂಪ ಕೊಡುತ್ತಾನೆ; ಆದರೆ ಅವನು ರೂಪಗಳನ್ನು ಸೃಷ್ಟಿಸುವದಿಲ್ಲ, ಅವನು ಏನನ್ನು ನೋಡಿರುತ್ತಾನೋ ಅದನ್ನು ದಾಖಲಿಸುತ್ತಾನೆ; ಯಾವ ರೂಪಗಳನ್ನು ಅವನು ಕೊಡುತ್ತಾನೋ ಅದು ಅವನಿಗೆ ಕೊಡಲ್ಪಟ್ಟಿರುತ್ತದೆ. ಕೃಷ್ಣನ ಸಾಂಪ್ರದಾಯಿಕ ರೂಪದಲ್ಲಿ ಮನುಷ್ಯರು ಅವನ ಶಾಶ್ವತ ಸೌಂದರ್ಯವನ್ನು ಎಷ್ಟು ನೋಡಿರುತ್ತಾರೋ, ಅಷ್ಟನ್ನು ಧಾರಣೆ ಮಾಡಿರುತ್ತಾರೆ ಮತ್ತು ಅವರು ಏನು ನೋಡಿರುತ್ತಾರೋ ಅದು ಸತ್ಯವೂ ಮತ್ತು ಸೌಂದರ್ಯಮಯವೂ ಆಗಿರಬಹುದು, ಅದು ಆ ರೂಪದ ಕೆಲ ಅಂಶಗಳನ್ನು ಮನವರಿಕೆ ಮಾಡಬಹುದು, ಆದರೆ ಆ ರೂಪದ ಶಾಶ್ವತವಾದ ಸೌಂದರ್ಯ ಮತ್ತು ಶಾಶ್ವತವಾದ ರೂಪ ಇರದಿದ್ದರೆ ಅದು ಮಾನವನು ಇಲ್ಲಿಯವರೆಗೆ ನೋಡಲು ಸಾಧ್ಯವಾದುದಕ್ಕಿಂತ ಹೆಚ್ಚು ಸುಂದರವಾಗಿದ್ದಿರಲೇಬೇಕು. ಭಾರತಮಾತೆಯು ಕೇವಲ ಒಂದು ಭೂಭಾಗವಲ್ಲ; ಆಕೆಯು ಒಂದು ಶಕ್ತಿ, ಒಂದು ದೇವತೆ, ಎಲ್ಲಾ ದೇಶಗಳ ಹಿಂದೆ ಈ ರೀತಿಯ ದೇವಿಯು ಅವರ ವೈಯಕ್ತಿಕ ಅಸ್ತಿತ್ವವನ್ನು ಉಳಿಸಿ ಬೆಂಬಲಿಸುತ್ತಾಳೆ. ಅಂತಹ 'ಸತ್ತೆ'ಗಳು ಯಾವ ಮನುಷ್ಯರ ಮೇಲೆ ಪ್ರಭಾವ ಬೀರುತ್ತವೋ ಅದಕ್ಕಿಂತಲೂ ನಿಜ ಮತ್ತು ಶಾಶ್ವತವಾಗಿರುತ್ತವೆ, ಆದರೆ ಅವು ಉನ್ನತ ಸ್ತರಕ್ಕೆ ಸಂಬಂಧಿಸಿರುತ್ತವೆ. ವಿಶ್ವಾತ್ಮಕ ಪ್ರಜ್ಞೆ ಮತ್ತು ಸತ್ತೆಯ ಭಾಗವಾಗಿರುತ್ತವೆ. ಪೃಥ್ವಿಯ ಮೇಲಿರುವ ಮಾನವ ಪ್ರಜ್ಞೆಯ ಮೇಲೆ ಪ್ರಭಾವ ಬೀರಿ ತಮ್ಮ ಕಾರ್ಯಗೈಯುತ್ತವೆ. ಯಾವ, ಮನುಷ್ಯನು ಕೇವಲ ತನ್ನ ವೈಯಕ್ತಿಕ, ರಾಷ್ಟ್ರೀಯ ಮತ್ತು ಜನಾಂಗೀಯ ಪ್ರಜ್ಞೆಯಲ್ಲಿರುತ್ತಾನೋ ಮತ್ತು ಅದರ ಮೇಲೆ ಏನು ಕೆಲಸ ಮಾಡುತ್ತಿದೆ ಮತ್ತು ಯಾವುದು ರೂಪಿಸುತ್ತಿದೆ ಎಂಬುದರ ಅರಿವಿರುವದಿಲ್ಲವೋ ಸಹಜವಾಗಿ ಎಲ್ಲವನ್ನು ತಾನೆ ಸೃಷ್ಟಿ ಮಾಡುವೆನೆಂದು ತಿಳಿದು ಇದರ ಹಿಂದೆ ಯಾವುದೇ ವಿಶ್ವಾತ್ಮಕ ಮತ್ತು ಉನ್ನತವಾದುದು ಇಲ್ಲವೆಂದು ತನ್ನನ್ನು ತಾನು ವ್ಯಕ್ತಪಡಿಸಿಕೊಳ್ಳುತ್ತಾನೆ. ಶ್ರೀ ಕೃಷ್ಣನ ಪ್ರಜ್ಞೆಯು ಒಂದು ವಾಸ್ತವವಾಗಿದೆ, ಆದರೆ ಇಲ್ಲಿ ಶ್ರೀ ಕೃಷ್ಣನೇ ಇಲ್ಲದಿದ್ದರೆ ಅವನ ಪ್ರಜ್ಞೆಯೂ ಇರಲು ಸಾಧ್ಯವಿಲ್ಲ; ಒಂದು ತತ್ವ ಜ್ಞಾನಗಳ ಕಲ್ಪನೆಗಳ ದೃಷ್ಟಿಯಿಂದ ಹೇಳಬೇಕೆಂದರೆ, ಒಂದು ಪ್ರಜ್ಞಾಪೂರ್ವಕ 'ಸತ್ತೆ' ಇರಲಾರದೆ ಪ್ರಜ್ಞೆಯು ಇರಲು ಸಾಧ್ಯವಿಲ್ಲ. ವ್ಯಕ್ತಿಯ ವ್ಯಕ್ತಿತ್ವಕ್ಕೆ ಮತ್ತು ವಾಸ್ತವವನ್ನು ಮತ್ತು ಮೌಲ್ಯವನ್ನು

ಕೊಡುತ್ತಾನೆ, ತನ್ನನ್ನು ತನ್ನ ವ್ಯಕ್ತಿತ್ವದ ಮೂಲಕ ವ್ಯಕ್ತಪಡಿಸಿ–ಕೊಳ್ಳುತ್ತಾನೆ ಹೊರತು ಆ ವ್ಯಕ್ತಿತ್ವದಿಂದಲೇ ಅವನು ಮಾಡಲ್ಪಟ್ಟಿರುವದಿಲ್ಲ. ಕೃಷ್ಣನು ಒಬ್ಬ ಸತ್ತೆಯಾಗಿ, ವ್ಯಕ್ತಿಯಾಗಿ ಮತ್ತು ದೈವೀ ಪುರುಷನಾಗಿ ನಾವು ಆತನನ್ನು ಸಂಧಿಸುತ್ತೇವೆ. ಆತನ ವಾಣಿಯನ್ನು ಕೇಳುತ್ತೇವೆ, ಆತನೊಂದಿಗೆ ಮಾತನಾಡುತ್ತೇವೆ ಆತನ ಸಾನಿಧ್ಯವನ್ನು ಭಾವಿಸುತ್ತೇವೆ. ಶ್ರೀ ಕೃಷ್ಣ ಮತ್ತು ಶ್ರೀ ಕೃಷ್ಣನ ಪ್ರಜ್ಞೆ ಎರಡೂ ಬೇರೆ ಎಂದು ಹೇಳುವುದು ಮನದ ಒಂದು ತಪ್ಪು ಆಗಿದೆ. ಮನವು ಯಾವಾಗಲೂ ಯಾವುದನ್ನು ಬೇರ್ಪಡಿಸಲು ಅಸಾಧ್ಯವೋ ಅದನ್ನು ಬೇರ್ಪಡಿಸಲು ಪ್ರಯತ್ನಿಸುತ್ತದೆ. ಮತ್ತು ನಿರ್ವೈಕ್ತಿಕವು ಅಮೂರ್ತವಾಗಿರುವದರಿಂದ ಮನಕ್ಕೆ ಇದು ವೈಯಕ್ತಿಕತೆಗಿಂತಲೂ ಶ್ರೇಷ್ಠ ನಿಜವೆಂದೆನಿಸುತ್ತದೆ. ಅಂತಹ ಭೇದಭಾವಗಳು ತನ್ನ ಉದ್ದೇಶಗಳಿಗಾಗಿ ಮನಕ್ಕೆ ಸರಿ ಎನ್ನಿಸಬಹುದು ಆದರೆ ಇದು ನಿಜವಾದ ಸತ್ಯವಲ್ಲ; ನಿಜ ಸತ್ಯದಲ್ಲಿ ಸತ್ತೆ ಅಥವಾ ವ್ಯಕ್ತಿ ಮತ್ತು ಅವನ ನಿರ್ವೈಯಕ್ತಿಕತೆ ಅಥವಾ ಸತ್ತೆಯ ಸ್ಥಿತಿ ಎರಡೂ ಒಂದೇ ವಾಸ್ತವೀಕತೆಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/481–82**

## ಕೃಷ್ಣ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

ಓ ಮಹಾ ಜ್ಯೋತಿಯೆ ಹಾಗೂ ನೀವೆಲ್ಲ, ಓ ಅಪರಿಮಿತ ಅನಂತ ಚೇತನವೆ,
ನೀನು ಯಾರನ್ನು ಅಪ್ಪಿಕೊಂಡಿರುವಿ ಮತ್ತು ಮರೆಮಾಡಿರುವಿ, ಅಚಲ ಕೈ–
ಕಾಲುಗಳನ್ನೆ, ಉಜ್ವಲವಾದ ಮುಖವನ್ನೆ?
ದೇಶ ಮತ್ತು ಕಾಲ ಮೈಚಾಚಿ ಮಲಗಿವೆ, “ನಾವು ಶೂನ್ಯರೆ, ಅಲ್ಲಿ ಯಾರೂ ಇಲ್ಲ.”
ಚೇತನದ ವ್ಯರ್ಥ ಹೋರಾಟ ಮತ್ತು ರೋದಿಸುತ್ತಿರುವ ಪ್ರಪಂಚ “ನಾನು,
ನಾನು ಏಕಮಾತ್ರ.”
ಚೇತನದ ಚೇತನ, ಬಯಲಿನ ಚೇತನ, ಸಮಯದ ಚಿಲುಮೆ,
ಹೃದಯಗಳ ಹೃದಯ, ಮನಸ್ಸುಗಳ ಮನಸ್ಸು, ಸ್ಥಿರವಾಗಿ, ಗಾಂಭಿರ್ಯವಾಗಿ
ಒಂಟಿಯಾಗಿ ಅಲ್ಲಿ ಕುಳಿತಿರುವನೊಬ್ಬನಿದ್ದಾನೆ.
ಓ ಶೂನ್ಯವಿಲ್ಲದ ಸ್ವಯಂ–ವಿಲಿನಗೊಂಡ ಪರಿಪೂರ್ಣತೆಯೆ, ಭವ್ಯ, ಮೂಕ,
ಕೊಳಲನ್ನು ತಬ್ಬಿ ಹಿಡಿದ ಕೈಗಳು ಮತ್ತು ಅದನ್ನು ಮುತ್ತಿಟ್ಟು ಊದುತ್ತಿರುವ
ಕೆಂದುಟಿಗಳು.

ಅವನು ಪ್ರೀತಿಸುವ ಎಲ್ಲವೂ, ಅವನು ಪ್ರೇರೆಪಿಸುವ ಎಲ್ಲವೂ, ಎಲ್ಲವೂ
ಅವನವೆ ಅಗಿವೆ, ಅವನೇ ಎಲ್ಲವು ಅಗಿದ್ದಾನೆ;
ಹಲವು ಅವಯವಗಳು ಕಾಲುಗಳು ಅವನ ದಿಢೀರ್‌ಬಯಕೆಗಳನ್ನು
(ಹುಚ್ಚಾಟಗಳನ್ನು) ತೃಪ್ತಿಪಡಿಸುವವು, ಅವನ ಮಧುರ ಆನಂದವನ್ನು
ಹೊಂದುವವು.
ಒಬ್ಬನಲ್ಲಿ ಈರ್ವರು, ವಿವೇಕದಲ್ಲಿನ ಸ್ನಿಗ್ಧ ವ್ಯತ್ಯಾಸವನ್ನು ತಿಳಿದಿರುವ ಈರ್ವರು,
ಅಪ್ಪಿಕೊಳ್ಳಲೀರ್ವರು, ಆದರೂ ಏಕವಾಗಿರುವನು, ಇದು ಅವನ ವಿಚಿತ್ರವಾದ
ರಹಸ್ಯ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/637**

**ಅವನು ಪ್ರೀತಿಸುವ ಎಲ್ಲವೂ, ಅವನು ಪ್ರೇರೆಪಿಸುವ ಎಲ್ಲವೂ**

**ಸಂಪ್ರದಾಯಗಳಾಚೆ**

ಮಾನಸ ಸ್ತರಕ್ಕಿಂತ ಉನ್ನತ ಸ್ತರಕ್ಕೇರಿದಾಗ ಮಾತ್ರ ನಾವು ಸಂಪ್ರದಾಯಗಳನ್ನು (ಆಚಾರಗಳನ್ನು) ಮೀರಬಹುದು – ಕೃಷ್ಣನಿಗೆ ಹೀಗೆ ಮಾಡಲು ಸಾಧ್ಯವಾಯಿತು, ಏಕೆಂದರೆ, ಅವನು ಸಾಮಾನ್ಯ ಮಾನಸ ಸ್ಥಿತಿಯ ಪುರುಷನಾಗಿರಲಿಲ್ಲ, ಆದರೆ ಮನುಷ್ಯನಿಗಿಂತ ಉನ್ನತ ಪ್ರಜ್ಞೆಯೊಳಗಿಂದ ಮುಕ್ತವಾಗಿ ವರ್ತಿಸುವ ಒಬ್ಬ ಅತಿಮಾನಸ ದೈವೀ ಪುರುಷನಾಗಿದ್ದ. ಶ್ರೀರಾಮನು ಕೃಷ್ಣನಂತೆ ಅಲ್ಲ, ಅವನು ಸಾತ್ವಿಕ–ಮನುಷ್ಯ ಮನಸ್ಸಿನ (ಮಾನಸಿಕ, ಭಾವನಾತ್ಮಕ, ನೈತಿಕ) ಅವತಾರವಾಗಿದ್ದ ಮತ್ತು ಅವನು ಆ ಕಾಲದ ಹಾಗೂ ವಂಶದ ಧರ್ಮವನ್ನು ಅನುಸರಿಸಿದನು. ಅದು ಆತನನ್ನು ತಾತ್ಕಾಲಿಕವಾಗಿ ಗಾಂಧೀಜಿಗೆ ಸರಿಹೊಂದುವ ಪುರುಷನನ್ನಾಗಿ ಮತ್ತು ನಮಗೆ (ಸಾಮಾನ್ಯ ಮನುಷ್ಯ) ವ್ಯತಿರಿಕ್ತವಾದ ವ್ಯಕ್ತಿಯನ್ನಾಗಿ ಮಾಡಬಹುದು; ಆದರೆ, ಹೇಗೆ ಕೃಷ್ಣನಿಂದ ಗಾಂಧಿಯವರ ಮನೋಧರ್ಮದ ಹಿಮ್ಮೆಟ್ಟುವಿಕೆಯು ಕೃಷ್ಣನು ಅವತಾರವಲ್ಲವೆಂದು ಸಾಬೀತುಪಡಿಸುವುದಿಲ್ಲವೋ, ಹಾಗೆಯೇ ರಾಮನಿಂದ ನಿಮ್ಮ ಮನೋಧರ್ಮದ ಹಿಮ್ಮೆಟ್ಟುವಿಕೆಯೂ ಆತನೊಬ್ಬ ಅವತಾರವಲ್ಲವೆಂದು ಸಾಬೀತು ಪಡಿಸುವುದಿಲ್ಲ. ಆದಾಗ್ಯೂ, ಅವತಾರವೆನ್ನುವುದು ಈ ಪ್ರಶ್ನೆಗಳ ಮೇಲೆ ಯಾವುದೇ ರೀತಿಯಲ್ಲಿ ಅವಲಂಬಿತವಾಗಿಲ್ಲ, ಆದರೆ ಅದಕ್ಕೆ ಬೇರೆಯದೆ ತಳಹದಿ, ತತ್ವ ಮತ್ತು ಉದ್ದೇಶ ಇದೆ ಎಂಬುದು ನನ್ನ ಕಲ್ಪನೆಯಾಗಿದೆ.

ರಾಮನ ಕುರಿತು ನಿಮ್ಮ ಹೊಸ ಅಭಿಪ್ರಾಯಗಳಿಗೆ ಪೂರ್ಣ ಉತ್ತರವನ್ನು ನೀಡಲು ಇಂದು ರಾತ್ರಿ ಸಮಯವಿಲ್ಲ. ನೀವು ಅವತಾರಕ್ಕಾಗಿ (ಸೀಲೆ ಮತ್ತು ಬಂಕಿಮರಿಂದ ಪರಿಚಯಿಸಿದ) ನೈತಿಕ ಮತ್ತು ಆಧ್ಯಾತ್ಮಿಕ ಪರಿಪೂರ್ಣತೆಯ ಗುಣಮಟ್ಟದ ಆಧುನಿಕ ಮಾನದಂಡಗಳಿಗೆ ಅಂಟಿಕೊಳ್ಳುವ ಕಾರಣದಿಂದ ಮಾತ್ರ ನೀವು ಆಸಕ್ತಿ ಹೊಂದಿದ್ದೀರಿ – ನಾನು ಸಂಪೂರ್ಣವಾಗಿ ಮತ್ತೊಂದು ದೃಷ್ಟಿಕೋನದಿಂದ ಪ್ರಾರಂಭಿಸುತ್ತೇನೆ ಮತ್ತು ಈ ಪ್ರಮಾಣಿತ ಮಾನವ ಕ್ರಮಗಳನ್ನು ದೃಢವಾಗಿ ನಿರಾಕರಿಸುತ್ತೇನೆ. ಬುದ್ಧನನ್ನು ಹೊರತುಪಡಿಸಿ ಪ್ರಾಚೀನ ಅವತಾರಗಳು ಪರಿಪೂರ್ಣತೆಯ ಮಾನದಂಡಗಳಾಗಲಿ ಅಥವಾ ಆಧ್ಯಾತ್ಮಿಕ ಗುರುಳಾಗಲಿ ಇರಲಿಲ್ಲ – ಅಲೌಕಿಕ ಪ್ರಜ್ಞೆಯ ಘಳಿಗೆಯಲ್ಲಿ ಗೀತೆಯನ್ನು ಬೋಧಿಸಿದಾಗ್ಯೂ ಕೃಷ್ಣನು ತನ್ನ ಅಲೌಕಿಕ ಪ್ರಜ್ಞೆಯನ್ನು ಕೂಡಲೇ ಕಳೆದುಕೊಂಡೆನೆಂದು ಹೇಳುತ್ತಾನೆ. ನಾನು ಹೇಳುವುದೇ ಆದರೆ, ಅವತಾರ ಪುರುಷರು ಭೂ–ಜನಾಂಗದ ವಿಕಾಸದಲ್ಲಿ ಕೆಲವು ವಿಷಯಗಳನ್ನು ಸರಿಪಡಿಸಲು ದೈವಿಕ ಹಸ್ತಕ್ಷೇಪದ ಸಾಧನಗಳಾಗಿದ್ದ ಪ್ರಾತಿನಿಧಿಕ ಬ್ರಹ್ಮಾಂಡ ಪುರುಷರಾಗಿದ್ದರೆಂದು ಹೇಳಬಹುದು. ನಾನು ಅದಕ್ಕೆ ಬದ್ಧನಾಗಿದ್ದೇನೆ ಮತ್ತು ಈ ವಾದದಲ್ಲಿ ಬೇರೆ ಯಾವುದೇ ಮಾನದಂಡಕ್ಕೆ ನನ್ನನ್ನು ನಾನು ಅರಿಕೆಮಾಡಿಕೊಳ್ಳಲು ನಿರಾಕರಿಸುತ್ತೇನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/494**

## ಅತಿಮಾನಸ ದೈವೀ ಪುರುಷ ಕೃಷ್ಣ

ಕೃಷ್ಣನು ಅಧಿಮಾನಸ ಬೆಳಕಲ್ಲ. ಕೃಷ್ಣ ಪ್ರಜ್ಞೆಯ ಅವರೋಹಣವೆಂದರೆ ಅಧಿಮಾನಸ ಮತ್ತು ಆನಂದದ ಅವರೋಹಣವನ್ನು ಸಿದ್ಧಗೊಳ್ಳುತ್ತಿರುವ ಅತಿಮಾನಸ ದೈವೀ ಪುರುಷ ಪ್ರಜ್ಞೆಯ ಅವರೋಹಣ (ಅದು ನಿಜವಾಗಿಯೂ ತರದಿದ್ದರೂ). ಕೃಷ್ಣನು ಆನಂದಮಯನಾಗಿದ್ದಾನೆ, ತನ್ನ ಆನಂದದೆಡೆಗೆ ಮುನ್ನಡೆಸುವ ಅತಿಮಾನಸದ ಮುಖಾಂತರ ಅವನು ವಿಕಾಸವನ್ನು ಬೆಂಬಲಿಸುತ್ತಾನೆ.

ಕೃಷ್ಣನು ಮಾಡಿದ ಕೆಲಸವೇನೆಂದರೆ, ಮನಸ್ಸು ಮತ್ತು ಪ್ರಾಣದಲ್ಲಿ ಅತಿಮಾನಸವು ಕ್ರಿಯಾಶೀಲವಾಗಿರುವಂತೆ ಮಾಡಿದ್ದು.

ರಾಮನು ಬೌದ್ಧಿಕ ಮನುಷ್ಯನಲ್ಲಿ ಆವಿರ್ಭಾವವಿದ್ದಂತೆ, ಭೂಮಿಯ ಮೇಲೆ ಕೃಷ್ಣನು ಒಂದು ಅಭಿವ್ಯಕ್ತಿಯಾಗಿ, ಇಲ್ಲಿ ಮನುಷ್ಯರಿಗೆ ಅತಿಮಾನಸ ಪ್ರಜ್ಞೆಯ

ಸಾಧ್ಯತೆಯನ್ನು ಮುಕ್ತವಾಗಿಸಿದನು (ಮತ್ತು ಅದಕ್ಕವನು ಮಾದರಿಯಾದ) ಎಂದು ಹೇಳಬಹುದು. ಒಂದು ವೇಳೆ ಕೃಷ್ಣನು ಅತಿಮಾನಸ "ದೇವ"ನಾಗಿದ್ದರೆ, ಅವನು ಅವತಾರವಲ್ಲ, ದೇವರಲ್ಲ, ಆದರೆ ದೇವರೆಂದು ಘೋಷಿಸಿಕೊಂಡ ಯಾರೋ ಒಬ್ಬ ವ್ಯಕ್ತಿ ಎಂದು ಅರ್ಥ, – ಹೇಗೋ ತಾನೊಬ್ಬ ದೇವನೆಂದು ಭಾವಿಸಿದ ದೇವನವನು.

ಕೆಲವೇ ಕೆಲವರು ಕೃಷ್ಣನನ್ನು ಅವತಾರ ಎಂದು ಗುರುತಿಸಿದ್ದಾರೆಂದು ನಾನು ಭಾವಿಸುತ್ತೇನೆ; ಖಂಡಿತವಾಗಿಯೂ ಇದೊಂದು ಸಾಮಾನ್ಯ ಮನ್ನಣೆಯಾಗಿರಲಿಲ್ಲ. ಅವನ ಹತ್ತಿರವಿರುವ ಕೆಲವರಲ್ಲಿ (ವಿದುರ ಮತ್ತು ಇತರರು) ಅವನನ್ನು (ಅವತಾರವೆಂದು) ಎಣಿಸಿದಂತೆ ಕಾಣುವುದಿಲ್ಲ. ಕೃಷ್ಣನ ಜೊತೆಗಿದ್ದವರು ಇತರ ಮನುಷ್ಯರಂತೆ ಎಲ್ಲಾ ತೋರಿಕೆಯಲ್ಲಿ ಮನುಷ್ಯರಾಗಿದ್ದರು. ಮನುಷ್ಯ–ಮನುಷ್ಯರು ಮಾತನಾಡುವಂತೆ, ವರ್ತಿಸುವಂತೆ ಅವರು ಪರಸ್ಪರ ಮಾತನಾಡುತ್ತಿದ್ದರು ಮತ್ತು ವರ್ತಿಸುತ್ತಿದ್ದರು ಮತ್ತು ಅವರ ಸುತ್ತಮುತ್ತಲಿನವರು ಅವರನ್ನು ದೇವರೆಂದು ಭಾವಿಸಿರಲಿಲ್ಲ. ಸ್ವತಃ ಕೃಷ್ಣನು ಒಬ್ಬ ಮನುಷ್ಯನೆಂದು ಬಹಳಷ್ಟು ಜನರಿಂದ ಪರಿಚಿತನಾಗಿದ್ದನು – ಕೆಲವರು ಮಾತ್ರ ಅವನನ್ನು ದೇವರೆಂದು ಪೂಜಿಸುತ್ತಿದ್ದರು.

"ಯುಗದಿಂದ ಯುಗಕ್ಕೆ (from age to age)" ಎನ್ನುವುದು ಇಂಗ್ಲಿಷ್–ನಲ್ಲಿದ್ದಂತೆ, 'ಯುಗೇ ಯುಗೇ' ಎನ್ನುವುದನ್ನು ಸಾಮಾನ್ಯ ಅರ್ಥದಲ್ಲಿ ಬಳಸಬಹುದು ಮತ್ತು ತಾಂತ್ರಿಕವಾಗಿ ಅದು ಯುಗಕ್ಕೆ ಅನ್ವಯಿಸುವುದಿಲ್ಲ, ಮತ್ತು ಪುರಾಣದ ಲೆಕ್ಕಾಚಾರದ ಪ್ರಕಾರ ಸರಿಯಾದುದಲ್ಲ. ಆದರೆ ಬಹೂನಿ* ಎನ್ನುವುದು ಹಲವು ಜನ್ಮಗಳಿಗೆ ವ್ಯಾಪಿಸಿದ್ದು ಎಂದು (ಬಾಹ್ಯದಲ್ಲಿ) ತೋರುತ್ತದೆ – ವಿಶೇಷವಾಗಿ ನರನನ್ನು–ನಾರಾಯಣನೊಡನೆ (ಅತ್ಮ – ಪರಮಾತ್ಮ) ಜೋಡಿಸಿದಾಗ. (*ಬಹೂನಿ ಮೇ ವ್ಯತಿತಾನಿ ಜನ್ಮನಿ ತವ ಚಾರ್ಜುನ ತಾನ್ಯಹಂ ವೇದ ಸರ್ವಾಣಿ ನ ತ್ವಂ ವೇತ್ಥ ಪರಂತಪಃ – ಭಗವದ್ಗೀತೆ 4.5). ಆ ಸಂದರ್ಭದಲ್ಲಿ ಈ ಎಲ್ಲಾ ಅನೇಕ ಜನ್ಮಗಳು ಪೂರ್ಣ ಅವತಾರಗಳಾಗುವುದು ಸಾಧ್ಯವಿಲ್ಲ, – ಇವುಗಳಲ್ಲಿ ಹಲವು ಜನ್ಮಗಳು ಒಂದು ಜನ್ಮದಿಂದ ಮತ್ತೊಂದು ಜನ್ಮಕ್ಕೆ ಸಂಪರ್ಕ ಬೆಸೆಯುವ ವಿಭೂತಿ ಜನ್ಮಗಳಾಗಿವೆ (ವಿಭೂತಿ ಪುರುಷರ ಜನ್ಮ). ಪ್ರತಿ ಜನ್ಮದಲ್ಲೂ ಅರ್ಜುನನು ಅವನೊಂದಿಗೆ (ಕೃಷ್ಣನೊಂದಿಗೆ) ಇರುವುದರ ಬಗ್ಗೆ ಏನನ್ನೂ ಹೇಳಲಾಗಿಲ್ಲ, ಆದರೆ ಅದು ಸಂಭವಿಸುವ ಸಾಧ್ಯತೆ ಕಡಿಮೆ ಅಥವಾ ಹೆಚ್ಚೂ ಇರಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/499–500**

## ರಾಧಾ ಮತ್ತು ಕೃಷ್ಣ

ದೇವರಿಗಾಗಿ ಆತ್ಮನ ಬಯಕೆಯು "ರಾಧಾ ಮತ್ತು ಕೃಷ್ಣ"ರ ಭಾವಗೀತಾತ್ಮಕ (ಕಾವ್ಯಾತ್ಮಕ) ಪ್ರೇಮ ಚಕ್ರದಲ್ಲಿ ಸಾಂಕೇತಿಕ ರೂಪದಲ್ಲಿದೆ, ಪ್ರೇಮದ ಮುಖಾಂತರ ದಿವ್ಯಾತ್ಮನನ್ನು ಅನ್ವೇಷಿಸುತ್ತಿರುವ ಜೀವಾತ್ಮನು ಅವನ ಸೌಂದರ್ಯದಿಂದ ವಶನಾಗಿದ್ದಾನೆ ಮತ್ತು ನಿಪುಣನಾಗಿದ್ದಾನೆ, ಅವನ ಮಾಂತ್ರಿಕ ಕೊಳಲಿನಿಂದ ಆಕರ್ಷಿಸಲ್ಪಟ್ಟಿದ್ದಾನೆ, ಈ ಒಂದು ಪ್ರಭಲವಾದ ಇಚ್ಛೆಗಾಗಿ ಮಾನವ ಆತಂಕಗಳನ್ನು ಮತ್ತು ಕರ್ತವ್ಯಗಳನದನು ವರ್ಜಿಸುತ್ತಿದ್ದಾನೆ ಮತ್ತು ಅದರ ಹಂತಗಳ ಲಯಗಳಲ್ಲಿ ಪ್ರಥಮ ಹಂಬಲದಿಂದ ಮಿಲನದ ಅತ್ಯಾನಂದದವರೆಗೆ ಅಗಲಿಕೆಯ ಯಾತನೆಗಳ, ನಿರಂತರ ಹಂಬಲ ಹಾಗೂ ಪುನರ್ಮಿಲನ, ದೇವರಿಗಾಗಿ ಜೀವಾತ್ಮನ ಪ್ರೇಮದ ಲೀಲೆಯ ಮುಖಾಂತರ ಹಾದು ಹೋಗುತ್ತಿದ್ದಾನೆ. ಈ ಹಂತಗಳಲ್ಲಿ ಸ್ಥಿರಗೊಂಡ ಮನೋಭಾವ ಮತ್ತು ಕ್ರಮಾನುಗತಿ ಇದೆ, ಸೂಕ್ಷ್ಮ ಸರಳವಾದ ಸಾಹಿತ್ಯದ ಲಯವಿದೆ, ಯಥಾರ್ಥತೆಯನ್ನು ಮತ್ತು ಆಗಾಗ್ಗೆ ಅತೀವ ಸೌಂದರ್ಯವನ್ನು ನಿರೂಪಿಸುವ ಸಾಂಪ್ರದಾಯಿಕ ವಾಕ್ಚಾತುರ್ಯವಿದೆ. ಈ ಸಂಪೂರ್ಣ ಸಾಹಿತ್ಯ ರಚನೆಯು ಬಂಗಾಳಿ ಭಾಷೆಯನ್ನು ಬಳಸಿದ ಪ್ರಥಮ ಇಬ್ಬರ ಕವಿಗಳ ಅಸಾಧಾರಣ ಪ್ರತಿಭೆಯಿಂದ ಪರಿಪೂರ್ಣತೆಗೆ ಒಮ್ಮೆಲೆ ಚಿಮ್ಮುತ್ತದೆ. ಮೊದಲನೆಯ ಅಸಾಧಾರಣ ಕವಿ ವಿದ್ಯಾಪತಿ – ಇವನು ಶಬ್ದ ಹಾಗೂ ಪಂಕ್ತಿಯ ನಿಪುಣ ಕಲಾವಿದ. ಎರಡನೆಯ ಕವಿ ಚಂಡಿದಾಸ. ಚಂಡಿದಾಸ ಒಬ್ಬ ಪ್ರೇರಿತ ಹಾಡುಗಾರ. ಯಾವುದೇ ಭಾಷೆಯ ಅತ್ಯಂತ ಮಧುರವಾದ, ಅತ್ಯಂತ ತೀಕ್ಷ್ಣವಾದ ಮತ್ತು ಅತ್ಯಂತ ಸುಂದರವಾದ ಪ್ರೇಮ ಸಾಹಿತ್ಯವು ಕವಿ ಚಂಡಿದಾಸನ ಹೆಸರಿನಲ್ಲಿದೆ. ಇಲ್ಲಿ ಆ ಸಂಕೇತವು ಅದರ ಮನುಷ್ಯನ ಪ್ರಬಲ ಮನೋಭಾವನೆಯ ಅತ್ಯಂತ ಬಾಹ್ಯ ರೂಪದಲ್ಲಿ ಪೋಷಿಸಲ್ಪಟ್ಟಿದೆ ಮತ್ತು ಎಷ್ಟು ನಿರಂತರವಾಗಿ ಎಂದರೆ, ಬಹಳಷ್ಟು ಜನರಿಂದ ಈಗ ಅದು ಬೇರೆ ಏನೂ ಅಲ್ಲವೆಂಬ ಅರ್ಥವನ್ನು ಕಲ್ಪಿಸಲಾಗಿದೆ, ಆದರೆ ಚೈತನ್ಯ ಧರ್ಮದ ಧರ್ಮನಿಷ್ಠ ಕವಿಗಳಿಂದ ಅದೇ ರೂಪಗಳ (ಸಂಕೇತಗಳ) ಬಳಕೆಯಿಂದ ಅದನ್ನು ಬಹಳೇ ಋಣಾತ್ಮಕಗೊಳಿಸಲಾಗಿದೆ. ಈ ಸಂಕೇತದ ಹಿಂದೆ ಇರುವ ಎಲ್ಲ ಆಧ್ಯಾತ್ಮಿಕ ಅನುಭವವು ಆ ಪ್ರೇರಿತ ಧರ್ಮಪ್ರವರ್ತಕ ಮತ್ತು ದಿವ್ಯ ಪ್ರೇಮದ ಪ್ರೀತಿಯ ಭಾವಪರವಶತೆಯ ಅವತಾರದಲ್ಲಿ ಮತ್ತು ಅದರ ಆಧ್ಯಾತ್ಮಿಕ ತತ್ತ್ವ ಶಾಸ್ತ್ರವನ್ನು ಅವರ ಬೋಧನೆಯಲ್ಲಿ ಸ್ಪಷ್ಟ ರೂಪಕ್ಕೆ ತರಲಾಯಿತು. ಅವರ ಅನುಯಾಯಿಗಳು ಹಿಂದಿನ ಗಾಯಕರ ಕಾವ್ಯ ಸಂಪ್ರದಾಯವನ್ನು ಮುಂದುವರೆಸಿಕೊಂಡು ಹೋದರು

ಮತ್ತು ಅವರುಗಳು ಪ್ರತಿಭೆಯಲ್ಲಿ ಅವರ (ಹಿಂದಿನ ಗಾಯಕರ) ಸಮವಾಗಿಲ್ಲದಿದ್ದಾಗ್ಯೂ ರಚನೆಯಲ್ಲಿ ಯಾವಾಗಲೂ ಸುಂದರ ಮತ್ತು ಮೂಲಭೂತವಾಗಿ ಆಳ ಹಾಗೂ ಪರಿಣಾಮ ಬೀರುವ ಈ ರೀತಿಯ ದೊಡ್ಡ ಕಾವ್ಯದ ಸಮೂಹವನ್ನು ಹಿಂದೆ ಬಿಟ್ಟುಹೋದರು. ರಜಪೂತ ರಾಣಿ ಮೀರಾಬಾಯಿಯ ಪರಿಪೂರ್ಣ ಸಾಹಿತ್ಯದಲ್ಲಿ ಇನ್ನೊಂದು ರೀತಿಯ ಕಾವ್ಯ ಸಂಪ್ರದಾಯವು ರಚಿಸಲ್ಪಟ್ಟಿತು. ಈ ಸಂಪ್ರದಾಯದಲ್ಲಿ ಕೃಷ್ಣನ ಸ್ವರೂಪಗಳನ್ನು ಪ್ರೇಮ ಗೀತೆಯಲ್ಲಿ ಮತ್ತು ಗಾಯಕನ ಚೈತನ್ಯದಿಂದ ದೈವೀ ಪ್ರೇಮಿಯ ಅನ್ವೇಷಣೆಯಲ್ಲಿ ನೇರವಾಗಿ ಮಾರ್ಪಡಿಸಲಾಗಿದೆ. ಬಂಗಾಳಿ ಕವಿತೆಯಲ್ಲಿ, ಕವಿಗೆ ವ್ಯಕ್ತಿಗತವಲ್ಲದ ಸಾಂಕೇತಿಕ ಸ್ವರೂಪವು ಪ್ರಮುಖ ಅಭಿವ್ಯಕ್ತಿಯಾಗಿದೆ: ಇಲ್ಲಿ ಒಂದು ವೈಯಕ್ತಿಕ ಟಿಪ್ಪಣಿಯು ಭಾವನೆಗೆ ತನ್ನದೇ ಆದ ತೀವ್ರತೆಯನ್ನು ನೀಡುತ್ತದೆ. ದಕ್ಷಿಣ ಭಾರತದ ಕವಯಿತ್ರಿಯೊಬ್ಬಳು ಕೃಷ್ಣನ ವಧುವಾಗಿ ತನ್ನ ಚಿತ್ರಣದಲ್ಲಿ ಇದಕ್ಕೆ ನೇರವಾದ ತಿರುವನ್ನು ನೀಡುತ್ತಾಳೆ. ಈ ರೀತಿಯ ವೈಷ್ಣವ ಧರ್ಮ ಮತ್ತು ಕವಿತೆಯ ವಿಶಿಷ್ಟ ಶಕ್ತಿಯು ಎಲ್ಲಾ ಮಾನವ ಭಾವನೆಗಳನ್ನು ದೇವರೆಡೆಗೆ ತಿರುಗಿಸುವುದರಲ್ಲಿದೆ, ಪ್ರೀತಿಯ ಭಾವೋದ್ರೇಕವನ್ನು ತೀವ್ರವಾಗಿ ಮತ್ತು ಅವುಗಳಲ್ಲಿ ಮುಳುಗಿ ಹೋಗುವಂತೆ ಆದ್ಯತೆ ನೀಡಲಾಗುತ್ತದೆ, ಮತ್ತು ಭಕ್ತಿ ಧರ್ಮದ ಬಲವಾದ ಬೆಳವಣಿಗೆ ಎಲ್ಲೆಲ್ಲಿದೆಯೋ ಅಲ್ಲೆಲ್ಲ ಈ ಕಲ್ಪನೆಯು ಪುನರಾರ್ತನೆಯಾದರೂ, ಭಾರತೀಯ ಕವಿಗಳ ಕೃತಿಯಲ್ಲಿ ಬಳಸುವಷ್ಟು ಶಕ್ತಿ ಮತ್ತು ಪ್ರಾಮಾಣಿಕತೆಯಿಂದ ಅದನ್ನು ಎಲ್ಲಿಯೂ ಬಳಸಲಾಗಿಲ್ಲ. ಅವೆಲ್ಲದರಲ್ಲೂ ಪ್ರೀತಿಯ ಭಾವನೆಯನ್ನು ತೀವ್ರ ಮತ್ತು ಆಕರ್ಷಕ ಎಂದು ಆದ್ಯತೆ ನೀಡಲಾಗುತ್ತದೆ, ಮತ್ತು ಧರ್ಮ ನಿಷ್ಠೆಯು ಎಲ್ಲೆಲ್ಲಿ ಬಲವಾಗಿ ಬೆಳವಣಿಗೆ ಆಗಿದೆಯೋ ಅಲ್ಲಿ ಈ ಕಲ್ಪನೆಯು ಪುನರಾವರ್ತನೆಯಾಗುತ್ತದೆಯಾದರೂ, ಇದನ್ನು ಭಾರತೀಯ ಕವಿಗಳ ಕೃತಿಯಲ್ಲಿ ಬಳಸಿದಷ್ಟು ಶಕ್ತಿ ಹಾಗೂ ಪ್ರಾಮಾಣಿಕತೆಯಿಂದ ಎಲ್ಲಿಯೂ ಬಳಸಲಾಗಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/379–80**

### ಕೃಷ್ಣ ಮತ್ತು ಕಾಳಿ

ಶ್ರೀ ಕೃಷ್ಣ ತನ್ನನ್ನು ತಾನು ಪ್ರಕಟಿಸಿಕೊಳ್ಳುವುದು ಸಮಯದ ನಿಧಾನ ಪ್ರಕ್ರಿಯೆಯಲ್ಲ; ಯುಗ ಧರ್ಮವು ದಶಕಗಳಿಂದ ಎಚ್ಚರಿಕೆಯಿಂದ ಸಿದ್ಧಪಡಿಸಿದ ಕೆಲಸವನ್ನು ಕ್ಷಣಾರ್ಧದಲ್ಲಿ ಪೂರ್ಣಗೊಳಿಸಿದಂತೆ ಅವನು ಅರ್ಜುನನಿಗೆ

ಕಾಣಿಸಿಕೊಂಡನು. ಎಲ್ಲರೂ ಅನಿವಾರ್ಯವಾಗಿ ಕುರುಕ್ಷೇತ್ರದ ಅನಾಹುತದತ್ತ ಸಾಗುತ್ತಿದ್ದಾರೆ. ಮನುಷ್ಯರಿಗೆ ಇದು ತಿಳಿದಿರಲಿಲ್ಲ: ಈ ಅನಾಹುತವನ್ನು ತಪ್ಪಿಸಲು ಸಾಧ್ಯವಿರುವ ಎಲ್ಲವನ್ನೂ ಮಾಡುವವರು, ಅವರ ಕ್ರಿಯೆ ಅಥವಾ ನಿಷ್ಕ್ರಿಯತೆಯಿಂದ ಅದರ ಬರುವಿಕೆಗೆ ಸಹಾಯ ಮಾಡಿದರು; ಅದರ ಒಂದು ನೋಟವನ್ನು ಹೊಂದಿದ್ದವರು ವಿಧಿಯ ಚಕ್ರಗಳನ್ನು ನಿಲ್ಲಿಸಲು ವ್ಯರ್ಥವಾಗಿ ಶ್ರಮಿಸಿದರು; ಈ ಅನಾಹುತದ ಸುಳಿವನ್ನು ಹೊಂದಿದವರು ವಿಧಿಯ ಚಕ್ರಗಳನ್ನು ನಿಲ್ಲಿಸಲು ವ್ಯರ್ಥ ಪ್ರಯತ್ನ ಮಾಡಿದರು; ಶ್ರೀ ಕೃಷ್ಣನು ಸ್ವತಃ ನಿಷ್ಕಾಮ ಕರ್ಮ ಯೋಗಿಯಾಗಿ ತನ್ನ ಕರ್ತವ್ಯವನ್ನು ಫಲಾಪೇಕ್ಷೆಯಿಲ್ಲದೆ ಮಾಡುತ್ತಾ, ಹಸ್ತಿನಾಪುರಕ್ಕೆ ಆಶಾರಹಿತ ರಾಯಭಾರಕ್ಕೆ ಹೋದನು; ಆದರೆ ಯುಗ ಧರ್ಮವು ಎಲ್ಲವನ್ನೂ ಸೋಲಿಸಿತ್ತು. ನದಿಗಳು ಸಮುದ್ರದ ಕಡೆಗೆ ವೇಗವಾಗಿ ಮುನ್ನುಗ್ಗುವಂತೆ, ಬೆಳಗಿದ ಜ್ವಾಲೆಯ ಕಡೆಗೆ ಪತಂಗಗಳು ತಮ್ಮ ರೆಕ್ಕೆಗಳನ್ನು ಬಡಿದುಕೊಂಡು ಹೋಗುವಂತೆ, ಭವ್ಯವಾದ, ಶಕ್ತಿಯುತ ಮತ್ತು ಜಂಬದ ಭಾರತವು ತನ್ನ ರಾಜ ವಂಶಜರೊಂದಿಗೆ ಮತ್ತು ಅವರ ಆಯುಧಗಳು, ರಥಗಳು ಹಾಗೂ ದೈತ್ಯ ಸೈನ್ಯಗಳೊಂದಿಗೆ ವಿಧ್ವಂಸಕನ ಪ್ರಬಲ ದವಡೆಗಳಲ್ಲಿ ಅವನತಿ ಹೊಂದಲು ಅವನ ತೆರೆದ ಬಾಯಿಯ ಕಡೆಗೆ ಮತ್ತು ಅವನ ಕಡಿಯುವ ಹಲ್ಲುಗಳ ನಡುವೆ ಚಪ್ಪಟೆಯಾಗಲು ರಭಸವಾಗಿ ಧಾವಿಸುತ್ತಿರುವುದನ್ನು ನಂತರದಲ್ಲಿ ಮನುಷ್ಯರು ನೋಡಿದರು. ನಿರಂತರ ಲೀಲೆಯಲ್ಲಿ ಭಯಂಕರವಾದ ಕ್ರಿಯೆಗಳ ಜೊತೆಗೆ ಮಧುರವಾದ ಮತ್ತು ಸುಂದರವಾದ ಕ್ರಿಯೆಗಳೂ ಸಹ ಇವೆ. ಕುರುಕ್ಷೇತ್ರದ ಮೃತ್ಯು ಕುಣಿತವಿಲ್ಲದೆ ಬೃಂದಾವನದ ನೃತ್ಯವು ಪೂರ್ಣಗೊಳ್ಳುವುದಿಲ್ಲ; ಯಾಕಂದರೆ ಪ್ರತಿಯೊಂದೂ ಪ್ರಪಂಚದ ಆ ಮಹಾನ್ ಸುಸಂಗತದ ಕ್ರಿಯೆಯ ಒಂದು ಭಾಗವಾಗಿದೆ, ಇದು ಭಿನ್ನಾಭಿಪ್ರಾಯದಿಂದ ಸೌಹಾರ್ದತೆಯ ಕಡೆಗೆ, ದ್ವೇಷ ಮತ್ತು ಕಲಹದಿಂದ ಪ್ರೀತಿ ಮತ್ತು ಸಹೋದರತ್ವದ ಕಡೆಗೆ, ದುಷ್ಟತನದಿಂದ ಸಂಕಟ ಮತ್ತು ಪಾಪವನ್ನು ಸೌಂದರ್ಯ, ಅತ್ಯಾನಂದ, ಶಿವಂ, ಶಾಂತಂ, ಶುದ್ಧಂ, ಆನಂದಂ ಅಗಿ ಪರಿವರ್ತಿಸುವ ಮೂಲಕ ವಿಕಾಸದ ನೆರವೇರಿಕೆಯ ಕಡೆಗೆ ಮನ್ನಡೆಯುತ್ತದೆ.

ಯುಗ ಧರ್ಮದ ಉದ್ದೇಶವನ್ನು ವಿರೋಧಿಸುವವರು ಯಾರು? ಭಾರತದಲ್ಲಿ ಬಲಿಷ್ಠ ಪುರುಷರಿದ್ದರು, ಆಗ ನೂರರಷ್ಟು ಮಹಾನ್ ತತ್ವ ಜ್ಞಾನಿಗಳು ಮತ್ತು ಯೋಗಿಗಳು, ಸೂಕ್ಷ್ಮ ರಾಜಕಾರಣಿಗಳು, ಜನ ನಾಯಕರು, ಚಿಂತನೆಯ ಹಾಗೂ ಕ್ರಿಯಾಶೀಲ ರಾಜರುಗಳು, ಪ್ರಬಲ ಬೌದ್ಧಿಕ ನಾಗರಿಕತೆಯ ಉತ್ತುಂಗದಲ್ಲಿದ್ದರು. ಇವರಲ್ಲಿ ಕೆಲವರು ಎಡಕ್ಕೆ ಬದಲಾಗಿ ಸ್ವಲ್ಪ ಬಲಕ್ಕೆ (ಅಧರ್ಮದಿಂದ ಧರ್ಮದ

ಕಡೆಗೆ) ತಿರುಗಿದಿದ್ದರೆ ಇಡೀ ಅನಾಹುತವನ್ನು ತಪ್ಪಿಸಬಹುದತ್ತೆಂದು ತೋರುತ್ತದೆ. ಆದ್ದರಿಂದ ಅರ್ಜುನನು ತನ್ನ ಬಿಲ್ಲನ್ನು ಬದಿಗೆ ಒಗೆದಾಗ ಯೋಚಿಸುತ್ತಾನೆ; ಶ್ರೀ ಕೃಷ್ಣನು ಪಾಂಡವರ ಸಂಪೂರ್ಣ ಭರವಸೆಯಾಗಿದ್ದನು ಮತ್ತು ಅವನಿಲ್ಲದೆ ಅವರ ಗೆಲುವು ಬರೀ ಒಂದು ಕನಸೆಂದು ಮತ್ತು ಹೋರಾಟವು ಒಂದು ಮೂರ್ಖತನದ ಕೆಲಸವೆಂದು ತೋರುತ್ತಿತ್ತು. ಆದರೂ ಆತನಿಗೆ ಯುಗ ಧರ್ಮವು ಅತ್ಯಂತ ಶಕ್ತಿಶಾಲಿಗಳ ಸಂಪೂರ್ಣ ಅಸಹಾಯಕತೆಯನ್ನು ಮತ್ತು ದೇವರ ತೀರ್ಪಿನ ಖಚಿತವಾದ ನೆರವೇರಿಕೆಯನ್ನು ಶ್ರುತಪಡಿಸುತ್ತದೆ. "ನೀನಿಲ್ಲದಿದ್ದರೂ ಸಹ, ಅವರು ಎದುರಾಳಿ ಕಾಳಗಪಡೆಗಳಲ್ಲಿ ಸಜ್ಜುಗೊಂಡಿರುವ ಯುದ್ಧ ಪುರುಷರಾಗುವುದಿಲ್ಲ." ಈ ಪುರುಷರು ದೇಹದಲ್ಲಿ ಮಾತ್ರ ಜೀವಂತವಾಗಿರುತ್ತಾರೆ; ಅದರಲ್ಲಿ ಹಿಂದೆ ನಿಂತವರು ಮತ್ತು ತನ್ನನ್ನು ತಾನು ಸಾಧಿಸಿಕೊಳ್ಳುವವರು ಮೃತ ಪುರುಷರಾಗಿರುತ್ತಾರೆ. ದೇವರು ಯಾರನ್ನು ರಕ್ಷಿಸುತ್ತಾನೆ, ಯಾರು ಕೊಲ್ಲುತ್ತಾನೆ? ದೇವರು ಕೊಂದವರನ್ನು ಯಾರು ರಕ್ಷಿಸುತ್ತಾರೆ? ವಧೆ ಮಾಡುವವನು ನಿಮಿತ್ತ ಮಾತ್ರ, ಮುಸುಕಿನ ಹಿಂದೆ ಮಾಡಿದಂಥ ಕಾರ್ಯವು ಅದರ ಈ ಬದಿಯಲ್ಲಿ ಮಾಡಿದಂಥ ಕಾರ್ಯದ ಸಾಧನವಾಗುತ್ತದೆ. ಕುರುಕ್ಷೇತ್ರದಲ್ಲಿ ನಡೆದ ಮಹಾ ವಧೆಯಲ್ಲಿ ಸತ್ಯವಾದುದೇ ಈ ಪ್ರಪಂಚದಲ್ಲಿ ನಡೆಯುವ ಎಲ್ಲಾ ಕೆಲಸಗಳಿಗೂ, ಲೀಲೆಯನ್ನು ರೂಪಿಸುವಂಥ ಎಲ್ಲಾ ಸೃಷ್ಟಿ, ವಿನಾಶ ಮತ್ತು ಸಂರಕ್ಷಣೆಗೂ ಸತ್ಯವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/30–31**

**ಸಾಕಾರ ಮತ್ತು ನಿರಾಕಾರ**

ದೇವರು ಅವನ ರೂಪದಿಂದಾಗಲಿ ಅಥವಾ ಅವನ ನಿರಾಕಾರತೆಯಿಂದಾಗಲಿ ಬಂಧಿಸಲ್ಪಟ್ಟಿಲ್ಲ; ಅವನು ಸಾಧಕನಿಗೆ ತನ್ನನ್ನು ತಾನು ಒಂದು ರೂಪದಲ್ಲಿ ಪ್ರಕಟಪಡಿಸಿಕೊಳ್ಳುತ್ತಾನೆ. ಆ ರೂಪದಲ್ಲಿ ದೇವರು ತನ್ನ ಪೂರ್ಣತೆಯಲ್ಲಿ ಇದ್ದಾನೆ, ಆದಾಗ್ಯೂ ಅದೇ ಸಮಯದಲ್ಲಿ ಅವನು ಇಡೀ ವಿಶ್ವವನ್ನು ವ್ಯಾಪಿಸಿದ್ದಾನೆ. ಯಾಕೆಂದರೆ ದೇವರು ದೇಶಾತೀತ ಮತ್ತು ಕಾಲಾತೀತವಾಗಿದ್ದಾನೆ, ಅವನು ಯಾವುದೇ ಚರ್ಚೆಯಿಂದ ಪ್ರಾಪ್ತವಾಗುವುದಿಲ್ಲ; ಕಾಲ ಮತ್ತು ದೇಶ ಅವನ ಆಟಿಕೆಗಳಾಗಿವೆ. ಅವನು ತನ್ನ ಕಾಲ ಮತ್ತು ದೇಶದ ಜಾಲದಲ್ಲಿ ಸಿಕ್ಕಿಬಿದ್ದ ಎಲ್ಲ ಜೀವಿಗಳೊಂದಿಗೆ ಆಟವಾಡುತ್ತಿದ್ದಾನೆ. ಆದರೆ ನಾವು ಅವನನ್ನು ಆ ಜಾಲದಲ್ಲಿ ಹಿಡಿಯಲು ಸಾಧ್ಯವಾಗುವುದಿಲ್ಲ. ಪ್ರತಿ ಬಾರಿ ತರ್ಕ ಮತ್ತು ತಾತ್ವಿಕ ವಾದದಿಂದ ಈ

ಅಸಾಧ್ಯತೆಯನ್ನು ಸಾಧಿಸಲು ಪ್ರಯತ್ನಿಸಿದಾಗ, ಆ ವಿದೂಷಕ ಜಾಲದಿಂದ ತಪ್ಪಿಸಿಕೊಳ್ಳುತ್ತಾನೆ ಮತ್ತು ನಮ್ಮ ಹಿಂದೆ–ಮುಂದೆ, ನಮ್ಮ ಹತ್ತಿರದಲ್ಲಿ ಮತ್ತು ನಮ್ಮಿಂದ ದೂರದಲ್ಲಿ ನಗುತ್ತಾ ನಿಲ್ಲುತ್ತಾನೆ, ಬುದ್ಧಿ ಶಕ್ತಿಯನ್ನು ಸೋಲಿಸುತ್ತಾ ತನ್ನ ವಿಶ್ವ ರೂಪವನ್ನು ಮತ್ತು ವಿಶ್ವಾತೀತ ರೂಪವನ್ನು ತೆರೆದು ತೋರಿಸುತ್ತಾನೆ. "ನಾನು ಅವನನ್ನು ತಿಳಿದಿದ್ದೇನೆ" ಎಂದು ಯಾರು ಹೇಳುತ್ತಾರೊ ಅವರಿಗೆ ಏನೂ ತಿಳಿದಿಲ್ಲ. "ನಾನು ಅವನನ್ನು ತಿಳಿದಿದ್ದೇನೆ ಅದರೂ ನಾನು ಅವನನ್ನು ತಿಳಿದಿಲ್ಲ" ಎಂದು ಹೇಳುವವನು ನಿಜವಾದ ಜ್ಞಾನವನ್ನು ಹೊಂದಿದ್ದಾನೆ.

**ಬೆಂಗಾಲಿ ಬರಹಗಳು: 88**

## ಬ್ರಹ್ಮಾಂಡ ನೃತ್ಯ

ಬ್ರಹ್ಮಾಂಡ ನೃತ್ಯದಲ್ಲಿ ಎರಡು ಮಾನಗಳಿವೆ.

ನೋವು ಹಾಗೂ ದುಃಖದ, ಭಯಂಕರ ಅಪಾಯಕಾರಿ ಹಾಗೂ ಮಧುರ ಜೀವನದಾಟದ ಅವಕಾಶದ

ಲಯಗಳಲ್ಲಿ ಅಳೆಯುವ ಕಾಳಿಯ ಪಾದದ ಸದ್ದನ್ನು ನಾವು ಯಾವಾಗಲು ಕೇಳುತ್ತಿರುತ್ತೇವೆ.

ಮುಸುಕಿನ ಆರಂಭಿಕ ಅಗ್ನಿಪರೀಕ್ಷೆ,
ಮೃತ್ಯುವಿನ ಅಪ್ಪುಗೆಯೊಂದಿಗೆ ಆಟವಾಡುತ್ತಿರುವ ಮಹಾಪುರುಷನ ಆತ್ಮ,
ನಿಯತಿಯ ಭಯಂಕರ ಗರಡಿ ಮನೆಯಲ್ಲಿನ ಕುಸ್ತಿಪಟು
ಮತ್ತು ತ್ಯಾಗ ಕೃಪೆಗಾಗಿ ಇರುವ ಏಕಾಂಗಿ ಮಾರ್ಗ,

ಮನುಷ್ಯನ ವ್ಯಥೆಗಳು ರಹಸ್ಯಗಳಿಗೆ ಪರಿಹಾರವನ್ನು ಸೂಚಿಸಿದವು,
ಸಮಯದ ವ್ಯರ್ಥ ಕನಸಿನಿಂದ ಸತ್ಯದ ಇಕ್ಕಟ್ಟಾದ ಹಾದಿ,
ಜಡ ವಸ್ತುವಿನ ಸಮಾಧಿಯಿಂದ ಉನ್ನತಿಗೆ ಆತ್ಮದ ಸಪ್ತ ಬಾಗಿಲುಗಳು,
ಇವುಗಳು ಅವಳ ದುರಂತ ಸಂಗತಿಗಳ ಸಾಮಾನ್ಯ ಉದ್ದೇಶಗಳಾಗಿವೆ.

ಆದರೆ ಪ್ರಕೃತಿಯ ಮೂಲಕ ಕೃಷ್ಣನ ನೃತ್ಯವು ಅವನ ಮಾಧುರ್ಯದ ಮುಖವಾಡವನ್ನು, ನಗುವನ್ನು, ಭಾವಪರವಶತೆಯನ್ನು, ಪ್ರೀತಿಯನ್ನು ಯಾವಾಗ ಪ್ರಚೋದಿಸುತ್ತದೆ?

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/590**

## ವಿಶ್ವ–ಚೇತನದ/ಜಗದಾತ್ಮನ ದರ್ಶನ

ವಿಶ್ವ–ಚೈತನ್ಯದ ದರ್ಶನವು ಗೀತೆಯ ಅತ್ಯಂತ ಪ್ರಮುಖವಾದ ಅಂಶವಾಗಿದೆ. ಶ್ರೀ ಕೃಷ್ಣನು ಅರ್ಜುನನ ಮನಸ್ಸಿನಲ್ಲಿ ಮೂಡಿದ ಸಂದೇಹ ಮತ್ತು ಸಂಕೋಚವನ್ನು ತರ್ಕದಿಂದ ಮತ್ತು ಜ್ಞಾನದಿಂದ ಭಾವಗರ್ಭಿತವಾದ ಮಾತುಗಳಿಂದ ದೂರ ಮಾಡಿದನು. ಆದರೆ ತರ್ಕ ಮತ್ತು ಉತ್ತಮ ಉಪದೇಶದಿಂದ ಪಡೆದ ಜ್ಞಾನದ ಅಡಿಪಾಯವು ಗಟ್ಟಿಯಾಗಿರುವುದಿಲ್ಲ. ಜ್ಞಾನವನ್ನು ಸಾಕ್ಷಾತ್ಕರಿಸಿಕೊಂಡಾಗ ಮಾತ್ರ ಅದು ದೃಢವಾಗಿ ನೆಲೆಗೊಳ್ಳುತ್ತದೆ. ಈ ಕಾರಣಕ್ಕಾಗಿ, ಅದೃಶ್ಯವಾಗಿ ಒಳಗಿನ ಪರಮಾತ್ಮನಿಂದ ಪ್ರೇರಿತನಾದ ಅರ್ಜುನನು ವಿಶ್ವಾತ್ಮನನ್ನು ನೋಡುವ ಬಯಕೆಯನ್ನು ವ್ಯಕ್ತಪಡಿಸಿದನು. ಒಮ್ಮೆ ಅರ್ಜುನನು ಈ ವಿಶ್ವಾತ್ಮನ ದರ್ಶನವನ್ನು ಹೊಂದಿದಾಗ, ಅವನ ಸಂದೇಹವು ಶಾಶ್ವತವಾಗಿ ಮಾಯವಾಯಿತು. ಆಗ ಅವನ ಮನಸ್ಸು ಶುದ್ಧವಾಯಿತು, ಗೀತೆಯ ಪರಮ ರಹಸ್ಯವನ್ನು ಸ್ವೀಕರಿಸಲು ಯೋಗ್ಯವಾಯಿತು. ವಿಶ್ವ ಚೈತನ್ಯದ ದರ್ಶನದ ಮೊದಲು ಗೀತೆಯಲ್ಲಿ ವಿವರಿಸಿದ ಜ್ಞಾನವು ಯಾವುದೇ ಆಧ್ಯಾತ್ಮಿಕ ಅನ್ವೇಷಕರಿಗೆ ಉಪಯುಕ್ತವಾದ ಜ್ಞಾನದ ಬಾಹ್ಯ ರೂಪವಾಗಿದೆ. ಆದರೆ ದರ್ಶನದ ನಂತರ ಪ್ರಕಟವಾದ ಜ್ಞಾನವು ಅತ್ಯಂತ ಗುಪ್ತವಾದ ಸತ್ಯವಾಗಿದೆ, ಪರಮ ರಹಸ್ಯ, ಶಾಶ್ವತವಾದ ನಿಯಮವಾಗಿದೆ. ಒಂದು ವೇಳೆ ನಾವು ದರ್ಶನದ ವಿವರಣೆಯನ್ನು ಕಾವ್ಯಾತ್ಮಕ ರೂಪಕವಾಗಿ ನಿರೂಪಿಸಿದರೆ, ಆಗ ಗೀತೆಯ ಸತ್ಯ, ಆಳ ಮತ್ತು ಗಾಂಭೀರ್ಯತೆಯು ನಾಶವಾಗುತ್ತದೆ ಮತ್ತು ಯೋಗದಿಂದ ಪಡೆದ ಅತ್ಯಂತ ಗಹನವಾದ ಬೋಧನೆಗಳು ಕೆಲ ತಾತ್ವಿಕ ದೃಷ್ಟಿಕೋನಗಳಿಗೆ ಮತ್ತು ಕಾವ್ಯದ ಕಲ್ಪನೆಗಳ ಸಂಗ್ರಹಕ್ಕೆ ಸೀಮಿತವಾಗಿ ಬಿಡುತ್ತದೆ. ವಿಶ್ವಾತ್ಮನ ದರ್ಶನವು ಒಂದು ಕಾಲ್ಪನಿಕ ಅಥವಾ ಕಾವ್ಯಾತ್ಮಕ ರೂಪಕವಾಗಿರದೆ ಒಂದು ಸತ್ಯವಾಗಿದೆ; ಇದು ಅಲೌಕಿಕ ಸತ್ಯವೂ ಅಲ್ಲ. ವಿಶ್ವವು ಪ್ರಕೃತಿಯಲ್ಲಿ ಅಂತರ್ಗತವಾಗಿರುವುದರಿಂದ, ವಿಶ್ವ ರೂಪವು ಒಂದು ಅಲೌಕಿಕ ವಿದ್ಯಮಾನವಾಗಿರಲು ಸಾಧ್ಯವಿಲ್ಲ. ವಿಶ್ವ–ಚೈತನ್ಯವು ಕಾರಣ ಪ್ರಪಂಚದ ಸತ್ಯವಾಗಿದೆ ಮತ್ತು ಕಾರಣ ಪ್ರಪಂಚದ ರೂಪಗಳು ಯೋಗ ದೃಷ್ಟಿಗೆ ಗೋಚರಿಸುತ್ತವೆ. ಯೋಗದ ದೃಷ್ಟಿಯುಳ್ಳ ಅರ್ಜುನನು ಕಾರಣ ಪ್ರಪಂಚದಲ್ಲಿ ವಿಶ್ವಾತ್ಮನ ರೂಪವನ್ನು ಕಂಡನು.

**ಬೆಂಗಾಲಿ ಬರಹಗಳು: 86–87**

**ವಿಶ್ವ ರೂಪ**

ಕಾರಣ ಜಗತ್ತಿನಲ್ಲಿ ಯಾವುದನ್ನು ನಿರ್ಧರಿಸಲಾಗುತ್ತದೆಯೋ ಅದು ನಮ್ಮ ಕಾಲ ಹಾಗೂ ದೇಶವನ್ನು ಮೀರಿದ ಸೂಕ್ಷ್ಮ ಜಗತ್ತಿನಲ್ಲಿ ಪ್ರತಿಫಲಿಸುತ್ತದೆ ಮತ್ತು ಭೌತಿಕ ಪ್ರಪಂಚದ ನಿಯಮಗಳ ಪ್ರಕಾರ ಭೌತಿಕ ಜಗತ್ತಿನಲ್ಲಿ ಭಾಗಶಃ ಜಾರಿಯಾಗುತ್ತದೆ. ಶ್ರೀ ಕೃಷ್ಣನು ಅರ್ಜುನನಿಗೆ ಹೇಳಿದನು, "ಧೃತರಾಷ್ಟ್ರನ ಮಕ್ಕಳು ಈಗಾಗಲೇ ನನ್ನಿಂದ ಹತರಾಗಿದ್ದಾರೆ," ಆದರೂ ಅವರು ಯುದ್ಧಭೂಮಿಯಲ್ಲಿ ಜೀವಂತವಾಗಿ ಯುದ್ಧ ಮಾಡುತ್ತಾ ಅವನ ಮುಂದೆ ನಿಂತಿದ್ದಾರೆ. ಪರಮಾತ್ಮನ ಮಾತುಗಳು ಸುಳ್ಳು ಹೇಳಿಕೆಯೂ ಅಲ್ಲ, ರೂಪಕವೂ ಅಲ್ಲ. ಆತನು ಅವರನ್ನು ಈಗಾಗಲೇ ಕಾರಣ ಜಗತ್ತಿನಲ್ಲಿ ಕೊಂದಿದ್ದಾನೆ, ಇಲ್ಲದಿದ್ದರೆ ಈ ಜಗತ್ತಿನಲ್ಲಿ ಅವರನ್ನು ಕೊಲ್ಲುವುದು ಅಸಾಧ್ಯ. ನಮ್ಮ ನಿಜ ಜೀವನವು ಕಾರಣ ಪ್ರಪಂಚದಲ್ಲಿದೆ; ಅದರ ಛಾಯೆ ಮಾತ್ರ ಭೌತಿಕ ಪ್ರಪಂಚದ ಮೇಲೆ ಬೀಳುತ್ತದೆ. ಆದರೆ ನಿಯಮಗಳು, ಕಾಲ ಮತ್ತು ದೇಶ, ಹೆಸರು ಮತ್ತು ರೂಪವು ಕಾರಣ ಸ್ತರದಲ್ಲಿ ವಿಭಿನ್ನವಾಗಿದೆ. ವಿಶ್ವ ಚೇತನವು ಯೋಗದ ಕಣ್ಣಿಗೆ ಭೌತಿಕ ಜಗತ್ತಿನಲ್ಲಿ ಗೋಚರಿಸುವ ಕಾರಣ ಪ್ರಪಂಚದ ಒಂದು ರೂಪವಾಗಿದೆ.

**ಬೆಂಗಾಲಿ ಬರಹಗಳು: 89–90**



**ಕೃಷ್ಣ**

ಕೊನೆಗೆ ನಾನು ಆತ್ಮನ ಜನನದ ಅರ್ಥವನ್ನು ಕಂಡುಕೊಂಡೆ
ಈ ಭಯಾನಕ ಮತ್ತು ಮಧುರವಾದ ವಿಶ್ವದಲಿ,
ಭೂಮಿಯ ಹಸಿದ ಹೃದಯವನ್ನು ಅನುಭವಿಸಿದ ನಾನು
ಕೃಷ್ಣನ ಪಾದಗಳಿಗೆ ಸ್ವರ್ಗವನ್ನು ಮೀರಿ ಹಾತೊರೆಯುವೆ.

ನಾನು ಅಮೃತ ಕಣ್ಣುಗಳ ಸೌಂದರ್ಯವನ್ನು ನೋಡಿರುವೆ,
ಮತ್ತು ಪ್ರೇಮಿಯ ಕೊಳಲಿನ ಅನುರಾಗವನ್ನು ಕೇಳಿರುವೆ,
ಮತ್ತು ಶಾಶ್ವತ ಪರಮಾನಂದದ ವಿಸ್ಮಯವನ್ನು ಮತ್ತು
ನನ್ನ ಹೃದಯದಲ್ಲಿ ಸದಾ ಮೌನವಾದ ದುಃಖವನ್ನು ತಿಳಿದಿದ್ದೇನೆ.

ಈಗ ಸಂಗೀತವು ಹತ್ತಿರ–ಹತ್ತಿರಕೆ ಸೆಳೆಯುತಿದೆ,
ಜೀವನವು ಅಪೂರ್ವವಾದ ಸಂತೋಷದಿಂದ ಕಂಪಿಸುತ್ತದೆ;
ಎಲ್ಲಾ ಪ್ರಕೃತಿಯು ವಿಶಾಲವಾದ ಮೋಹಕ ವಿರಾಮವಾಗಿದೆ
ತನ್ನ ಪ್ರಭುವು ಸ್ಪರ್ಶಿಸುವನೆಂದು, ಅಪ್ಪಿಕೊಳ್ಳುವನೆಂದು, ಆಶಿಸುತ್ತಾ.

ಈ ಒಂದು ಕ್ಷಣಕ್ಕಾಗಿ ಯುಗಗಳಿಂದ ಜೀವಿಸಿದ್ದೇನೆ;
ಕೊನೆಗೂ ಸಾರ್ಥಕ ಜಗತ್ತು ಈಗ ನನ್ನಲ್ಲಿ ಮಿಡಿಯುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/608 – ಶ್ರೀ ಅರವಿಂದರು**

# ಶ್ರೀ ಕೃಷ್ಣನ ಬೋಧನೆಗಳು

## ಶ್ರೀ ಅರವಿಂದರ ಬೋಧನೆಗಳು

ಅರ್ಜುನನು ಕೇಳಿದನು, "ಯೋಗದಲ್ಲಿ ಸ್ಥಾಪಿತವಾದ ಅಪೇಕ್ಷೆಯಿಲ್ಲದ ಬುದ್ಧಿಯು ಕರ್ಮಕ್ಕಿಂತ ದೊಡ್ಡದಾಗಿದ್ದರೆ, ನನ್ನ ಹಿರಿಯರನ್ನು ಕೊಲ್ಲುವ ಈ ಭಯಾನಕ ಕೆಲಸದಲ್ಲಿ ನೀವು ನನ್ನನ್ನು ಏಕೆ ತೊಡಗಿಸಿಕೊಂಡಿದ್ದೀರಿ?" ಅನೇಕರು ಅರ್ಜುನನ ಪ್ರಶ್ನೆಯನ್ನು ಪುನರುಚ್ಚರಿಸಿದ್ದಾರೆ, ಕೆಲವರು ಅವನನ್ನು ಕೆಟ್ಟ ಪ್ರತಿ ಗೀತ ಎಂದು ಕರೆಯಲು ಹಿಂಜರಿದಿಲ್ಲ, ವೈರಾಗ್ಯಕ್ಕಿಂತ ಸನ್ಯಾಸತ್ವವು ಶ್ರೇಷ್ಠವೆಂದು, ಭಗವಂತನನ್ನು ಸ್ಮರಿಸಿ ತನ್ನ ಕೆಲಸವನ್ನು ಅಪೇಕ್ಷೆಯಿಲ್ಲದೆ ಮಾಡುವುದು ನಮ್ಮಿಚ್ಛೆಯಂತೆ ಮಾಡುವ ಸ್ವಾತಂತ್ರ್ಯಕ್ಕಿಂತ ದೊಡ್ಡದು ಎಂದು ಶ್ರೀ ಕೃಷ್ಣ ವಿವರಿಸಿದ್ದಾನೆ. ವೈರಾಗ್ಯವೆಂದರೆ ಆಸೆಯನ್ನು ತ್ಯಜಿಸುವುದು, ಸ್ವಾರ್ಥವನ್ನು ತ್ಯಜಿಸುವುದು. ವೈರಾಗ್ಯವನ್ನು ಕಲಿಯಲು ನಾವು ಏಕಾಂತದ ಮೊರೆ ಹೋಗಬೇಕಾಗಿಲ್ಲ. ಆ ಪಾಠವನ್ನು ಕಾರ್ಯಕ್ಷೇತ್ರದಲ್ಲಿ ಕಾರ್ಯದ ಮೂಲಕ ಕಲಿಯಬೇಕಾಗಿದೆ; ಕಾರ್ಯವು ಯೋಗ ಪಥದಲ್ಲಿ ಮುನ್ನಡೆಯುವ ಸಾಧನವಾಗಿದೆ. ವೈವಿಧ್ಯಮಯ ಲೀಲಾ ಪ್ರಪಂಚವನ್ನು ಅದರ ಜೀವಿಗಳಿಗೆ ಆನಂದವನ್ನು ತರುವ ಉದ್ದೇಶಕ್ಕಾಗಿ ಸೃಷ್ಟಿಸಲಾಗಿದೆ. ಈ ಆನಂದದಾಟವು ನಿಲ್ಲಬೇಕೆಂದು ದೇವರ ಉದ್ದೇಶವಾಗಿಲ್ಲ. ಜಗತ್ತನ್ನು ಆನಂದದಿಂದ ತುಂಬಲು

ಜೀವಿಗಳು ತನ್ನ ಒಡನಾಡಿಗಳು ಮತ್ತು ಆಟದ ಸಹಚರರಾಗಬೇಕೆಂದು ಅವನು ಬಯಸುತ್ತಾನೆ. ನಾವು ಅಜ್ಞಾನದ ಅಂಧಕಾರದಲ್ಲಿದ್ದೇವೆ; ಏಕೆಂದರೆ, ಲೀಲೆಯ ನಿಮಿತ್ತ ಭಗವಂತ ತನ್ನನ್ನು ತಾನು ಪ್ರತ್ಯೇಕವಾಗಿರಿಸಿಕೊಂಡಿದ್ದಾನೆ ಮತ್ತು ಈ ರೀತಿಯಾಗಿ ತನ್ನನ್ನು ತಾನು ಅಸ್ಪಷ್ಟತೆಯಿಂದ ಆವರಿಸಿಕೊಂಡಿದ್ದಾನೆ. ಅವನು ನಿಗದಿಪಡಿಸಿದ ಮಾರ್ಗಗಳು ಹಲವು. ಆ ಮಾರ್ಗಗಳನ್ನು ಅನುಸರಿಸಿದರೆ ಅವನು ನಮ್ಮನ್ನು ಕತ್ತಲೆಯಿಂದ ಹೊರ ತೆಗೆಯುತ್ತಾನೆ ಮತ್ತು ನಮ್ಮನ್ನು ತನ್ನ ಸಾಮಿಪ್ಯಕ್ಕೆ ಕರೆದುಕೊಳ್ಳುತ್ತಾನೆ. ಯಾರಿಗಾದರೂ ಈ ಲೀಲೆಯಲ್ಲಿ ಆಸಕ್ತಿಯಿಲ್ಲದಿದ್ದರೆ ಮತ್ತು ವಿಶ್ರಾಂತಿಯನ್ನು ಬಯಸಿದರೆ, ದೇವರು ಅವನ ಆಸೆಯನ್ನು ಪೂರೈಸುತ್ತಾನೆ. ಆದರೆ ಯಾರಾದರು ತನ್ನ ಸಲುವಾಗಿ ತನ್ನ ಮಾರ್ಗವನ್ನು ಅನುಸರಿಸಿದರೆ, ಆಗ ದೇವರು ಆತನನ್ನು ಈ ಜಗತ್ತಿನಲ್ಲಿ ಅಥವಾ ಬೇರೆಡೆ ತನ್ನ ಯೋಗ್ಯ ಒಡನಾಡಿಯನ್ನಾಗಿ ಆರಿಸಿಕೊಳ್ಳುತ್ತಾನೆ. ಅರ್ಜುನನು ಕೃಷ್ಣನ ಆತ್ಮೀಯ ಒಡನಾಡಿಯಾಗಿದ್ದನು, ಆದ್ದರಿಂದ ಅವನು ಗೀತೆಯ ಪರಮ ರಹಸ್ಯದ ಬೋಧನೆಯನ್ನು ಪಡೆದನು.

**ಬೆಂಗಾಲಿ ಬರಹಗಳು: 83–84**

**ಕರ್ಮಗಳ ಮಾರ್ಗ**

ಪರಮಾತ್ಮನು ಅರ್ಜುನನಿಗೆ ಹೇಳಿದನು, ಕರ್ಮವನ್ನು ತ್ಯಜಿಸುವುದು ಜಗತ್ತಿಗೆ ಹಾನಿಕಾರಕವಾಗಿದೆ, ಕರ್ಮವನ್ನು ತ್ಯಜಿಸುವುದು ವೈರಾಗ್ಯದ ಮನೋಭಾವವಾಗಿದೆ. ತ್ಯಾಗವಿಲ್ಲದ ವೈರಾಗ್ಯವು ಅರ್ಥಹೀನವಾಗಿದೆ. ನಾವು ತಪಸ್ಸಿನಿಂದ ಏನನ್ನು ಪಡೆದುಕೊಳ್ಳುತ್ತೇವೆಯೋ ಅದನ್ನು ತ್ಯಾಗದಿಂದಲೂ ಪಡೆದುಕೊಳ್ಳಬಹುದು, ಅಂದರೆ ಅಜ್ಞಾನದಿಂದ ಮುಕ್ತಿಯನ್ನು, ಸಮಚಿತ್ತತೆಯನ್ನು, ಶಕ್ತಿಯನ್ನು, ಆನಂದವನ್ನು, ಶ್ರೀ ಕೃಷ್ಣನೊಂದಿಗಿನ ಐಕ್ಯವನ್ನು ಪಡೆದುಕೊಳ್ಳಬಹುದು. ಎಲ್ಲರಿಂದಲೂ ಪೂಜಿಸಲ್ಪಡುವ ಮನುಷ್ಯ ಏನೇ ಮಾಡಿದರೂ, ಜನರು ಅದನ್ನೇ ಆದರ್ಶವನ್ನಾಗಿಟ್ಟುಕೊಂಡು ಅನುಸರಿಸುತ್ತಾರೆ. ಆದ್ದರಿಂದ, ನೀವು ಸನ್ಯಾಸದಿಂದ ಕರ್ಮವನ್ನು ತ್ಯಜಿಸಿದರೆ, ಎಲ್ಲರೂ ಆ ಮಾರ್ಗವನ್ನು ಅನುಸರಿಸುತ್ತಾರೆ ಮತ್ತು ಸಾಮಾಜಿಕ ಮೌಲ್ಯಗಳ ಗೊಂದಲವನ್ನು ಮತ್ತು ತಪ್ಪು ನಿಯಮದ ಆಳ್ವಿಕೆಯನ್ನು ಹುಟ್ಟು ಹಾಕುತ್ತಾರೆ. ನೀವು ಕರ್ಮ ಫಲದ ಬಯಕೆಯನ್ನು ಬಿಟ್ಟು ಮನುಷ್ಯನ ಸಾಮಾನ್ಯ ಜೀವನ ನಿಯಮವನ್ನು ಅನುಸರಿಸಿದರೆ, ಪ್ರತಿಯೊಬ್ಬರು ತಮ್ಮದೇ ಆದ ಚಟುವಟಿಕೆಯನ್ನು ಅನುಸರಿಸಲು ಮನುಷ್ಯರನ್ನು ಪ್ರೇರೇಪಿಸಿದರೆ, ಆಗ ನೀವು ನನ್ನ ಜೀವನ ನಿಯಮದೊಂದಿಗೆ

ಒಂದಾಗುತ್ತೀರಿ ಮತ್ತು ನನ್ನ ಆತ್ಮೀಯ ಸ್ನೇಹಿತರಾಗುತ್ತೀರಿ. ಕರ್ಮಗಳ ಮೂಲಕ ಸರಿಯಾದ ಮಾರ್ಗವನ್ನು ಅನುಸರಿಸುವುದು ಮತ್ತು ಅಂತಿಮವಾಗಿ ಮಾರ್ಗದ ಕೊನೆಯಲ್ಲಿ ಶಾಂತತೆಯನ್ನು ಪಡೆಯುವುದು ನಿಯಮವಾಗಿದೆ ಎಂದು ಶ್ರೀ ಕೃಷ್ಣ ವಿವರಿಸುತ್ತಾನೆ. ಆದರೆ ಇದು ತಪಸ್ಸಿನ ಮೂಲಕ ಕರ್ಮವನ್ನು ತ್ಯಜಿಸುವುದಲ್ಲ, ಇದು ಅಹಂಕಾರವನ್ನು ತಿರಸ್ಕರಿಸುವ ಮೂಲಕ ಮತ್ತು ದೇವರೊಂದಿಗಿನ ಐಕ್ಯತೆಯ ಮೂಲಕ ಅಪಾರ ಶ್ರಮ ಮತ್ತು ಶ್ರಮವನ್ನು ಒಳಗೊಂಡಿರುವ ಕ್ರಿಯೆಯ ಎಲ್ಲ ಪ್ರಾಣಿಕ ಪ್ರಚೋದನೆಯನ್ನು ತ್ಯಜಿಸುವುದಾಗಿದೆ – ಮತ್ತು ಎಲ್ಲಾ ಗುಣಗಳನ್ನು ಮೀರಿ, ಅವನ ಬಲದಿಂದ ಪ್ರೇರಿತ ಸಾಧನವಾಗಿ ಕರ್ಮಗಳನ್ನು ಮಾಡುವುದಾಗಿದೆ. ಆ ಸ್ಥಿತಿಯಲ್ಲಿ ಆತ್ಮದ ಶಾಶ್ವತ ಪ್ರಜ್ಞೆಯು ಕರ್ತನಲ್ಲ, ಅವನು ಸಾಕ್ಷಿ ಮಾತ್ರ, ಪರಮಾತ್ಮನ ಅಂಶ; ಇದು ದಿವ್ಯ ಶಕ್ತಿಯಾಗಿದ್ದು, ಅದು ಆತನ ಸ್ವಂತ ಇರುವಿಕೆಯ ಆಂತರಿಕ ನಿಯಮದಿಂದ ಕ್ರಿಯೆಗಾಗಿ (ಕರ್ಮ ಮಾಡುವುದಕ್ಕಾಗಿ) ರಚಿಸಲ್ಪಟ್ಟ ಆತನ ದೇಹದ ಮುಖಾಂತರ ಕಾರ್ಯ ನಿರ್ವಹಿಸುತ್ತದೆ. ಆತ್ಮನು ಸಾಕ್ಷಿಯಾಗಿದ್ದಾನೆ ಮತ್ತು ಆನಂದಿಸುವವನಾಗಿದ್ದಾನೆ, ಪ್ರಕೃತಿಯ ಕರ್ತನಾಗಿದ್ದಾನೆ, ಪರಮಾತ್ಮನು ಅನುಮೋದನೆ ನೀಡುವವನಾಗಿದ್ದಾನೆ. ಹಾಗೆ ಪ್ರಕಾಶಿಸಲ್ಪಟ್ಟ ಪುರುಷನು ದೈವೀ ಶಕ್ತಿಯು ಕೈಗೊಳ್ಳುವ ಯಾವುದೇ ಕೆಲಸಕ್ಕೆ ಸಹಾಯ ಮಾಡಲು ಅಥವಾ ಅಡ್ಡಿಪಡಿಸಲು ಪ್ರಯತ್ನಿಸುವುದಿಲ್ಲ. ಶಕ್ತಿಗೆ ಸಮರ್ಪಿಸಿಕೊಂಡ ದೇಹ, ಮನಸ್ಸು ಮತ್ತು ಬುದ್ಧಿಯು ದೇವರು ನೇಮಿಸಿದ ಕರ್ಮಗಳಲ್ಲಿ ತಮ್ಮನ್ನು ತೊಡಗಿಸಿ–ಕೊಳ್ಳುತ್ತವೆ. ಕುರುಕ್ಷೇತ್ರದಂತಹ ಭೀಕರ ಹತ್ಯಾಕಾಂಡವು ಸಹ ದೇವರಿಂದ ಅನುಮೋದಿಸಲ್ಪಟ್ಟಿದ್ದರೆ, ನಮ್ಮ ಸ್ವಧರ್ಮದ (ಆಂತರಿಕ ನಿಯಮದ) ನೆರವೇರಿಕೆಯ ಸಂದರ್ಭದಲ್ಲಿ ಸಂಭವಿಸಿದ್ದರೆ ಅದು ಆತ್ಮನನ್ನು ಪಾಪದಿಂದ ಮಲಿನ ಮಾಡಲು ಸಾಧ್ಯವಿಲ್ಲ, ಆದರೆ ಕೆಲವರು ಮಾತ್ರ ಈ ಜ್ಞಾನಕ್ಕೆ ಮತ್ತು ಈ ಗುರಿಗೆ ತಲುಪಬಹುದು. ಇದು ಸಾಮಾನ್ಯರ ಜೀವನ ನಿಯಮವಾಗಲಾರದು. ಹಾಗಾದರೆ ಸಾಮಾನ್ಯ ದಾರಿಹೋಕರ ಕರ್ತವ್ಯವೇನು? ಅವರಿಗೂ ಕೂಡ "ಅವನು ಭಗವಂತ, ನಾನು ಸಾಧನ" ಎಂಬ ತಿಳಿವಳಿಕೆ ಸ್ವಲ್ಪ ಮಟ್ಟಿಗೆ ಅವರ ವ್ಯಾಪ್ತಿಯಲ್ಲಿದೆ. ಈ ಜ್ಞಾನದ ಮೂಲಕ ಯಾವಾಗಲೂ ದೇವರನ್ನು ಸ್ಮರಿಸಲು ಮತ್ತು ನಮ್ಮ ಆಂತರಿಕ ಜೀವನ ನಿಯಮವನ್ನು ಅನುಸರಿಸಲು ನಿರ್ದೇಶನ ನೀಡಲಾಗಿದೆ.

"ನಮ್ಮ ಸ್ವಂತ ಕರ್ಮದ ನಿಯಮ – ಸ್ವಧರ್ಮ ದೋಷಪೂರಿತವಾಗಿದ್ದರೂ, ಚೆನ್ನಾಗಿ ಸಿದ್ಧಪಡಿಸಿದ ಪರಕೀಯ ಕಾನೂನಿಗಿಂತ ಉತ್ತಮವಾಗಿದೆ; ನಮ್ಮ ಸ್ವಂತ

ನಿಯಮದಲ್ಲಿ ಸಾವು ಉತ್ತಮವಾಗಿದೆ, ಪರಕೀಯ ನಿಯಮವನ್ನು ಅನುಸರಿಸುವುದು ಅಪಾಯಕಾರಿಯಾಗಿದೆ."

**ಬೆಂಗಾಲಿ ಬರಹಗಳು: 84–85**



## ಶ್ರೀ ಕೃಷ್ಣನ ಸೂಕ್ತಿಗಳು

**– ಅನು: ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

### ಒಂದು ಕುತೂಹಲಕಾರಿ ಸ್ವಾರಸ್ಯಪೂರ್ಣ ಘಟನೆ
### ರಾಧೆಯ ಪ್ರಾರ್ಥನೆ

1932ನೇ ಇಸವಿ ಜನವರಿ 12ರಂದು ಶ್ರೀಮಾತೆಯವರು ಮೂಲತಃ "ರಾಧೆಯ ಪ್ರಾರ್ಥನೆ"ಯನ್ನು ಆಂಗ್ಲ ಭಾಷೆಯಲ್ಲಿ ಬರೆದರು. ಮಾರನೆಯ ದಿನ ಅದನ್ನು ಫ್ರೆಂಚ್ ಭಾಷೆಗೆ ಅನುವಾದಿಸಿದರು. ಆಂಗ್ಲ ಭಾಷೆಗೆ ಫ್ರೆಂಚ್ ಕೃತಿಯನ್ನು ಶ್ರೀ ಅರವಿಂದೋರವರು ಅನುವಾದಿಸಿದರು.

ರಾಧೆಯ ಬಗ್ಗೆ ಒಂದು ನೃತ್ಯ ಮಾಡಲು ಸಿದ್ಧಪಡಿಸಿಕೊಳ್ಳುತ್ತಿದ್ದ ಓರ್ವ ಶಿಷ್ಯನಿಗಾಗಿ ಶ್ರೀಮಾತೆಯವರು ಈ ಪ್ರಾರ್ಥನೆಯನ್ನು ರಚಿಸಿದರು. ಶ್ರೀಮಾತೆಯವರು ಶಿಷ್ಯನಿಗೆ ಈ ರೀತಿ ಪತ್ರ ಬರೆದರು.

ರಾಧೆಯ ನೃತ್ಯದ ಬಗ್ಗೆ ನಾನು ನಿನಗೆ ನಿನ್ನೆ ಹೇಳಿದುದನ್ನು ಪೂರ್ಣಗೊಳಿಸಲು, ಕೊನೆಯಲ್ಲಿ ಕೃಷ್ಣನ ಮುಂದೆ ರಾಧೆಯು ನಿಂತಾಗ ಯಾವ ಚಿಂತನೆ ಮತ್ತು ಭಾವನೆಗಳನ್ನು ರಾಧೆಯು ಹೊಂದಿರಬೇಕು ಎಂಬುದನ್ನು ವಿವರಿಸಲು ತಿಳಿಸಿ ಕೆಲವು ಸೂಚನೆಗಳನ್ನು ನೀಡಿರುವೆನು:

"ನನ್ನ ಮನಸ್ಸಿನ ಪ್ರತಿಯೊಂದು ಚಿಂತನೆ, ನನ್ನ ಹೃದಯದ ಪ್ರತಿಯೊಂದು ಭಾವನೆ, ನನ್ನ ಸತ್ತೆಯ ಪ್ರತಿಯೊಂದು ಚಲನೆ, ಪ್ರತಿಯೊಂದು ಅನುಭವ ಮತ್ತು ಪ್ರತಿಯೊಂದು ಸಂವೇದನೆ, ನನ್ನ ದೇಹದ ಪ್ರತಿಯೊಂದು ಕಣ, ನನ್ನ ನೆತ್ತರಿನ ಪ್ರತಿಯೊಂದು ಹನಿ, ಸಮಸ್ತವೂ ನಿನ್ನದಾಗಿದೆ. ಸಂಪೂರ್ಣವಾಗಿ ನಿನ್ನದಾಗಿದೆ ಯಾವುದೂ ಪರಿಮಿತಿ ಇಲ್ಲದೆ, ನನ್ನ ಜೀವನವನ್ನು ಅಥವಾ ನನ್ನ ಮರಣವನ್ನು ನೀನು ನಿರ್ಧರಿಸಬಹುದು. ನನ್ನ ಸಂತಸ ಅಥವಾ ನನ್ನ ದುಃಖ, ನನ್ನ ನೋವು ಮತ್ತು ನಲಿವು, ನೀನು ನನಗೆ ಏನೇ ಮಾಡಿದರೂ, ನಿನ್ನಿಂದ ನನ್ನ ಬಳಿಗೆ ಏನೇ ಬಂದರೂ ಅದು ದೈವೀ ಮಹದಾನಂದದ ಕಡೆಗೆ ನನ್ನನ್ನು ಮುನ್ನಡೆಸುವದು."
CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/210

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/662 – ಶ್ರೀ ಅರವಿಂದರು**

## ಶ್ರೀ ಕೃಷ್ಣನನ್ನು ಉದ್ದೇಶಿಸಿದ ತಿರುಳ್ನುಡಿ

ಭಗವಂತನು ಪ್ರೀತಿಸುವನು. ಆದುದರಿಂದ ಆತನು ಓರ್ವ ಶ್ರೇಷ್ಠ ಮತ್ತು ಕ್ರೂರ ಚಿತ್ರಹಿಂಸಕ. ನೀನು ಕೃಷ್ಣನನ್ನು ನೋಡಿಲ್ಲ ಮತ್ತು ಆತನೊಂದಿಗೆ ಆಟವಾಡಿಲ್ಲ. ಆದುದರಿಂದ ನಿನಗೆ ಇದು ಅರ್ಥವಾಗುವದಿಲ್ಲ.

*"ಕೃಷ್ಣನೊಂದಿಗೆ ಆಟವಾಡುವುದು" ಎಂದರೆ ಏನು?*

*"ಶ್ರೇಷ್ಠ ಮತ್ತು ಕ್ರೂರ ಚಿತ್ರಹಿಂಸಕನಾಗಿರುವನು ಭಗವಂತ" ಎಂದರೆ ಏನು ಅರ್ಥ?*

ಸಮಸ್ತ ವಸ್ತುಗಳಲ್ಲಿ ಮತ್ತು ಪ್ರತಿಯೊಬ್ಬರಲ್ಲಿ ಅಂತರ್ಗತ ದೈವ ಮತ್ತು ದೈವೀ ಸನ್ನಿಧಿಯಾಗಿ ಇರುವನು ಕೃಷ್ಣ. ಆತನು ಪರಮೋನ್ನತನ ಆನಂದ ಮತ್ತು ಪ್ರೇಮದ ಪರಮೋಚ್ಛ ಅಂಶವಾಗಿರುವನು. ಆತನು ಮುಗುಳ್ನಗುವ ಕೋಮಲತೆಯಾಗಿರುವನು. ಆತನು ಕ್ರೀಡೆಯ ಹರ್ಷವಾಗಿರುವನು. ಆತನು ಒಮ್ಮೆಲೇ ಆಟವಾಡುವವನು. ಆಟ ಮತ್ತು ಆತನ ಆಟದ ಎಲ್ಲಾ ಜೊತೆಗಾರರಾಗಿರುವನು. ಆಟ ಮತ್ತು ಅದರ ಫಲಿತಾಂಶಗಳೆರಡನ್ನೂ ಪ್ರಜ್ಞಾಪೂರ್ವಕವಾಗಿ ಅರಿತು, (ಸಂಪೂರ್ಣವಾಗಿ) ಸಂಕಲ್ಪಿಸಿ, ವ್ಯವಸ್ಥಿತಗೊಳಿಸಿ ಆಟವಾಡಲಾಗುತ್ತಿದೆ. ಆದುದರಿಂದ ಆಟದ ಆನಂದವನ್ನು ಹೊರತುಪಡಿಸಿ ಬೇರೆ ಇನ್ನು ಯಾವುದಕ್ಕೂ ಅವಕಾಶವಿಲ್ಲ. ಈ ರೀತಿ ಅಂತರಿಕ

ಪರಮೊತ್ತಮ ದೈವವನ್ನು ಗುರುತಿಸುವದೇ ಕೃಷ್ಣನ ದರ್ಶನ. ಅಂತರಿಕ ಪರಮೋತ್ತಮ ದೈವದೊಂದಿಗೆ ತನ್ನನ್ನು ತಾನು ಗುರುತಿಸಿಕೊಳ್ಳುವದೇ ಕೃಷ್ಣನೊಂದಿಗಿನ ಕ್ರೀಡೆ. ಜೊತೆಗೆ ಕೃಷ್ಣನ ಪ್ರಜ್ಞೆಯಲ್ಲಿ ಭಾಗಿಯಾಗುವದೂ ಆಟವೇ. ನೀನು ಈ ಅವಸ್ಥೆಯನ್ನು ತಲುಪಿದಾಗ, ತಕ್ಷಣವೇ ದೈವೀ ಕ್ರೀಡೆಯ ಪರಮಾನಂದದೊಳಗೆ ಪ್ರವೇಶಿಸುವೆ. ಕೃಷ್ಣನೊಂದಿಗಿನ ಗುರುತಿಸಿಕೊಳ್ಳುವಿಕೆಯು ಹೆಚ್ಚು ಪೂರ್ಣವಾಗುತ್ತಿದ್ದಂತೆ ನಿನ್ನ ಅವಸ್ಥೆಯೂ ಅದಕ್ಕೆ ತಕ್ಕಂತೆ ಪರಿಪೂರ್ಣವಾಗುವುದು.

ಆದರೆ ಸಾಮಾನ್ಯ ಗ್ರಹಣಶಕ್ತಿ, ಸಾಮಾನ್ಯ ತಿಳುವಳಿಕೆ, ಸಾಮಾನ್ಯ ಸಂವೇದನೆಗಳನ್ನು ಪ್ರಜ್ಞೆಯ ಯಾವುದಾದರೂ ಮೂಲೆಯು ಇರಿಸಿಕೊಂಡಿದ್ದಿತೆನ್ನಿ. ಆಗ ನೀನು ಇತರರ ವೇದನೆಯನ್ನು ಕಾಣುವೆ. ಇಷ್ಟೊಂದು ದುಃಖವನ್ನು ಉಂಟುಮಾಡುವ ಕ್ರೀಡೆಯು ಬಹಳ ಕಠಿನವೆಂದು ಪರಿಗಣಿಸುವೆ ಮತ್ತು ಅತ್ಯಂತ ಭೀಕರ ಚಿತ್ರಹಿಂಸಕನಾಗರಿಬೇಕು. ಇಂತಹ ಕ್ರೀಡೆಯಲ್ಲಿ ಆನಂದಿಸುವ ಭಗವಂತ ಎಂದು ನಿರ್ಧರಿಸುವೆ. ಆದರೆ, ದೈವದೊಂದಿಗೆ ಒಂದಾಗುವ ಅನುಭವವನ್ನು ಪಡೆದಾಗ, ಆತನು ತನ್ನ ಆಟದೊಳಗೆ ಸುರಿಯುವ ಅಗಾಧ ಮತ್ತು ಅತ್ಯದ್ಭುತ ಪ್ರೇಮವನ್ನು ನೀನು ಮರೆಯುವದು ಅಸಾಧ್ಯ. ಈ ರೀತಿ ನಿರ್ಧರಿಸಲು ನಮ್ಮ ದೃಷ್ಟಿಕೋನದಲ್ಲಿನ ಪರಿಮಿತಿಯೇ ಕಾರಣ ಎಂಬುದನ್ನು ಅರ್ಥಮಾಡಕೊಳ್ಳುವೆವು. ಅಷ್ಟೇ ಅಲ್ಲ, ಆತನು ಸ್ವಯಂಪ್ರೇರಿತ ಹಿಂಸಕನಾಗಿರದೆ ಪ್ರಪಂಚಕ್ಕೆ ಮಾರ್ಗದರ್ಶನ ಮಾಡುವ ಶ್ರೇಷ್ಠ ಉಪಕಾರಿಯಾದ ಪ್ರೇಮ ಎಂಬುದೂ ಸಹ ಅರ್ಥವಾಗುವದು. ಅತ್ಯಂತ ಶ್ರೇಷ್ಠವಾದ ಪಥಗಳಲ್ಲಿ, ಅವರವರ ಪರಿಪೂರ್ಣತೆಯ ಕಡೆಗಿನ ಹಾದಿಯಲ್ಲಿ ಆತನ ಮನ್ನಡೆಸುವನು. ಅದು ಯಾವಾಗಲೂ ಪ್ರಸಕ್ತ ಮತ್ತು ಅತಿಶಯಿಸಿದ ಪರಿಪೂರ್ಣತೆಯಾಗಿರುವದು.

ಆದರೆ ಮುನ್ನಡೆಯನ್ನು ಉತ್ತೇಜಿಸಲು ಈ ಕಣ್ಣಿಗೆ ಮಾತ್ರ ಗೋಚರಿಸುವ ದುಃಖದ ಅವಶ್ಯಕತೆಯು ಇಲ್ಲದಿರುವ ದಿನ ಆಗಮಿಸುವದು ಆಗ ಸಾಮರಸ್ಯ ಮತ್ತು ಆನಂದದೊಂದಿಗೆ ಪ್ರಗತಿಯನ್ನು ಸಾಧಿಸಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/51–52**

ಜೀವನವು ಮಾಯೆಯ ಚಿಂತನೆಯನ್ನು ಒಳಗೊಂಡಿದೆ ಮತ್ತು ಅದನ್ನು ಮೀರಿದುದಾಗಿದೆ. ಎಲ್ಲಾ ವಸ್ತುಗಳ ಗರ್ವದ ಸಂಬಂಧವನ್ನು ಅದು ಹೊಂದಿಲ್ಲ. ಮಥುರ

ಮತ್ತು ಬೃಂದಾವನದಲ್ಲಿ ಉಳಿದುಕೊಂಡು ಶ್ರೀ ಕೃಷ್ಣನೊಡನೆ ಕ್ರೀಡಿಸಬೇಕೆಂದು ನಿರ್ಧರಿಸಿರುವ ನಿನಗೆ ಅದು ಅನುಪಯುಕ್ತ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/89 – ಶ್ರೀ ಅರವಿಂದರು**

ಸ್ವರ್ಗದ ಮಾದರಿಯಲ್ಲಿ ಪ್ರಪಂಚವು ಯಾವಾಗ ಬದಲಾಗುವುದು? ದೈವವು ಕೃಷ್ಣ ಮತ್ತು ಕಾಳಿ, ಅಂದರೆ ಗುಂಪಿನ ಅತ್ಯಧಿಕ ಸಂತಸಭರಿತ ಹುಡುಗ ಮತ್ತು ಅತ್ಯಂತ ಬಲಶಾಲಿ ಹುಡುಗಿಯಾಗಿ ಜ್ಞಾತವಾಗಬೇಕು. ಇಡೀ ಮಾನವ ಕುಲವು ಹುಡುಗರು ಮತ್ತು ಹುಡುಗಿಯರಾಗಿ ಸ್ವರ್ಗ ಲೋಕದ ತೋಟದಲ್ಲಿ ಅವರೊಂದಿಗೆ ಆಟವಾಡಿದಾಗ ಪ್ರಪಂಚವು ಬದಲಾಗುವದು. ಯೆಹೂದ್ಯರ ಈಡನ್ ಉತ್ತಮವಾದುದಾಗಿತ್ತು ಅದರೆ ಆಡಮ್ ಮತ್ತು ಈವ್ ತುಂಬಾ ದೊಡ್ಡವರಾಗಿ ಬೆಳೆದಾಗಿತ್ತು. ಸ್ವತಃ ಅದರ ದೈವವೇ ತುಂಬಾ ವೃದ್ಧ, ಕಠಿಣ ಮತ್ತು ನಿಷ್ಠುರವಾಗಿದ್ದುದರಿಂದ ಸರ್ಪದ ಕೊಡುಗೆಯನ್ನು ನಿರಾಕರಿಸಲಾಗಲಿಲ್ಲ.

ಯಹೂದ್ಯರು ಒಂದು ದೈವದ ಕಲ್ಪನೆಯ ಮೂಲಕ ಇಡೀ ಮಾನವ ಕುಲವನ್ನು ವೇದನೆಗೆ ಒಳಪಡಿಸಿದರು. ಆ ದೈವವು ಉಗ್ರ, ಗಂಭೀರ ರಾಜ, ಕಠೋರ ನ್ಯಾಯಾಧೀಶ ಮತ್ತು ಆನಂದದ ಅರಿವೇ ಇಲ್ಲದುದಾಗಿತ್ತು. ಆದರೆ ನಮ್ಮ ಕೃಷ್ಣನು ಹಾಗಲ್ಲ, ಆತನು ಕ್ರೀಡಾಪ್ರಿಯ ಬಾಲಕ, ತುಂಟಾಟದಿಂದ ತುಂಬಿದ ಮಗು ಮತ್ತು ಸಂತಸಭರಿತ ನಗೆಯನ್ನು ಸೂಸುತ್ತಿರುವವನು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/490**

ಕೃಷ್ಣನನ್ನು ನಾನು ಮೊದಲು ಭೇಟಿಯಾದಾಗ, ಆಟದ ಜೊತೆಗಾರ ಮತ್ತು ಗೆಳೆಯನ ರೀತಿಯಲ್ಲಿ ನಾನು ಆತನನ್ನು ಪ್ರೀತಿಸಿದೆ. ಆತನು ನನಗೆ ಮೋಸ ಮಾಡುವವರೆಗೂ ಹೀಗೆ ಮುಂದುವರೆಯಿತು. ಆಗ ನಾನು ಕುಪಿತನಾದೆ ಮತ್ತು ಆತನನ್ನು ಕ್ಷಮಿಸಲಾಗಲಿಲ್ಲ. ನಂತರ ನಾನು ಆತನನ್ನು ಪ್ರೇಮಿಯೆಂಬಂತೆ ಪ್ರೀತಿಸಿದೆ. ಆಗಲೂ ಆತನು ನನ್ನನ್ನು ವಂಚಿಸಿದನು. ಪುನಃ ನಾನು ಮತ್ತಷ್ಟು ಕ್ರೋಧಗೊಂಡೆ. ಆದರೆ ಈಗ ನಾನು ಆತನನ್ನು ಕ್ಷಮಿಸಲೇಬೇಕಾಯಿತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/484**

**ಭಾಗವತ**

**ಕೆಲವರು ಹೇಳುತ್ತಾರೆ ಕೃಷ್ಣನೆಂದು ಜೀವಿಸಿರಲಿಲ್ಲ, ಆತನೊಂದು ಕಟ್ಟು ಕಥೆ. ಅವರ ಅರ್ಥ ಭೂಮಿಯ ಮೇಲೆ ಆತನೆಂದೂ ಇರಲಿಲ್ಲ. ಹಾಗಾದರೆ ಬೃಂದಾವನವು ಅಸ್ತಿತ್ವದಲ್ಲೇ ಇರಲಿಲ್ಲವೆಂದರೆ, ಭಗವಂತನನ್ನು (ಭಾಗವತ ಪುರಾಣಕ್ಕೆ ಸಂಬಂಧಿಸಿದ ಕೃಷ್ಣನ ಕಥೆ) ಬರೆಯಲಾಗುತ್ತಲೇ ಇರಲಿಲ್ಲ.**

*ಭೂಮಿಯಲ್ಲದೆ ಬೇರೆ ಇನ್ನೆಲ್ಲಾದರೂ ಬೃಂದಾವನವು ಅಸ್ತಿತ್ವದಲ್ಲಿ ಇದೆಯಾ?*

ಒಂದು ವಿಧವಾದ ಕೇಂದ್ರೀಕರಣವಾಗಿದೆ. ಇಡೀ ಭೂಮಿ ಮತ್ತು ಅದರಲ್ಲಿ ಇರುವದೆಲ್ಲವು. ಭೌತಿಕ ಕಣ್ಣಿಗೆ ಅಗೋಚರವಾಗಿರುವ ಬೇರೆ ಲೋಕಗಳಲ್ಲಿ ಅಸ್ತಿತ್ವದಲ್ಲಿರುವ ಯಾವುದೋ ಒಂದು ಭಾಗದ ಘನೀಕರಣ. ಇಲ್ಲಿ ಪ್ರಕಟವಾಗಿರುವ ಪ್ರತಿಯೊಂದು ವಸ್ತುವೂ ಅದರ ತತ್ವ, ಚಿಂತನೆ ಅಥವಾ ಸಾರವನ್ನು ಯಾವುದೋ ಒಂದು ಸೂಕ್ಷ್ಮ ಪ್ರದೇಶದಿಂದ ಪಡೆದಿದೆ. ಅಭಿವ್ಯಕ್ತತೆಗೆ ಇದು ಅನಿವಾರ್ಯ ನಿಯಮವಾಗಿದೆ. ಪ್ರಕಟವಾದ ವಸ್ತುವಿನ ಮೂಲವನ್ನು ಯಾವಾಗಲೂ ಅಭಿವ್ಯಕ್ತತೆಯ ಪ್ರಾಮುಖ್ಯತೆ ಅವಲಂಬಿಸಿದೆ. ದೇವತೆಗಳ ಲೋಕದಲ್ಲಿ ಪರಮಶ್ರೇಷ್ಠ ಬೃಂದಾವನವು ಇದೆ. ಅದರ ವಿಕೃತರೂಪ ಮತ್ತು ಕಳಪೆ ಚಿತ್ರಣ ಮಾತ್ರವಾಗಿದೆ ಭೂಮಿಯ ಮೇಲಿನ ಬೃಂದಾವನ.

ತಮ್ಮ ಇಂದ್ರಿಯಗಳಲ್ಲಾಗಲೀ ಅಥವಾ ಮನಸ್ಸಿನಲ್ಲಾಗಲೀ ಅಭಿವೃದ್ಧಿ ಹೊಂದಿರುವವರು ಸಾಮಾನ್ಯ ಮಾನವರಿಗೆ ಅಗೋಚರವಾದ ಈ ನೈಜತೆಗಳನ್ನು ಗ್ರಹಿಸುವರು. ಅವುಗಳಿಂದ ಸ್ಫೂರ್ತಿಯನ್ನು ಪಡೆಯುವರು. ಆದುದರಿಂದ ಒಂದು ಇಡೀ ಅಂತರಿಕ ಜಗತ್ತಿನ ಸಂಪರ್ಕದಲ್ಲಿ ಇದ್ದರು ಭಾಗವತದ ಲೇಖಕ ಅಥವಾ ಲೇಖಕರು. ಆ ಲೋಕವು ನಿಜಕ್ಕೂ ಅಸ್ತಿತ್ವದಲ್ಲಿದ್ದು ನೈಜವಾಗಿತ್ತು ಮತ್ತು ಉತ್ತಮ–ವಾದುದಾಗಿತ್ತು.. ಅವರು ವಿವರಿಸಿರುವ ಅಥವಾ ವ್ಯಕ್ತಪಡಿಸಿರುವದೆಲ್ಲವನ್ನೂ ಅಲ್ಲಿ ನೋಡಿದರು ಮತ್ತು ಅನುಭವಿಸಿದರು.

ಕೃಷ್ಣನು ಅಸ್ತಿತ್ವದಲ್ಲಿ ಇದ್ದನೇ? ಭೂಮಿಯ ಮೇಲೆ ಜೀವಿಸಿದ್ದನೇ? ಎನ್ನುವದು ಅಮುಖ್ಯ. (ಬಹುಶಃ ಚಾರಿತ್ರಿಕ ದೃಷ್ಟಿಕೋನದಿಂದ ಮಾತ್ರ ಅದು ಮುಖ್ಯ). ಏಕೆಂದರೆ ನೈಜ, ಜೀವಂತ ಮತ್ತು ಕ್ರಿಯಾಶಾಲಿ ಸತ್ತೆಯಾಗಿರುವನು ಕೃಷ್ಣ. ಭೂಮಿಯ ಪರಿವರ್ತನೆಗೆ ಮತ್ತು ಪ್ರಗತಿಗೆ ಅವಶ್ಯಕವಾದ ಶ್ರೇಷ್ಠ ಅಂಶಗಳಲ್ಲಿ ಒಂದಾಗಿದೆ ಆತನ ಪ್ರಭಾವ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/60–61 – ಶ್ರೀಮಾತೆ**

ಪ್ರಪಂಚವನ್ನು ಹೊರತುಪಡಿಸಿ ಭಗವಂತನನ್ನು ಪ್ರೀತಿಸುವದು, ಆತನಿಗೆ ತೀವ್ರವಾದ ಆದರೆ ಅಪರಿಪೂರ್ಣ ಆರಾಧನೆಯನ್ನು ನೀಡಿದಂತೆ ಆಗುವುದು.

*

ಮಾತ್ಸರ್ಯದ ದಾಸಿ ಅಥವಾ ಪುತ್ರಿ ಮಾತ್ರವೇ ಆಗಿರುವಳೇ ಪ್ರೇಮ? ಕೃಷ್ಣನು ಚಂದ್ರಬಾಲಿಯನ್ನು ಪ್ರೀತಿಸುವದಾದರೆ, ನಾನು ಸಹ ಆಕೆಯನ್ನು ಏಕೆ ಪ್ರೀತಿಸಬಾರದು?

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/486**

ಚರಿತ್ರೆಯಲ್ಲಿ ನಾಲ್ಕು ಅತ್ಯಂತ ಸುಪ್ರಸಿದ್ಧ ಘಟನೆಗಳು ಇವೆ. ಟ್ರಾಯ್‌ನೊಳಗೆ (Troy) ನಡೆದ ಸೈನಿಕ ಕಾರ್ಯಾಚರಣೆ, ಕ್ರಿಸ್ತನನ್ನು ಶಿಲುಬೆಗೆ ಏರಿಸಿದ್ದು, ಬೃಂದಾವನದಿಂದ ಕೃಷ್ಣನ ಗಡಿಪಾರು, ಕುರುಕ್ಷೇತ್ರದ ರಣರಂಗದಲ್ಲಿ ಅರ್ಜುನ–ನೊಂದಿಗಿನ ಸಂಭಾಷಣೆ. ಟ್ರಾಯ್‌ನ (Troy) ಮುತ್ತಿಗೆ ಹಿಲ್ಲಾಸ್ (Hellas) ಅನ್ನು ಸೃಷ್ಟಿಸಿತು. ಬೃಂದಾವನದ ದೇಶ ಭ್ರಷ್ಟತೆ ಭಕ್ತಿ ಪಂಥವನ್ನು ಸೃಷ್ಟಿಸಿತು (ಏಕೆಂದರೆ ಹಿಂದೆ ಧ್ಯಾನ ಮತ್ತು ಆರಾಧನೆ ಮಾತ್ರ ಇದ್ದವು). ಯೂರೋಪ್ ಕರುಣಾಳುವಾಗಿದ್ದು ಕ್ರಿಸ್ತನ ಶಿಲುಬೆಯಿಂದ. ಕುರುಕ್ಷೇತ್ರದ ಸಂಭಾಷಣೆ ಮಾನವ ಜನಾಂಗವನ್ನು ಮುಕ್ತಗೊಳಿಸುವದು. ಆದರೂ ಈ ನಾಲ್ಕು ಘಟನೆಗಳು ಸಂಭವಿಸಲೇ ಇಲ್ಲ ಎಂದು ಹೇಳಲಾಗುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/427**

ಕುರುಕ್ಷೇತ್ರದ ಸಂಭಾಷಣೆಯು ಮಾನವ ಸಂಕುಲವನ್ನು ಮುಕ್ತಗೊಳಿಸುವದು: ಈ ವಾಕ್ಯದ ಅರ್ಥವಾದರೂ ಏನು?

ಶ್ರೇಷ್ಠ ಆಧ್ಯಾತ್ಮಿಕ ಚಳುವಳಿಯ ಮೂಲ, ಗೀತೆಯ ಸಂದೇಶ ಎನ್ನುವದು ಶ್ರೀ ಅರೋಬಿಂದೊರವರ ಅಭಿಪ್ರಾಯ. ಮಾನವ ಜನಾಂಗದ ವಿಮೋಚನೆಯ ಕಡೆ ಅದು ಮುನ್ನಡೆಸಿದೆ ಮತ್ತು ಇನ್ನೂ ಹೆಚ್ಚು ಹೆಚ್ಚಾಗಿ ಮುನ್ನಡೆನುವದು, ಅಂದರೆ ಮಿಥ್ಯಾ ಮತ್ತು ಅಜ್ಞಾನದಿಂದ ಪಾರಾಗಿ ಸತ್ಯದತ್ತ ಮಾನವರು ಚಲಿಸುವಂತೆ ಮಾಡುವದು.

ಅದು ಮೊದಲು ಗೋಚರಿಸಿದಾಗಿನಿಂದಲೂ, ಗೀತೆಯು ಅಗಾಧವಾದ ಆಧ್ಯಾತ್ಮಿಕ ಕ್ರಿಯೆಯನ್ನು ಉಂಟುಮಾಡಿದೆ. ಆದರೆ ಶ್ರೀ ಅರೋಬಿಂದೋರವರು

ಅದಕ್ಕೆ ನೀಡಿರುವ ನವ ವ್ಯಾಖ್ಯನದಿಂದ ಅದರ ಪ್ರಭಾವವು ಗಮನೀಯವಾಗಿ ಅಧಿಕಗೊಂಡು ನಿರ್ಣಾಯಕ ಹಂತವನ್ನು ತಲುಪಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 10/63**

ಕೃಷ್ಣನು ಮಾತ್ರವೇ ಒಂದು ಕಡೆ ಇದ್ದು ಮತ್ತೊಂದು ಕಡೆ ಸುಸಜ್ಜಿತ ಸೇನೆ, ಅದರ ಆಶ್ರಯದಾರರೊಂದಿಗಿನ ವ್ಯವಸ್ಥಿತ ಪ್ರಪಂಚ ಮತ್ತು ಅದರ ತೀಕ್ಷ್ಣತೆ ಹಾಗೂ ಅದರ ನಿಯಮಗಳು. ಹೀಗಿದ್ದರೂ, ನಿನ್ನ ದೈವೀ ಏಕಾಂತತೆಯನ್ನೇ ಆರಿಸಿಕೋ. ಪ್ರಪಂಚವು ನಿನ್ನ ದೇಹದ ಮೇಲೆಯೇ ಚಲಿಸಿ, ಅದರ ಚೂಪಾದ ಕೊನೆಗಳು ನಿನ್ನನ್ನು ತುಂಡುತುಂಡಾಗಿ ಸೀಳಿದರೂ ಮತ್ತು ಸೈನ್ಯವು ನಿನ್ನ ಕೈಕಾಲುಗಳನ್ನು ಧ್ವಂಸಮಾಡಿ ರಸ್ತೆ ಬದಿಯ ಅಕಾರರಹಿತ ರಾಡಿಯಾಗಿ ಮಾಡಿದರೂ ಆತಂಕ ಪಡದಿರು; ಏಕೆಂದರೆ ಮನಸ್ಸು ಯಾವಾಗಲೂ ಒಂದು ಛಾಯೆ ಮಾತ್ರವಾಗಿತ್ತು ಮತ್ತು ದೇಹವು ಒಂದು ಶವ. ಅದರ ಆಚ್ಛಾದನದಿಂದ ವಿಮುಕ್ತವಾದ ಚೇತನವು ಶ್ರೇಣಿಗಳಾಗಿ ಹಬ್ಬಿ ವಿಜಯಯಾಗುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/457**

ಶ್ರೀ ಕೃಷ್ಣನು ಗೋಪಿಯರ ವಸ್ತ್ರಾಪಹರಣ ಮಾಡಿದನು ಎಂಬ ಕಥೆಯು ನಮಗೆಲ್ಲರಿಗೂ ತಿಳಿದಿದೆ. ಜೀವದೊಂದಿಗೆ ಭಗವಂತನು ವ್ಯವಹರಿಸುವ ರೀತಿನೀತಿಗಳ ಬಗ್ಗೆ ವಿವರಿಸುವ ಅತ್ಯಂತ ಆಳವಾದ ಕಥೆಯೆಂಬಂತೆ ಈ ವಿವರಗಳನ್ನು ದೈವೀ ಜ್ಞಾನದ ಸಾಧಕನು ಕಾಣುವನು. ಭಕ್ತನ ಹೃದಯದ ಆಧ್ಯಾತ್ಮಿಕ ಅನುಭವಗಳ ದೈವೀ ಕ್ರಿಯೆಯ ಅತ್ಯುತ್ತಮ ನಿರೂಪಣೆ ಇದಾಗಿರುವದು. ವಿಷಯಾಸಕ್ತ ಮತ್ತು ಅತೀ ಕಟ್ಟುನಿಟ್ಟಾದವನಿಗೆ ಇದು (ಒಂದೇ ಮನೋಭಾವದ ಎರಡು ಮುಖ) ಕಾಮಾಸಕ್ತಿಯ ಕಥೆ ಮಾತ್ರ. ತಮ್ಮ ಅಂತರಂಗದಲ್ಲಿ ಏನಿದೆಯೋ ಅದನ್ನು ಮಾನವರು ತರುವರು ಮತ್ತು ಪವಿತ್ರ ಗ್ರಂಥದಲ್ಲಿ ಅದರ ಪ್ರತಿಬಿಂಬವನ್ನೇ ಕಾಣುವರು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 10/345**

ಕುಪಿತ ಪ್ರೇಮ ಮತ್ತು ಭಯಾನಕ ಶಕ್ತಿಯಾಗಿ ಹೊರಹೊಮ್ಮಿರುವ ಕಾಳಿಯೇ ಕೃಷ್ಣ. ಶರೀರ, ಪ್ರಾಣ ಮತ್ತು ಮನಸ್ಸಿನಲ್ಲಿಯ ಅಹಂಕಾರವನ್ನು ಆಕೆಯು ತನ್ನ

ಕೋಪೋದ್ರಿಕ್ತ ಹೊಡೆತಗಳಿಂದ ಸಂಹಾರ ಮಾಡುವಳು. ಇದರಿಂದ ಆ ಮೂರು ವಿಮೋಚಿತವಾಗಿ ನಿರಂತರ ಚೇತನವೆನಿಸುವವು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/496**

ಕೃಷ್ಣನ ವೇಷಾಂತರ ಮತ್ತು ಉಪಾಯವಾಗಿದೆ ಪಾಪ. ಸದ್ಗುಣಿಗಳ ದೃಷ್ಟಿಗೆ ಕಾಣದಂತೆ ಮರೆಮಾಚಿಕೊಳ್ಳಲು ಆತನು ಈ ರೀತಿ ಮಾಡುವನು. ಗಮನಿಸು, ಓ ಮಡಿವಂತ, ಪಾಪಿಯೊಳಗಿನ ದೈವ, ನಿನ್ನಲ್ಲಿಯ ಪಾಪ ನಿನ್ನ ಹೃದಯವನ್ನು ಪರಿಶುದ್ಧಗೊಳಿಸುವದು; ನಿನ್ನ ಸಹೋದರನನ್ನು ತಬ್ಬಿಕೋ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 10/346**

ಪಾಪದ ವಸ್ತ್ರಾಪಹರಣ ಮಾಡಿದನು ನನ್ನ ಪ್ರಿಯತಮ, ಸಂತಸದಿಂದ ನಾನು ಅದನ್ನು ಕೆಳಗೆ ಬಿಸಾಡಿದೆನು. ನಂತರ ನನ್ನ ಸದ್ಗುಣದ ವಸ್ತ್ರವನ್ನು ಬಲವಾಗಿ ಎಳೆದನು. ಆದರೆ ನನಗೆ ನಾಚಿಕೆಯಾಯಿತು. ಗಾಬರಿಗೊಂಡು ಆತನನ್ನು ತಡೆದೆನು. ಶಕ್ತಿ ಪ್ರಯೋಗ ಮಾಡಿ ಆತನು ಅದನ್ನು ನನ್ನಿಂದ ಕಿತ್ತುಕೊಂಡಾಗಲೇ ಆತ್ಮವನ್ನು ನನಗೆ ಕಾಣದಂತೆ ಹೇಗೆ ಗುಪ್ತಗೊಳಿಸಲಾಗಿದೆ ಎಂಬುದರ ಅರಿವಾಗಿದ್ದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/491**

ದೈವವನ್ನು ಉದ್ದೇಶಿಸಿದ ಮಾನಸಿಕ ಚಿಂತನೆಗಳ ಮೌಲ್ಯವಾದರೂ ಏನು? ಆತನು ಏನಾಗಿರಬೇಕು, ಆತನು ಹೇಗೆ ಕ್ರಿಯಾಶೀಲನಾಗಬೇಕು? ಆತನು ಹೇಗೆ ಮಾಡಬಾರದು? – ಅವುಗಳೆಲ್ಲ ಹಾದಿಯಲ್ಲಿ ಬರುವವು ಅಷ್ಟೇ. ಸ್ವತಃ ದೈವವು ಮಾತ್ರವೇ ಮುಖ್ಯ. ನಿನ್ನ ಪ್ರಜ್ಞೆಯು ದೈವವನ್ನು ಆಲಿಂಗಿಸಿದಾಗ, ಆಗ ದೈವವೆಂದರೆ ಏನೆಂದು ನಿನಗೆ ಅರಿವಾಗುವದು. ಅದಕ್ಕೆ ಮೊದಲಲ್ಲ. ಕೃಷ್ಣನೆಂದರೆ ಕೃಷ್ಣ ಅಷ್ಟೇ. ಆತನು ಏನು ಮಾಡಿದನು? ಏನನ್ನು ಮಾಡಲಿಲ್ಲ ಎಂಬುದು ಮುಖ್ಯವಲ್ಲ. ಆತನನ್ನು ನೋಡುವದು, ಭೇಟಿ ಮಾಡುವದು, ಬೆಳಕನ್ನು ಅನುಭವಿಸುವದು, ಸಾನ್ನಿಧ್ಯ, ಪ್ರೇಮ, ಆನಂದಗಳು ಮಾತ್ರವೇ ಮುಖ್ಯ. ಆದುದರಿಂದ ಅದೇ ಯಾವಾಗಲೂ ಆಧ್ಯಾತ್ಮಿಕ ಅಭೀಪ್ಸೆ – ಅದೇ ಆಧ್ಯಾತ್ಮಿಕ ಜೀವನದ ನಿಯಮ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/56**

ಎಲ್ಲಾ ಜೀವಿಗಳ ದೈವೀ ಗೆಳೆಯನು, ನಮ್ಮನ್ನು ಅತ್ಯುನ್ನತ ಸ್ವರ್ಗಗಳಿಗೆ ಸಿದ್ಧಪಡಿಸುವವರೆಗೂ ಆತನ ಗೆಳೆತನವನ್ನು ಶತ್ರುವಿನ ಮುಖವಾಡದಿಂದ ಗುಪ್ತಗೊಳಿಸಿರುವನು. ನಂತರ, ಕುರುಕ್ಷೇತ್ರದ ರೀತಿಯಲ್ಲಿ ನಾಶ, ದುಃಖ ಮತ್ತು ಸಂಘರ್ಷದ ಒಡೆಯನ ಉಗ್ರ ರೂಪವನ್ನು ಹಿಂಪಡೆಯಲಾಗುವದು. ಆತನ ನಿರಂತರ ಗೆಳೆಯ ಮತ್ತು ಕ್ರೀಡೆಯಲ್ಲಿ ಜೊತೆಗಾರನ ಪರಿಶುದ್ಧ ಕಣ್ಣುಗಳು ಮತ್ತು ಕಂಪಿಸುತ್ತಿರುವ ಆತ್ಮದ ಮೇಲೆ ಪ್ರಕಾಶಿಸುವದು ಕೃಷ್ಣನ ಅನೇಕ ಸಲ ಆಲಿಂಗಿಸುವ ಶರೀರ, ಮಧುರವಾದ ಮುಖ ಮತ್ತು ಮೃದುತ್ವದೊಂದಿಗೆ. ನಿರಂತರವಾದವನ ಆನಂದದ ವ್ಯಕ್ತಿತ್ವ ಕೃಷ್ಣ. ಏಕೆಂದರೆ ಆತನಿಂದಲೇ ಸರ್ವ ಸೃಷ್ಠಿಯು ಸಾಧ್ಯವಾಗುವದು, ಆತನ ಕ್ರೀಡೆಯಿಂದಲೇ, ಆತನ ಮಹದಾನಂದದಿಂದಲೇ, ಆತನ ಮಧುರತೆಯಿಂದಲೇ.

ಬ್ರಹ್ಮನು ಅಮರ್ತ್ಯತೆ, ವಿಷ್ಣುವು ನಿರಂತರತೆ, ಶಿವನು ಅನಂತತೆ. ಪರಮೋತ್ತಮನ ನಿರಂತರತೆ, ಆನಂತತೆ, ಅಮರ್ತ್ಯತೆ ಸ್ವ–ಲಾಭ, ಸ್ವ–ಪ್ರಕಟಣೆ, ಸ್ವ–ಅಭಿವ್ಯಕ್ತಿ, ಸ್ವ–ವ್ಯವಸ್ಥಾವನೆಯಾಗಿರುವನು ಕೃಷ್ಣ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/208–209**

ಸ್ವರ್ಗದ ಮಾದರಿಗೆ ಪ್ರಪಂಚವು ಎಂದು ಬದಲಾಗುವುದು?

ದೈವವು ಕೃಷ್ಣ ಮತ್ತು ಕಾಳಿ, ಅಂದರೆ ಗುಂಪಿನ ಅತ್ಯಧಿಕ ಸಂತಸಭರಿತ ಹುಡುಗ ಮತ್ತು ಅತ್ಯಂತ ಬಲಶಾಲಿ ಹುಡಿಗಿಯಾಗಿ ಜ್ಞಾತವಾಗಬೇಕು. ಇಡೀ ಮಾನವ ಕುಲವು ಹುಡುಗರು ಮತ್ತು ಹುಡುಗಿಯರಾಗಿ ಸ್ವರ್ಗ ಲೋಕದ ತೋಟದಲ್ಲಿ ಅವರೊಂದಿಗೆ ಆಟವಾಡಿದಾಗ ಪ್ರಪಂಚವು ಬದಲಾಗುವದು. ಯೆಹೂದ್ಯರ ಈಡನ್ ಉತ್ತಮವಾದುದಾಗಿತ್ತು. ಆದರೆ ಆಡಮ್ ಮತ್ತು ಈವ್ ತುಂಬಾ ದೊಡ್ಡವರಾಗಿ ಬೆಳೆದಾಗಿತ್ತು. ಸ್ವತಃ ಅದರ ದೈವವೇ ತುಂಬಾ ವೃದ್ಧ, ಕಠಿಣ ಮತ್ತು ನಿಷ್ಠುರವಾಗಿದ್ದುದರಿಂದ ಸರ್ಪದ ಕೊಡುಗೆಯನ್ನು ನಿರಾಕರಿಸಲಾಗಲಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/490 – ಶ್ರೀ ಅರವಿಂದರು**

## ಶ್ರೀ ಅರವಿಂದರ
## 'ಗೀತಾ ಪ್ರಬಂಧಗಳು'

**– ಅನುವಾದ: ಜಾನ್ವಿ**

**18**

## ಅಧ್ಯಾಯ – 14
## ದಿವ್ಯ ಕರ್ಮಗಳ ಹಿಂದಿನ ತತ್ವ

ಯಜ್ಞದ ವಿಷಯವಾಗಿ ಗೀತೆಯು ಏನನ್ನು ಹೇಳುತ್ತದೆ ಎಂಬುದನ್ನು ಸಾರರೂಪವಾಗಿ ನಾವು ನೋಡಿದ್ದೇವೆ. ಆದರೆ ಪುರುಷೋತ್ತಮನ ಪರಿಕಲ್ಪನೆಯ ಮೇಲೆಯೇ ಯಜ್ಞತತ್ವವು ಅವಲಂಬಿತವಾಗಿದ್ದು, ಆದರ ವಿವೇಚನೆಯನ್ನು ವಿಶದವಾಗಿ ಮಾಡದೇ ವಿಷಯ ಸ್ಪಷ್ಟವಾಗುವುದಿಲ್ಲ. ಆದರೆ ಪುರುಷೋತ್ತಮ ತತ್ವದ ಸಂಪೂರ್ಣ ವಿಷದೀಕರಣವನ್ನು ಮುಂದೆ (15ನೆಯ ಅಧ್ಯಾಯದಲ್ಲಿ) ಮಾಡಲಾಗಿದೆ. ಇಲ್ಲಿ ಪುರುಷೋತ್ತಮ ತತ್ವವನ್ನು ಸೂಚ್ಯರೂಪವಾಗಿ ಹೇಳಿದ್ದು. ಗೀತೆಯ ಪ್ರಗತಿಪರ ಹಾಗೂ ಸಮಗ್ರ ಚಿಂತನೆಯ ಕ್ರಮದಲ್ಲಿ ಇದು ಸ್ವಲ್ಪ ಅಡಚಣೆ ಅನಿಸಿದರೂ ಸಹ, ನಮಗೆ ಸಹನೆ ಬೇಕೇಬೇಕು – ಇಲ್ಲಿ ಗೀತಾಚಾರ್ಯನು ಕೇವಲ ಸುಳಿವು ನೀಡುತ್ತಾನೆ. ಪರಮ ಪುರುಷೋತ್ತಮನ ತತ್ವದ ಬಗ್ಗೆ ಸೂಚನೆ ನೀಡುತ್ತಾನೆ. ಅವನಿಗೂ ನಿಶ್ಚಲ ಪುರುಷನಿಗೂ ಏನು ಸಂಬಂಧ ಎಂಬುದನ್ನು ಹೇಳುತ್ತಾನೆ. ಬ್ರಾಹ್ಮೀ ಸ್ಥಿತಿಯನ್ನು ಪಡೆಯಬೇಕಾದರೆ ನಾವು ಮೊಟ್ಟ ಮೊದಲು ಈ ನಿಶ್ಚಲ ಪುರುಷನ ಪರಿಪೂರ್ಣ ಸಮತ್ವವನ್ನು ಸಂಪಾದಿಸಬೇಕು ಎಂಬುದನ್ನು ಸ್ಪಷ್ಟವಾಗಿ ಹೇಳುತ್ತಾನೆ. ಈ ಸಂಪೂರ್ಣ ನಿರ್ವ್ಯಕ್ತಿಕ ಪುರುಷನೆಂದರೆ ವಸ್ತುತಃ ಪುರುಷೋತ್ತಮನೇ; ಆದರೆ ಪ್ರಸ್ತುತ ಸಂದರ್ಭದಲ್ಲಿ ಮಾತ್ರ ಕೃಷ್ಣನು ಪುರುಷೋತ್ತಮ ಎಂಬ ಶಬ್ದವನ್ನು ಬಳಸುತ್ತಿಲ್ಲ; ಬದಲಾಗಿ "ನಾನು, ಕೃಷ್ಣ, ನಾರಾಯಣ, ಅವತಾರ" ಎಂದು ಹೇಳುತ್ತಿದ್ದಾನೆ. ಅವನು ವಿಶ್ವದಲ್ಲಿ ವಿಶ್ವೇಶ್ವರನು, ಕುರುಕ್ಷೇತ್ರದಲ್ಲಿ ಪಾರ್ಥನ ದಿವ್ಯ ಸಾರಥ್ಯ ವಹಿಸಿದ ಕೃಷ್ಣ ರೂಪೀ ಪುರುಷೋತ್ತಮನೇ ಆಗಿದ್ದಾನೆ. ಅವನು ನೀಡುವ ಸೂತ್ರ ತುಂಬ ಸೊಗಸಾಗಿದೆ "ಆತ್ಮನಿ ಅಥೋ ಮಯಿ" ಇದರ ಸ್ಪಷ್ಟ ಅರ್ಥವೇನೆಂದರೆ ಮೊದಲು ಎಲ್ಲರಲ್ಲಿ, ಸಕಲ ಭೂತಾತ್ಮರಲ್ಲಿ ಹಾಗೂ ನಂತರ ನನ್ನಲ್ಲಿ ಪುರುಷೋತ್ತಮನನ್ನು ಕಾಣಬೇಕು. ಮೊದಲು ತಮ್ಮಲ್ಲಿ ಅನಂತರ ಕೃಷ್ಣನಲ್ಲಿ ಅವನನ್ನು ಕಾಣಬೇಕು. ಪ್ರತಿ ಜೀವವೂ ಸಹ ಸಂಭೂತಿ ಅಥವಾ Becoming ಆಗಿದ್ದು ನಿರ್ವ್ಯಕ್ತಿಕ ಸ್ವಯಂಭೂ ಆಗಿರುವ ಸತ್ತೆಯೇ ಆಗಿರುವುದು; ಈ ಸತ್ತನ್ನು

ಸಂಭೂತಿ ಅಥವಾ ಬದಲಾಗುತ್ತ ಹೋಗುತ್ತಿರುವ ಶಾಶ್ವತತೆಯ ಅಸ್ತಿತ್ವವೆಂಬುದನ್ನು ಕಂಡುಕೊಂಡರೆ ಪ್ರತಿ ಜೀವವೂ ಉದ್ಧಾರವಾಗುವುದು, ಉಧೃತಗೊಳ್ಳುವುದು. ಪ್ರತಿ ಜೀವವೂ ನಿರ್ಗುಣ ಹಾಗೂ ನಿರಾಕಾರವೇ ಆಗುವುದು, ಪ್ರಕೃತಿಯ ವಶದಲ್ಲಿರುವಾಗ ಸಕ್ರಿಯವಾಗಿದ್ದರೂ, ಮುಂದೆ ತನ್ನದೆಲ್ಲವನ್ನೂ ಕಳೆದುಕೊಂಡು, ಇಲ್ಲವಾಗಿ ನೋಡಿಕೊಂಡು ಪರಮ ಪುರುಷನೊಂದಿಗೆ ಸೇರಿ ಒಂದಾಗಲೆತ್ನಿಸುವುದು ಹಾಗೆ ಸೇರುವಾಗ ಅದು ತನ್ನ ಪ್ರತ್ಯೇಕ ಅಸ್ತಿತ್ವವನ್ನು ಕಳೆದುಕೊಂಡು ಬಿಡುವುದು. ಹಾಗೆ ಪರಮ ಪುರುಷೋತ್ತಮನ ಜೊತೆ ಪ್ರತಿ ಜೀವವೂ ತನ್ನ ಪ್ರತ್ಯೇಕತೆಯನ್ನು ಕಳೆದುಕೊಳ್ಳುವುದು. ಅಲ್ಲಿ ಯಾವ ಮೂರ್ತ ರೂಪವೂ ಉಪಾಧಿಯೂ ಇರುವುದಿಲ್ಲ. ಆದರೂ ಸಹ ಅನಿರ್ವಚನೀಯವಾದ ರೀತಿಯಲ್ಲಿ ಅದು ತನ್ನ ಪ್ರತ್ಯೇಕತೆಯನ್ನು ಪ್ರತ್ಯೇಕತೆಯ ಕ್ರಿಯಾ ವಿಶೇಷಗಳನ್ನು ಉಳಿಸಿಕೊಂಡು, ಸಕ್ರೀಯವಾಗಿಯೇ ಇರುವುದು. ಇದೇ ವಿಶೇಷ ಅವಸ್ಥೆ. ತನ್ನ ಪ್ರತ್ಯೇಕತೆಯನ್ನು ಕಳೆದುಕೊಂಡ ಮೇಲೂ ತನ್ನ ತನವನ್ನು, ತನ್ನ ಕ್ರಿಯಾ ವಿಶೇಷಗಳನ್ನುಳಿಸಿಕೊಂಡು ಹೋಗುವುದೇ ವಿಶ್ವಾತ್ಮಕ ಅಸ್ತಿತ್ವದ ವೈಶಿಷ್ಟವಾಗಿದೆ. ಮೊದಲು ನಾವು ತ್ರಿಗುಣಾತ್ಮಕ ಪ್ರಕೃತಿಯ ಅಥವಾ ನಿಮ್ನ ಪ್ರಕೃತಿಯ ಎಲ್ಲ ಗುಣ ಧರ್ಮಗಳನ್ನು ಕಳೆದುಕೊಳ್ಳುತ್ತೇವೆ; ನಮ್ಮ ಜೀವ ಅಥವಾ ಅಂತರಾತ್ಮನನ್ನು ತ್ರಿಗುಣಾತೀತನಾದ ನಿಶ್ಚಲ ಪುರುಷನಲ್ಲಿ ನೆಲೆ ನಿಲ್ಲಿಸುತ್ತೇವೆ; ಅಲ್ಲಿಂದಾಚೆಗೆ ಪರಾ ಪ್ರಕೃತಿಯನ್ನು ಅಂದರೆ ಶ್ರೇಷ್ಠ ದಿವ್ಯ ಪ್ರಕೃತಿಯನ್ನು ಕೂಡ ದಾಟಿ ಪರಮಾತ್ಮನಲ್ಲಿ ಒಂದಾಗುತ್ತವೆ. ಆದರೆ ಈ ಪರಮಾತ್ಮನಾದರೂ ಸಹ ತ್ರಿಗುಣಾತೀತನಾಗಿದ್ದರೂ ಸಹ ಪ್ರಕೃತಿಯ ಮೂಲಕವೇ ವಿಶ್ವದಲ್ಲಿ ಕಾರ್ಯ ಮಾಡುತ್ತಾನೆ. ಇದು ಅನಿರ್ವಚನೀಯವೂ ಹೌದು, ಸತ್ಯವೂ ಹೌದು. ತ್ರಿಗುಣಾತೀತನಾಗಿ, ತ್ರಿಗುಣಗಳ ಮೂಲಕವೇ ಕೆಲಸ ಮಾಡುವ ಅನಿರ್ವಚನೀಯ ಸ್ಥಿತಿ ಇದು. ನಿಶ್ಚಲ ಪುರುಷನ ಆಂತರಿಕ "ನೈಷ್ಕರ್ಮ"ವನ್ನು ಸಾಧಿಸಿಕೊಂಡು, ಪ್ರಕೃತಿಗೆ ತನ್ನ ಕೆಲಸಗಳನ್ನು ಮುಂದುವರಿಸಿಕೊಂಡು ಹೋಗಲು ಅನುವು ಮಾಡಿಕೊಳ್ಳಲು, ನಾವು ಕೂಡ ಇಂಥ ಪರಮ ರಹಸ್ಯಮಯವಾದ ಶ್ರೇಷ್ಠ, ಉಚ್ಚ ಸ್ಥಿತಿಯನ್ನು ತಲುಪಿದಾಗ (ಪ್ರಕೃತಿಯ) ಎಲ್ಲ ಕಾರ್ಯಗಳನ್ನು ಮಾಡುತ್ತಲೇ ಪ್ರಕೃತಿಯ ಗುಣಗಳಿಂದ ಮುಕ್ತನಾಗಿ ಯಾವುದರಿಂದಲೂ ಬದ್ಧರಾಗದೇ ಇರಲು ಸಾಧ್ಯವಾಗುವುದು. ಆದ್ದರಿಂದ ಇಲ್ಲಿ ಹೇಳಲಾಗಿರುವ ಶ್ರೀಮನ್ನಾರಾಯಣನ ಅವತಾರವಾದ ಕೃಷ್ಣನೇ ಈ ಪರಮ ರಹಸ್ಯದ ಬೀಗದ ಕೈ ಎಂಬುದನ್ನೂ ಅರ್ಥ ಮಾಡಿಕೊಳ್ಳಬೇಕು. ಈ ದೃಢ ಭಾವ ಇಲ್ಲದೇ ಹೋದರೆ, ನಿಮ್ಮ ಪ್ರಕೃತಿಯಿಂದ

ಮುಕ್ತನಾದ ತಕ್ಷಣ ಅಂಥ ಮೋಕ್ಷ ಸಾಧಿಸಿದ ವ್ಯಕ್ತಿಯು ನೈಷ್ಕರ್ಮ ಸ್ಥಿತಿ ತಲುಪಿಬಿಡುತ್ತಾನೆ. ಪ್ರಾಪಂಚಿಕ ವ್ಯವಹಾರದಿಂದ ನಿವೃತ್ತನಾಗಿ ಬಿಡುತ್ತಾನೆ. ಆದರೆ ಕೃಷ್ಣನೆಂಬ ಬೀಗದ ಕೈ ಹಿಡಿದುಕೊಂಡೇ ಈ ಸ್ಥಿತಿಗೆ ಮುಟ್ಟಿದರೆ. ತ್ಯಾಗವೆನ್ನುವುದೂ ಸಹ ಒಂದು ಮೆಟ್ಟಲಾಗಿ, ವಿಶ್ವದ ಎಲ್ಲ ವ್ಯಾಪಾರಗಳಲ್ಲಿ ಭಾಗವಹಿಸಲು ಸಾಧ್ಯವಾಗುವುದು; ಆಗ ಅವನು ದೈವೀ ಮುಕ್ತಿಯನ್ನು ಪಡೆದೂ ಪ್ರಕೃತಿಯ ಎಲ್ಲ ಕಾರ್ಯಗಳಲ್ಲಿ ಮುಕ್ತನಾಗಿಯೇ ಭಾಗವಹಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಈ ಕೆಳಗಿನ ಸೂತ್ರವನ್ನು ಮರೆಯದೇ ಸಾಧನೆ ಮಾಡಬೇಕು; ನಿಶ್ಚಲ ಬ್ರಹ್ಮನೇ ಪರಮ ಗುರಿ ಎಂದು ಸಾಧನೆ ಮಾಡಿದರೆ ಪ್ರಪಂಚದ ಎಲ್ಲಾ ಕಾರ್ಯಗಳಿಂದ ನಿವೃತ್ತಿ ಸಿಕ್ಕುವುದು, ಆಗ ಯಾವ ಕರ್ಮಗಳೂ ಇಲ್ಲ; ಪರಮಾತ್ಮ ಪುರುಷೋತ್ತಮನೇ ನಮ್ಮ ಸಾಧನೆಯ ಗುರಿ ಎಂದು ತಿಳಿದು ಸಾಧನೆ ಮಾಡಿದರೆ, ಪುರುಷೋತ್ತಮನು ಎಲ್ಲ ಕರ್ಮಗಳಿಂದ ಅತೀತನಾಗಿದ್ದುಕೊಂಡು ಆಧ್ಯಾತ್ಮಿಕ ಕಾರಣ ಹಾಗೂ ಗುರಿ ಹಾಗೂ ಮೂಲ ಸಂಕಲ್ಪವಾಗಿರುವುದರಿಂದ, ಸಾಧಕನು ವಿಶ್ವದ ಎಲ್ಲ ಕಾರ್ಯಗಳ ಮೇಲೆ ವಿಜಯ ಸಾಧಿಸಿ, ವಿಶ್ವಾತೀತ ದಿವ್ಯ ಸ್ಥಿತಿಯಲ್ಲಿ ನಿಂತು ವಿಶ್ವದ ಎಲ್ಲ ಅವಶ್ಯಕ ಕಾರ್ಯಗಳನ್ನು ಮಾಡುವುದು ಸಾಧ್ಯವಾಗುವುದು. ಆಗ ಈ ಪ್ರಪಂಚವು ಒಂದು ಕಾರಾಗೃಹವಾಗದೇ "ರಾಜ್ಯಂ ಸಮೃದ್ಧಂ" ಆಗಿ ಬದಲಾಗುವುದು. ನಾವಾಗ ಈ ಪ್ರಪಂಚವನ್ನು ದೈವೀ ಕಾರಣಕ್ಕಾಗಿ, ದಿವ್ಯ ಜೀವನಕ್ಕಾಗಿ, ನಮ್ಮ ಕ್ಷುದ್ರ (ನಿಮ್ನ) ಅಹಂನ್ನು ಕೊಂದು, ನಮ್ಮ ಕ್ಷುಲ್ಲಕ ಆಶೆಗಳನ್ನು ಹಿಮ್ಮೆಟ್ಟಿ, ನಮ್ಮ ವೈಯಕ್ತಿಕತೆಯ ಬಂಧನದಿಂದ ಪಾರಾಗಿ, ಪಡೆದುಕೊಂಡಿರುವುದರಿಂದ ಎಲ್ಲವೂ ಆಧ್ಯಾತ್ಮಿಕ ಆನಂದವಾಗಿ ಬದಲಾಗುವುದು. ಆಗ ಮುಕ್ತನಾದ ಜೀವಿಯು "ಸ್ವರಾಟ್ ಸಾಮ್ರಾಟ್" ತನ್ನ ಸ್ವಂತ ರಾಜ್ಯದ ಸ್ವತಂತ್ರ ರಾಜನಾಗಿ ಮೆರೆಯುವನು.

ಈ ರೀತಿ ಯಜ್ಞ ಭಾವದಿಂದ ಮಾಡುವ ಕರ್ಮಗಳನ್ನು (ಅಥವಾ ಕರ್ಮ ಯೋಗವನ್ನು) ಮೋಕ್ಷದ ಹಾಗೂ ಸಂಪೂರ್ಣ ಆಧ್ಯಾತ್ಮಿಕ ಸಂಸಿದ್ಧಿಯ ಸಾಧನಗಳು, ಮಾರ್ಗ ಎಂದು ಗೀತೆ ಹೇಳುತ್ತದೆ. ಆದ್ದರಿಂದಲೇ "ಕರ್ಮಣೈವ ಹಿ ಸಂಸಿದ್ಧಿಂ ಆಸ್ಥಿತೌಃ ಜನಕಾದಯೆ" ಅಂದರೆ ಜನಕನಾದಿ ಮಹಾನ್ ಕರ್ಮ ಯೋಗಿಗಳು ಈ ಪ್ರಾಚೀನ ಯೋಗ ಮಾರ್ಗವನ್ನುಸರಿಸುತ್ತ ಯಜ್ಞ ಬುದ್ಧಿಯಿಂದ, ಸಮತ್ವದಿಂದ ಕರ್ಮಗಳನ್ನು ಮಾಡುತ್ತ, ಎಲ್ಲ ಸ್ವಹಿತಾಸಕ್ತಿ, ಆಸಕ್ತಿ ಎಲ್ಲವನ್ನು ತ್ಯಾಗ ಮಾಡಿ "ಪೂರ್ಣತ್ವವನ್ನು" ಪಡೆದುಕೊಂಡರು. ಅದೇ ರೀತಿ, ಅದೇ ರೀತಿಯ ಅನಾಸ್ಥೆ ಹಾಗೂ ಆಸಕ್ತಿರಾಹಿತ್ಯದ ಮೂಲಕ, ಮುಕ್ತರಾದ ನಂತರವೂ, ವಿಶ್ವದಲ್ಲಿ

ಕರ್ಮ ಮಾಡಲು ಸಾಧ್ಯ ಹಾಗೂ ಕರ್ಮ ಮಾಡುತ್ತಲೇ ಇರಬೇಕು. ವಿಶಾಲವಾದ ಆತ್ಮದ ದೃಷ್ಟಿಯಿಂದ ದೈವೀ ಭಾವದಿಂದ, ಶಾಂತಿಯಿಂದ, ಆಧ್ಯಾತ್ಮಿಕ ರೀತಿಯ ಉನ್ನತ ಸ್ವಭಾವದ ಮೂಲಕ, ಜಗತ್ತಿನಲ್ಲಿ ಎಲ್ಲ ಅವಶ್ಯಕ ಕರ್ಮಗಳನ್ನು ಮಾಡುತ್ತ ಜೀವಿಸುವುದು ಅವಶ್ಯವಿದೆ. ಇದನ್ನೇ "ಲೋಕ ಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ" ಎಂದು ಹೇಳುತ್ತಾನೆ. ಯಾರು ಆದರ್ಶಪ್ರಾಯರೋ, ಉನ್ನತ ವ್ಯಕ್ತಿತ್ವ ಹೊಂದಿರುವರೋ ಅವರೇನು ಮಾಡುತ್ತಾರೋ ಅದನ್ನೇ ಕೆಳ ಹಂತದ ಜನರು ಅನುಸರಿಸುತ್ತಾರೆ. ಅವರು ಮಾಡಿದ ಮಾದರಿಯನ್ನೇ ಇತರರೂ ಪಾಲಿಸುತ್ತಾರೆ. ನೋಡು ಅರ್ಜುನ! ಮೂರು ಲೋಕಗಳಲ್ಲಿ ನಿಜವಾಗಿ ನಾನು ಮಾಡಲೇಬೇಕು ಅನ್ನುವಂಥ ಯಾವ ಕರ್ಮವೂ ಇಲ್ಲ; ನಾನು ಏನನ್ನೂ ಮಾಡಬೇಕಿಲ್ಲ. ನನಗೆ ಯಾವ ಲಾಭವೂ ಇಲ್ಲ. ನಾನು ಏನನ್ನಾದರೂ ಅರ್ಜಿಸಬೇಕು, ಗಳಿಸಬೇಕು ಅಂತೇನೂ ಕರ್ಮ ಮಾಡುವುದಿಲ್ಲ. ನನಗೆ ಅಪ್ರಾಪ್ಯವಾದುದು ಬ್ರಹ್ಮಾಂಡದಲ್ಲಿಯೇ ಏನೂ ಇಲ್ಲ. ಆದರೂ ನಾನು ಕರ್ಮ ಮಾಡುತ್ತೇನಲ್ಲವೇ? ನೀನೇ ನೋಡಿದ್ದೀಯಲ್ಲ ಅರ್ಜುನ! ಏಕೆಂದರೆ ನಾನು ಕರ್ಮ ಮಾರ್ಗದಲ್ಲಿ ನಿತ್ಯ ಜಾಗೃತನಾಗಿರದೇ ಹೋದರೆ, ಯಾವ ಮಾನವರೂ ಕರ್ಮ ಮಾರ್ಗದಲ್ಲಿ ನಡೆಯುವುದಿಲ್ಲ. ಸನ್ಯಾಸಿಯ ಹಾಗೆ ಕರ್ಮ ತ್ಯಾಗ ಮಾಡುವುದೇ ವಿಹಿತವೆಂದು ಭಾವಿಸುತ್ತಾರೆ. ಆಗ ಇಡೀ ವಿಶ್ವದಲ್ಲಿ ಎಲ್ಲೆಡೆ ಗೊಂದಲ ಸೃಷ್ಟಿಯಾಗಿ ಬಿಡುವುದು. ಆಗ ನಾನೇ ಸೃಷ್ಟಿಮಾಡಿದ ವಿಶ್ವವನ್ನು ನಾನೇ ನಾಶಮಾಡಬೇಕಾಗಿ ಬರುತ್ತದೆ. ಅನೇಕರಿಗೆ (ಅಜ್ಞಾನಿಗಳಿಗೆ) ಇದು ಗೊತ್ತಿಲ್ಲ. ಎಲ್ಲರೂ ಕರ್ಮಗಳಿಗೆ ಅಂಟಿಕೊಂಡೇ ಕೆಲಸ ಮಾಡುತ್ತಾರೆ. ಮೋಹಿತರಾಗಿಯೇ ಕೆಲಸ ಮಾಡುತ್ತಾರೆ; ಯಾರಿಗೆ ಈ ಯಜ್ಞ ತತ್ವ ತಿಳಿದಿದೆಯೋ ಅವರು (ಜ್ಞಾನಿಗಳು) ಮೋಹವಿಲ್ಲದೇ ಕರ್ಮ ಮಾಡುತ್ತಾರೆ. ಏಕೆಂದರೆ ಅವರಿಗೆ ಲೋಕ ಸಂಗ್ರಹ (ಜಗದಲ್ಲಿ ಕರ್ಮ ಮಾಡುವುದು ಅತ್ಯಂತ ಅವಶ್ಯಕವಿರುವುದರಿಂದ, ಜನರನ್ನು ಕರ್ಮದಲ್ಲಿ ತೊಡಗಿಸಲು ಜ್ಞಾನಿಗಳೂ ಸಹ ಕರ್ಮದಲ್ಲಿ ಅನಾಸಕ್ತಿಯಿಂದ ತೊಡಗಿಕೊಂಡಿರುತ್ತಾರೆ) ಮಾಡಲೇಬೇಕಾಗಿದೆ. ಆದ್ದರಿಂದ ತಾವೂ ಕರ್ಮದಲ್ಲಿ (ಜ್ಞಾನದಿಂದ) ತೊಡಗುತ್ತಾರೆ. ಇತರರಿಗೂ ಆ ಪಂಕ್ತಿ ಹಾಕಿ ಕೊಟ್ಟು ಅವರೂ ಕರ್ಮದಲ್ಲಿ ತೊಡಗುವಂತೆ ಮಾಡುತ್ತಾರೆ. ಇದೇ ಕರ್ಮ ಯೋಗದ ವೈಶಿಷ್ಟ್ಯ ಗೀತೆಯ ಮೂರನೆಯ ಅಧ್ಯಾಯದಲ್ಲಿ ಬರುವ ಈ ಏಳು ಶ್ಲೋಕಗಳಿಗಿಂತ (20–26) ಇನ್ನೂ ಹೆಚ್ಚು ಅರ್ಥಗರ್ಭಿತವಾದ ಅತಿ ಮಹತ್ವದ ಶ್ಲೋಕಗಳಿವೆ. ಅವೆಲ್ಲವೂ ಕರ್ಮ ಮಾರ್ಗದ ಅನಿವಾರ್ಯತೆಯನ್ನು, ಮಹತ್ವವನ್ನು ಸಾರುತ್ತವೆ.

ಆದರೆ ಒಂದು ಸಂಗತಿಯನ್ನು ನಾವು ಮರೆಯದೇ ನೆನಪಿನಲ್ಲಿಟ್ಟು–ಕೊಳ್ಳಬೇಕು. ಅದೇನೆಂದರೆ ಈ ಶ್ಲೋಕಗಳನ್ನು ಸದ್ಯದ ಆಧುನಿಕ ವ್ಯವಹಾರಿಕ ದೃಷ್ಟಿಕೋನದ ಮೂಲಕ ಅರ್ಥೈಸಲು ಹೋಗಬಾರದು. ಪ್ರಸ್ತುತ ಆಗುಹೋಗುಗಳು ಇವುಗಳ ಸುತ್ತಲೇ ತಿರುಗುತ್ತ ಆಧ್ಯಾತ್ಮಿಕ ಸಾಧ್ಯತೆ, ಆಧ್ಯಾತ್ಮಿಕ ಅರ್ಥಾಪತ್ತಿಗಳನ್ನು ಕಡೆಗಣಿಸುತ್ತದೆ. ಸಮಾಜ ಸೇವೆ, ದೇಶ ಭಕ್ತಿ, ವಿಶ್ವಾತ್ಮಕ, ಅಂತರಾಷ್ಟ್ರೀಯ ಮಾನವ ಕುಲ ಹಿತದ ಕಾರ್ಯ ಯೋಜನೆ, ಹಾಗೂ ನೂರಾರು ಇಂಥವೇ ಅತ್ಯುತ್ಸಾಹಪೂರ್ಣ ಸಾಮಾಜಿಕ ಕನಸು ಹಾಗೂ ಅವುಗಳನ್ನು ನನಸಾಗಿಸುವ ಪ್ರಯತ್ನ ಇವುಗಳನ್ನೇ ತಾತ್ವಿಕವಾಗಿ, ತತ್ವ ಜ್ಞಾನದ ತಳಹದಿಯ ಮೇಲೆ ಧಾರ್ಮಿಕ ತಳಹದಿಯ ಮೇಲೆ ಸಮರ್ಥನೆ ಮಾಡುತ್ತ ಜನರೆಲ್ಲರೂ ಅತ್ತಲೇ ಧಾವಿಸುವಂತೆ ಮಾಡುವ ಪ್ರಯತ್ನ ಆಧುನಿಕ ಮನೋಭಾವದಲ್ಲಿ ಬೇರೂರಿದೆ. ಇಲ್ಲಿರುವ ನಿಯಮ ಅಥವಾ ಕಾನೂನು ವಿಶಾಲವಾದ ನೈತಿಕ ಮತ್ತು ಬೌದ್ಧಿಕ ಪರೋಪಕಾರ ಇವುಗಳ ಮೇಲೆ ಒತ್ತು ನೀಡುವುದೆಂಬುದು ತಪ್ಪು. ಮುಖ್ಯವಾಗಿ ನಾವು ಗ್ರಹಿಸಬೇಕಾದ ಹಾಗೂ ಅಳವಡಿಸಿಕೊಳ್ಳಬೇಕಾದ ತತ್ವವೇನೆಂದರೆ, ಈಶ್ವರನೊಂದಿಗೆ ಸೇರಿ ಹೋಗುವುದು, ಅವನ ಜೊತೆ ತಾದಾತ್ಮ್ಯ ಹೊಂದುವುದು. ಈಶ್ವರನು ತನ್ನಲ್ಲೂ ಇದ್ದಾನೆ, ಎಲ್ಲ ಜೀವಗಳಲ್ಲೂ ಇದ್ದಾನೆ. ಇಡೀ ವಿಶ್ವವೆಲ್ಲವೂ ಈಶ್ವರನ ಉದರದೊಳಗೇ ಇದೆ. ಈ ಭಾವವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಸ್ವಲ್ಪ ಅಪಾರ್ಥವಾದರೂ ಆಧ್ಯಾತ್ಮಿಕ ಸಾಧನೆಯ ತಳಹದಿಯೇ ತಪ್ಪಿಹೋಗುತ್ತದೆ.

ಈಗ ಸದ್ಯದ ವ್ಯವಹಾರದಲ್ಲಿ ವೈಯಕ್ತಿಕತೆಯು ಸ್ವತಂತ್ರವಾಗಿದ್ದರೂ ಸಹ ಅದು ಸಮಾಜಕ್ಕೆ, ಮಾನವೀಯತೆಗೆ ಕಟ್ಟುಬಿದ್ದಿರಬೇಕು. ಅದನ್ನು ಮೀರಿ ಹೋಗಬಾರ–ದೆಂದೂ, ವಿಶ್ವಾತ್ಮಕತೆಗೆ ಶರಣಾಗಬೇಕೆಂದೂ ಅರ್ಥಮಾಡಲಾಗುವುದುಂಟು. ಆದರೆ ವೈಯಕ್ತಿಕತೆಯ ನಿಜವಾದ ಸಾರ್ಥಕತೆಯು ಇರುವುದು ಅದು ಸರ್ವೇಶ್ವರನಲ್ಲಿ ಕರಗಿ ಹೋಗುವುದರಲ್ಲಿ. ಎಲ್ಲವನ್ನೂ ತನ್ನೊಳಗೆ ಸಮಾಹಿಸಿಕೊಂಡಿರುವ ಈಶ್ವರನಲ್ಲಿ ತನ್ನ ವೈಯಕ್ತಿಕ ಅಹಂನ್ನು ವಿಲಯನಗೊಳಿಸುವುದರಲ್ಲಿ ವೈಯಕ್ತಿಕ ಅಹಂ (ಪ್ರತ್ಯೇಕತೆಯು) ಕೂಡ ಈಶ್ವರೀ ಭಾವವನ್ನು ಪಡೆಯಬೇಕೆಂಬುದೇ ಆಧ್ಯಾತ್ಮದ ಗುರಿ, ಅದೇ ಸಾರ್ಥಕತೆ, ಕೃತಾರ್ಥತೆ, ಪರಿಪೂರ್ಣತೆ. ಗೀತೆಯು ಇಂಥ ಎಲ್ಲ ವ್ಯವಹಾರಿಕ ಪರಿಕಲ್ಪನೆಗಳನ್ನು ಮೀರಿ ಹೋಗುತ್ತದೆ. ಆಧುನಿಕ ಮನವು ಸದ್ಯಕ್ಕೆ ಹೋರಾಟದ ಅವಸ್ಥೆಯಲ್ಲಿದೆ. ಅಹಂನ ಬಂಧನದಿಂದ ಕಳಚಿಕೊಂಡು ಬಿಡಬೇಕು ಎಂಬ ಯತ್ನದಲ್ಲಿದೆ. ಆದರೆ ಅದಿನ್ನೂ ಸಾಮಾನ್ಯ ವ್ಯಾವಹಾರಿಕ ಸ್ತರದಲ್ಲೇ ಇದೆ,

ಬೌದ್ಧಿಕ ಆಲೋಚನೆಯ ಮಟ್ಟದಲ್ಲೇ ಇದೆ, ನೈತಿಕ ತಾರತಮ್ಯದ ಹಂತದಲ್ಲೇ ಇದೆ. ಆದರೆ ಅದಿನ್ನೂ ಆಧ್ಯಾತ್ಮದ ಸ್ತರವನ್ನು ಮುಟ್ಟಿಲ್ಲ. ರಾಷ್ಟ್ರ ಪ್ರೇಮ, ರಾಷ್ಟ್ರ ಭಕ್ತಿ, ವಿಶ್ವೈಕ್ಯತೆಯ ಭಾವ, ಸಮಾಜ ಸೇವೆ, ಸಾಮೂಹಿಕ ಹಾಗೂ ಮಾನವೀಯ ಧರ್ಮ ಆದರ್ಶಪ್ರಾಯ ಇವೆಲ್ಲವುಗಳೂ ಕನಿಷ್ಠವೆಂದಲ್ಲ. ಅವು ಆಯಾ ಸ್ಥಾನದಲ್ಲಿ ಮೌಲಿಕವಾಗಿವೆ, ಶ್ರೇಷ್ಠವಾಗಿವೆ ಹಾಗೂ ಶ್ಲಾಘನೀಯವಾಗಿವೆ. ಇವುಗಳ ಮೂಲಕ ಮಾನವನು ತನ್ನ ಪ್ರಾಥಮಿಕ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ, ರಾಷ್ಟ್ರೀಯ ಅಹಂಗಳಿಂದ ನಿಧಾನವಾಗಿ ಮುಕ್ತನಾಗುತ್ತಾನೆ. ಇಲ್ಲವೆಂದಲ್ಲ, ಆಗೇ ಆಗುತ್ತಾನೆ. ಆದರೆ ಇವೇ ಪ್ರಮುಖ ಹಾಗೂ ಪ್ರಥಮ ಎಂದಲ್ಲ. ಇವು ಮಧ್ಯಮ ಹಂತದ ಆದರ್ಶಗಳು, ಇಲ್ಲಿ ವ್ಯಕ್ತಿಯು ವೈಯಕ್ತಿಕವಾಗಿ ತನ್ನ ಬುದ್ಧಿ ಬಲ, ನೈತಿಕ ಬಲ ಹಾಗೂ ಭಾವನಾತ್ಮಕ ಬಲಗಳ ಮೇಲಿಂದ ಇವನ್ನೆಲ್ಲ ಸಾಧಿಸುವ ಪ್ರಯತ್ನ ಮಾಡುತ್ತಾನೆ. ತಕ್ಕ ಮಟ್ಟಿಗೆ ಸರಿಯಾಗಿಯೇ ಮಾಡುತ್ತಾನೆ ಎಂಬುದೂ ಸಹ ನಿಜವೇ. ತನ್ನ ವೈಯಕ್ತಿಕ ಅಂತಃಸ್ವತ, ಸತ್ತೆಯ ಸ್ತರದಲ್ಲಿ ಇವುಗಳನ್ನು ಸಿದ್ಧಿಸಿಕೊಳ್ಳುತ್ತಾನೆ ಎಂಬುದೂ ಸುಳ್ಳಲ್ಲ. ತನ್ನ ವೈಯಕ್ತಿಕ ಸತ್ತೆಯನ್ನು ಜಗತ್ತಿನ ಇತರ ವೈಯಕ್ತಿಕ ಹಾಗೂ ಸಾಮೂಹಿಕ ಸತ್ತೆಯಲ್ಲಿ ಇದನ್ನು ಸಾಧಿಸಿಕೊಳ್ಳುತ್ತಾನೆ ಎಂದೇನೂ ಇದರಿಂದ ಅರ್ಥವಾಗುವುದಿಲ್ಲ. ಆದರೆ ಗೀತೆಯು ಇನ್ನೂ ಬಹಳ ಮುಂದಕ್ಕೆ ಹೋಗುತ್ತದೆ. ಎಲ್ಲವನ್ನು ಮೀರಿ ಮೂರನೆಯ ಅವಸ್ಥೆಯನ್ನು ಕೂಡ ದಾಟಿ ಸಾಧಕನು ವೈಯಕ್ತಿಕ ಪ್ರಜ್ಞೆಯನ್ನು ಅಪೂರ್ವ ಅವಸ್ಥೆಗೆ ಮುಟ್ಟುವ ಪ್ರಯತ್ನ ಮಾಡುತ್ತಾನೆ. ಈ ದೃಷ್ಟಿಯಿಂದ ನೋಡಿದರೆ ವಿಶ್ವಾತ್ಮಕತೆ, ರಾಷ್ಟ್ರೀಯತೆ ಮುಂತಾದವೆಲ್ಲವೂ ನಂತರದ ಪ್ರಾಮುಖ್ಯತೆ ಪಡೆಯುತ್ತದೆ.

ಭಾರತೀಯ ಸಾಮಾಜಿಕ ಪ್ರವೃತ್ತಿಯು ವ್ಯಕ್ತಿಯನ್ನು ಸಮಾಜದ ಬೇಡಿಕೆಗಳಿಗೆ ಸ್ಪಂದಿಸುವಂತೆ, ಓಗೊಡುವಂತೆ, ಅದರ ತೃಪ್ತಿಗಾಗಿ ದುಡಿಯಬೇಕೆಂದು ಬಯಸುತ್ತದೆ. ಆದರೆ ಭಾರತದ ಧಾರ್ಮಿಕ ಅಲೋಚನೆಯು ಹಾಗೂ ಆಧ್ಯಾತ್ಮಿಕ ಅನ್ವೇಷಣೆಯು ಯಾವಾಗಲೂ ವೈಯಕ್ತಿಕತೆಯ ನೆಲೆಯಲ್ಲಿಯೇ, ಹೆಚ್ಚು ಔದಾರ್ಯದಿಂದ ಅಲ್ಲಿಯೇ ಸುತ್ತುತ್ತದೆ. ಭಾರತೀಯ ದಾರ್ಶನಿಕ ಹಾಗೂ ತಾತ್ವಿಕ ಚಿಂತನೆಯು, ಗೀತೆಯಂತೆಯೇ, ಸಾಮಾನ್ಯವಾಗಿ ಮೊದಲು ವೈಯಕ್ತಿಕತೆಯ ಸಾಧನೆ, ಅಭಿವೃದ್ಧಿಯತ್ತಲೇ ಕೇಂದ್ರೀಕರಿಸುತ್ತದೆ. ವ್ಯಕ್ತಿಯ ವೈಯಕ್ತಿಕ ಅತ್ಯುಚ್ಚ ಬೇಡಿಕೆ ಏನು? ತಾನು ಪಡೆದ ಆಧ್ಯಾತ್ಮಿಕ ಸ್ವಾತಂತ್ರ್ಯ, ಮಹತಿ, ಜ್ಞಾನ, ಸಂಪತ್ತುಗಳನ್ನು ಅನುಸಂಧಾನ ಮಾಡುವುದರ ಬಗೆಗೇನೇ ಇದೆ. ತಾನು ದಾರ್ಶನಿಕನಾಗಬೇಕು,

ದೃಷ್ಟಾರನಾಗಬೇಕು. ಆಧ್ಯಾತ್ಮಿಕ ಸಾಮ್ರಾಜ್ಯದ ಸಾಮ್ರಾಟನಾಗಬೇಕು ಎಂಬುದೇ ಅವನ ಆತ್ಯಂತಿಕ ಬಯಕೆ. ವೈದಿಕ ಋಷಿಗಳು ಆರಂಭದಿಂದಲೂ ಇಂಥ ಜನಾಂಗದ ಆದರ್ಶವನ್ನೇ ಕಂಡವರು. ಅಂಥ ಜನಾಂಗವನ್ನು ನಿರ್ಮಾಣ ಮಾಡಲು ಶ್ರಮಿಸಿದವರು. ವ್ಯಕ್ತಿಯು ತನ್ನನ್ನು ಮೀರಿ ಬೆಳೆಯಬೇಕು ಎಂಬುದೇ ಅವರ ಗುರಿಯಾಗಿತ್ತು. ತನ್ನೆಲ್ಲ ಗುರಿಗಳನ್ನು, ವ್ಯಕ್ತಿಗತ ಧ್ಯೇಯಗಳನ್ನು ಸುವ್ಯವಸ್ಥಿತ ಸಮಾಜದ ಗುರಿಯಲ್ಲಿ ಸೇರಿಸಿ ಬಿಡಬೇಕು, ವ್ಯಕ್ತಿಗತವಾದುದೇನನ್ನೂ ಉಳಿಸಿಕೊಳ್ಳಬಾರದೆಂದು ಅವರೆಂದಿಗೂ ಹೇಳಲಿಲ್ಲ. ಬದಲಾಗಿ ಅವರು ಹೇಳಿದ್ದು, ವ್ಯಕ್ತಿಯು ಬೆಳೆಯಬೇಕು. ವಿಶಾಲವಾಗಿ ಬೆಳೆಯಬೇಕು, ಎತ್ತರಕ್ಕೆ ಬೆಳೆಯಬೇಕು. ಪರಮ ದೈವೀ ಪ್ರಜ್ಞೆಯಲ್ಲಿ ಬೆಳೆದು ಒಂದಾಗಬೇಕು ಎಂದೇ ಆದೇಶಿಸಿದರು. ಗೀತೆಯು ಹೇಳುವ ನಿಯಮವು ತನ್ನ ವ್ಯಕ್ತಿತ್ವದ ಒಡೆಯನಾದ ಮಾನವನಿಗೆ, ಅಲೆ ಮಾನವನಿಗೆ, ದಿವ್ಯ ಮಾನವನಿಗೆ, ಅತ್ಯುತ್ತಮನಾದವನಿಗೆ ಅನ್ವಯಿಸುತ್ತದೆ. ಹಾಗೆಂದು ನೀಟ್ಸೆ ಹೇಳುವ ನಿರ್ಘೃಣ ಅತಿಮಾನವನಲ್ಲ; ದಾನವ ಅಥವಾ ದೇವದೂತನಂತೆ ಏಕಾಂಗಿ ಅಲೆಮಾನವನೂ ಅಲ್ಲ; ಅಪೋಲೋ ಮಾನ್ಯ ಓಲಿಪಂಸ್ ಮಾನ್ಯ ಅಥವಾ ಡಾಯೋನಿಸ್ಸ ಮಾನ್ಯ ಏಕದೇಶೀಯ ಪ್ರಾವಿಣ್ಯ ಪಡೆದ ಅಲೆಮಾನವನೂ ಅಲ್ಲ; ಸಮತೋಲ ವಿಕಾಸ ಹೊಂದದ ಅತಿಮಾನವನೂ ಅಲ್ಲ ಎಂಬುದನ್ನು ಬೇರೆ ಹೇಳಬೇಕಾದ ಅವಶ್ಯಕತೆ ಇಲ್ಲ. ಗೀತೆಯು ಹೇಳುವ ಮಾನವನು ತನ್ನ ಸಂಪೂರ್ಣ ಅಸ್ತಿತ್ವವನ್ನು, ಪರಮಾತ್ಮ ತತ್ವಕ್ಕೆ ಅರ್ಪಿಸಿದ್ದಾನೆ, ಅವನ ಸ್ವಭಾವ, ಪ್ರಕೃತಿ, ಪ್ರಜ್ಞೆ ಎಲ್ಲವೂ ವಿಶ್ವಾತೀತ ಹಾಗೂ ವಿಶ್ವಾತ್ಮಕ ಈಶ್ವರನಿಗೆ ಶರಣಾಗಿ ಹೋಗಿದೆ. ತನ್ನ ಕುಬ್ಜ (ಸಣ್ಣ) ಆತ್ಮವನ್ನು ಕಳೆದುಕೊಂಡು ಹಿರಿದಾದ ಆತ್ಮನಾಗಿ ಬೆಳೆದು, ದಿವ್ಯ ಆತ್ಮನಾಗಿ ನಿಂತಿದ್ದಾನೆ. ಇಂಥ ವ್ಯಕ್ತಿಯನ್ನು ಗೀತೆಯು ದೇವ ಮಾನವ ಎಂದು ಕರೆಯುತ್ತದೆ.

ಮಾನವನು ತನ್ನನ್ನು ಮೀರಿ ತಾನು ಬೆಳೆಯಬೇಕು. ಅಪರಿಪೂರ್ಣ ಪ್ರಕೃತಿಯಿಂದ, ತ್ರೈಗುಣ್ಯಮಯಿ ಮಾಯೆಯಿಂದ ಬಹು ಎತ್ತರಕ್ಕೆ ಬೆಳೆದು, ದಿವ್ಯ ಸತ್, ದಿವ್ಯ ಚಿತ್ (ಪ್ರಜ್ಞೆ) ಹಾಗೂ ದೈತ್ಯ ಪ್ರಕೃತಿಯುಳ್ಳವನಾಗಬೇಕು. “ಮದ್‌ಭಾವಂ ಆಗತಂ” ಎಂಬುದೇ ಯೋಗದ ಮುಖ್ಯ ಗುರಿ. ಈ ಗುರಿಯು ಸಫಲವಾದರೆ, ವ್ಯಕ್ತಿಯು ಬ್ರಾಹ್ಮೀ ಸ್ಥಿತಿಯಲ್ಲಿದ್ದರೂ ಸಹ ಅವನ ಅಹಂ ಪ್ರಜ್ಞೆ ಇಲ್ಲವಾಗಿರುತ್ತದೆ. ತಾನೂ ಹಾಗೂ ಜಗತ್ತು ಯಾವುದನ್ನೂ ಅವನು ತನ್ನ ವ್ಯಕ್ತಿಗತ ಅಹಂ ಪ್ರಜ್ಞೆಯ ಮೂಲಕ ಅಳೆಯಲೆತ್ನಿಸುವುದಿಲ್ಲ. ಅವನು ಸಮಸ್ತ ಬ್ರಹ್ಮಾಂಡವನ್ನೇ ಈಶ್ವರನಲ್ಲಿ ಕಾಣುತ್ತಾನೆ

ಹಾಗೂ ಪ್ರತಿ ವ್ಯಕ್ತಿಯಲ್ಲೂ ಪುರುಷೋತ್ತಮನಿರುವುದರ ಅರಿವು ಅವರಿಗಾಗುತ್ತದೆ. ಹಾಗಾದರೆ ಅವನ ನಡೆ, ನುಡಿ, ಭಾವ ಎಲ್ಲವೂ ಹೇಗಿರುತ್ತವೆ? ಅವನು ಹೇಗಿರುತ್ತಾನೆ? ಏನು ಮಾಡುತ್ತಾನೆ? ಅವನ ದೃಷ್ಟಿಕೋನದ ಪರಿಣಾಮ ಏನು? ಅವನ ವೈಯಕ್ತಿಕ ಹಾಗೂ ವಿಶ್ವಾತ್ಮಕ ಕಾರ್ಯಗಳ ಹಿಂದಿರುವ ಪ್ರೇರಣೆ ಏನು ಹಾಗಾದರೆ? ಇದು ಅರ್ಜುನನ ಪ್ರಶ್ನೆ. ಆದರೆ ಕೃಷ್ಣ ಉತ್ತರಿಸುವುದು ಬೇರೆ ವಿಧವಾಗಿ, ಯಾವ ನೆಲೆಯಿಂದ ಅರ್ಜುನನು ಪ್ರಶ್ನೆ ಮಾಡುತ್ತಾನೋ ಅದರಿಂದ ಭಿನ್ನವಾಗಿ ಬೇರೆ ದೃಷ್ಟಿಕೋನದಿಂದ ಉತ್ತರಿಸುತ್ತಾನೆ. ಇಲ್ಲಿ ಪ್ರೇರಣೆಯು ವೈಯಕ್ತಿಕವಾಗಿರುವುದಿಲ್ಲ. ಯಾವ ವೈಯಕ್ತಿಕ ಆಶೆಯೂ ಇಲ್ಲ; ಬೌದ್ಧಿಕ, ನೈತಿಕ, ಭಾವನಾತ್ಮಕ ಸ್ತರದಲ್ಲಿ ಯಾವ ಬಯಕೆ, ಇಚ್ಛೆ ಇಲ್ಲವೇ ಇಲ್ಲ, ಏಕೆಂದರೆ ಅವುಗಳನ್ನೆಲ್ಲ ಅವನು ತ್ಯಜಿಸಿದ್ದಾನೆ: ನೈತಿಕ ಪ್ರೇರಣೆಯೂ ಸಹ ಇಲ್ಲ, ಏಕೆಂದರೆ ಮುಕ್ತನಾದವನು ಕೆಳ ಸ್ತರದ ಪಾಪ, ಪುಣ್ಯಗಳನ್ನು ಮೀರಿದ್ದಾನೆ. ಅವನು ಶುಭಾಶುಭಗಳನ್ನು ಮೀರಿದ ವೈಭವಪೂರ್ಣವಾದ ಪರಿಶುದ್ಧತೆಯ ಸ್ತರದಲ್ಲಿ ನೆಲೆ ನಿಂತಿದ್ದಾನೆ. ಅವನಲ್ಲೀಗ ಆತ್ಮ ಪರಿಪೂರ್ಣತೆಗಾಗಿ ಮಾಡಬೇಕಾದ ಯಾವ ಕರ್ತವ್ಯ ಕರ್ಮಗಳೂ ಉಳಿದಿಲ್ಲ. ಅವೆಲ್ಲವನ್ನು ಅವನೀಗಾಗಲೇ ಪೂರೈಸಿದ್ದಾನೆ. ಹೀಗಾಗಿ ಆ ದೃಷ್ಟಿಯಿಂದ ಅವನಿಗೆ ಯಾವ ಆಧ್ಯಾತ್ಮಿಕ ಕರೆ, ಪ್ರೇರಣೆ ಇರುವುದಿಲ್ಲ. ಈಗ ಅವನಿಗಿರುವುದೊಂದೇ ಒಂದು, ಅದು ಲೋಕ ಸಂಗ್ರಹ, ಬೇರೆ ಲೋಕದ ಸಂಗ್ರಹಂ. ಜನರನ್ನು ಲೋಕದ ಸಮಸ್ತ ಜನರನ್ನು ಸಾಮಾನ್ಯ ಮಾನವ ಸ್ತರದಿಂದ ವಿಮುಖರನ್ನಾಗಿಸಿ ಉನ್ನತವಾದ ದಿವ್ಯ ಜೀವನದ ಎತ್ತರಕ್ಕೆ ಎತ್ತರಿಸುವುದೇ ಅವನ ಹಿಂದಿರುವ ಕಾರ್ಯಗಳ ಉದ್ದೇಶ. ಅದೇ ಪ್ರೇರಣೆ.

ಸಾಯುಜ್ಯ, ಸಾಲೋಕ್ಯ, ಸಾದೃಶ್ಯ ಇವು ಬೆಳೆಯ ಬೇಕಾಗಿರುವ ಜೀವನ ಅಥವಾ ಅಂತರಾತ್ಮನ ಸ್ಥಿತಿಗಳು. ಸಾಧರ್ಮ್ಯವೆಂದರೆ ಎಲ್ಲ ರೀತಿಯ ಕೆಲಸಗಳನ್ನು ತ್ಯಜಿಸಿ ಸುಮ್ಮನಿರುವುದಲ್ಲ. ಅದು ಪರಮಾತ್ಮನ ಏಕೈಕ ನಿಯಮ, ನಾವು ಮಾಡುವ ಕರ್ಮಗಳು ಪರಮಾತ್ಮ ಹಾಗೂ ಅವನ ಜೊತೆಗಿನ ಸಂಬಂಧದ ಏಕಮಾತ್ರ ಸೂತ್ರವಾಗುತ್ತ ಹೊರಟಿದೆ. “ಕಿಂ ಪ್ರಭಾಷಿತ, ಕಿಮಾನೇತ ವ್ರಜೇತ ಕಿಮ್.”

ಯಾವ ಜೀವರಾಶಿಯೂ ಅಧ್ಯಾಯದಲ್ಲಿ, ಗೊಂದಲದಲ್ಲಿ, ಅನುಮಾನದಲ್ಲಿ ಬೀಳದಂತೆ ತಡೆ ಹಿಡಿಯಬೇಕಾಗಿದೆ. ವ್ಯವಹಾರಿಕವೇ ಆಗಲಿ, ಪಾರಮಾರ್ಥಿಕವೇ ಆಗಲಿ ಮಿಥ್ಯಾಗ್ರಹಿಕೆಯಾಗಬಾರದು. ಅಂಥ ಮಿಥ್ಯಾಗ್ರಹಿಕೆಯಿಂದ ವಿನಾಶವಾಗ–ಬಾರದೆಂದು ಅವನು ಕಾಯಬೇಕಾಗಿದೆ. ಜಗತ್ತೇನೋ ಅಜ್ಞಾನದ ಕತ್ತಲಲ್ಲೇ

ಬದುಕುತ್ತ, ಅದರಲ್ಲೇ ತಡಕಾಡುತ್ತ ಮುಂದುವರಿಯುತ್ತಲಿದೆ; ಇದನ್ನು ತಡೆದು, ಅಜ್ಞಾನವನ್ನು ಅಡ್ಡಗಟ್ಟದೇ ಹಾಗೆಯೇ ಬಿಟ್ಟರೆ ಜಗತ್ತು ಹಾಗೆಯೇ ಅನಂತ ಕಾಲದವರೆಗೆ ಮುಂದುವರಿಯಬಹುದು. ಅಂತೆಯೇ ಅದರ ಅಜ್ಞಾನದ ದಾರಿಯ ಮೇಲೆ ಬೆಳಕು ಚೆಲ್ಲಬೇಕಾಗಿದೆ. ತನ್ನ ಶಕ್ತಿಯಿಂದ, ಆಡಳಿತದಿಂದ, ತನ್ನ ನಡತೆಯ ಉದಾಹರಣೆಯ ಮೂಲಕ, ಕಣ್ಣಿಗೆ ಕಾಣುವಂಥ ಆದರ್ಶ ಜೀವನ ನಡೆಸುತ್ತ, ಕಣ್ಣಿಗೆ ಕಾಣದ ಅದೃಶ್ಯ ಮೌಲ್ಯಗಳನ್ನು ಪ್ರಭಾವಿತಗೊಳಿಸುತ್ತ ಅವನು ಬದುಕಬೇಕಾಗಿದೆ. ಯಾರು, ಸಾಮಾನ್ಯ ಸ್ತರಕ್ಕಿಂತ ಎತ್ತರವಾದ ಸ್ಥಿಯಲ್ಲಿದ್ದಾರೋ, ಸಾಮಾನ್ಯ ಸಾಮೂಹಿಕ ಸ್ತರಕ್ಕಿಂತ ಬಹು ಎತ್ತರದಲ್ಲಿದ್ದಾರೋ ಅವರೇ ನಿಜವಾಗಿ ಮನುಕುಲದ ನಾಯಕರು. ಏಕೆಂದರೆ ಹೇಗೆ ಬದುಕಬೇಕೆಂಬುದನ್ನು ತೋರಿಸಿ–ಕೊಡಬಲ್ಲ. ನಿಜವಾದ ಮಾರ್ಗದರ್ಶಕರು ಅವರೇ, ಸಾಮಾನ್ಯ ಜನರೆಲ್ಲರಿಗೆ ಒಂದು ಮಾದರಿಯನ್ನು ರೂಪಿಸಿ ಅದನ್ನು ಪಡೆಯುವಂತೆ ಪ್ರೇರೇಪಿಸಬಲ್ಲವರು ಅವರೇ – ಆದರೆ ದಿವ್ಯನಾಗಿ ಮಾರ್ಪಟ್ಟ ವ್ಯಕ್ತಿಯು ಮಾತ್ರ ಸಾಮಾನ್ಯನಲ್ಲ. ಅವನು ಬೀರುವ ಪ್ರಭಾವವನ್ನು, ಶಬ್ದಗಳಲ್ಲಿ ಅಳೆಯಲಿಕ್ಕಾಗುವುದಿಲ್ಲ. ಯಾವ ಸಾಮಾನ್ಯ ಶ್ರೇಷ್ಠಾತಿ ಶ್ರೇಷ್ಠ ಮಾನವ ಬೀರಬಹುದೋ ಅದಕ್ಕಿಂತ ಎಷ್ಟೋಪಟ್ಟು ಅಧಿಕ ಪ್ರಭಾವ ಬೀರಬಲ್ಲನು ಮತ್ತು ಒಂದು ಜೀವಂತ ನಿದರ್ಶನವನ್ನು ಕಡೆದು ನಿಲ್ಲಿಸಬಲ್ಲವನು. ಅಸಾಮಾನ್ಯವಾದ ಈ ಮಾನವೋತ್ತಮನು ಮಾನವ ಶ್ರೇಷ್ಠನು ಯಾವ ಉದಾಹರಣೆಯನ್ನೂ ಲೋಕದಿದಿರು ನಿಲ್ಲಿಸುತ್ತಾನೆ? ಆದರ್ಶ ವರ್ತನೆಯ ನಿಯಮವೆಂದು ಯಾವ ಆಚರಣ ನಿಯಮವನ್ನು ಅವನು ಜನರ ಮುಂದಿರಿಸುತ್ತಾನೆ?

ಈ ವಿಚಾರವನ್ನು ಇನ್ನಷ್ಟು ಸ್ಪಷ್ಟಪಡಿಸಲು, ಅದನ್ನು ಪರಿಪೂರ್ಣವಾಗಿ ಆರ್ಥೈಸಿಕೊಡಲು, ಅವತಾರ ಪುರುಷನಾದ ಗುರುವೂ ಗೀತಾಚಾರ್ಯನೂ ಆದ ಕೃಷ್ಣನು ತನ್ನ ಉದಾಹಾರಣೆಯನ್ನೇ ಕೊಡುತ್ತಾನೆ. “ಅರ್ಜುನ ನನ್ನನ್ನು ನೋಡು, ನಾನು ಕರ್ಮ ಮಾರ್ಗದಲ್ಲಿಯೇ ಸದಾ ನಿರತನಾಗಿರುತ್ತೇನೆ.” ಈ ದಾರಿಯನ್ನೇ ಎಲ್ಲರೂ ಅನುಸರಿಸಲಿ, ನೀನೂ ಕೂಡ ಕರ್ಮ ಯೋಗದಲ್ಲಿ ನಿಷ್ಠನಾಗಿರು. ನಾನು ಹೇಗೆ ಮಾಡುತ್ತೇನೋ ನೀನು ಕೂಡ ಹಾಗೆಯೇ ಆಚರಣೆ ಮಾಡು. ನಿಜವಾಗಿ, ನಾನು ಈ ಮೂಜಗದೊಳಗೆ ಏನನ್ನೂ ಮಾಡಬೇಕಾಗಿಲ್ಲ. ನನಗೆ ಅವುಗಳಿಂದ ಆಗಬೇಕಾದ್ದೇನೂ ಇಲ್ಲ. ಅದರಿಂದ ಯಾವ ಲಾಭವೂ ನನಗಿಲ್ಲ. ಬ್ರಹ್ಮಾಂಡದಲ್ಲಿರುವ ಸಮಸ್ತ ವಸ್ತು, ಪಶು, ಪಕ್ಷಿ ಪ್ರಾಣಿ, ವನ, ಗಿಡ, ಮನುಷ್ಯರು

ಎಲ್ಲರೂ ನನ್ನ ಅಧೀನರೇ. ನಾನು ಈ ಬ್ರಹ್ಮಾಂಡಕ್ಕಿಂತ ಬಹಳ ಉನ್ನತನಾಗಿದ್ದೇನೆ. ನಾನು ಯಾವುದರ ಮೇಲೂ, ಯಾರ ಮೇಲೂ ಅವಲಂಬಿಸಿಲ್ಲ. ಈ ಮೂಜಗದೊಳಗೆ ನನಗಿದು ಬೇಕು ಅನ್ನುವಂಥದೇನೂ ಇಲ್ಲವೇ ಇಲ್ಲ. ಆದರೂ ನಾನು ನನ್ನ ಕಾರ್ಯ ಮಾಡುತ್ತೇನೆ. ನಿನ್ನ ಆದರ್ಶವಾದರೂ ಸಹ ಇದೇ ಆಗಿರಬೇಕು. ನೀನು ಮಾಡುವ ಕಾರ್ಯದ ಹಿಂದೆ ಇದೇ ತತ್ವ ಇರಬೇಕು. ನಾನು ಭಗವಂತ, ನಾನು ಈಶ್ವರ, ನಾನು ನಿಯಮವೂ ಹೌದು, ನಾನು ಮಾದರಿಯೂ ಹೌದು. ನಾನು ಜನರು ನಡೆಯುವ ಸಲುವಾಗಿ ದಾರಿ ಮಾಡಿಕೊಡುತ್ತೇನೆ. ಜನರಿಗಾಗಿ, ಅವರ ಆಚರಣೆಗಾಗಿ ದಾರಿ ಮಾಡಿಕೊಡುವುದೇ ನನ್ನ ಗುರಿ. ಅದೇ ನನ್ನ ಕೆಲಸ. ನಾನೇ ಗುರಿಯೂ ಹೌದು, ನಾನೇ ದಾರಿಯೂ ಹೌದು, ಪ್ರಕ್ರಿಯೆಯೂ ಹೌದು, ಸಾಧನೆಯೂ ಹೌದು, ಸಿದ್ಧಿಯೂ ಹೌದು. ನಾನು ಇದೆಲ್ಲವನ್ನು ಮಾಡುವುದು. ವಿಶ್ವಾತ್ಮಕವಾದ ರೀತಿಯಲ್ಲಿ, ವಿಶಾಲವಾದ ರೀತಿಯಲ್ಲಿ, ಎಲ್ಲರ ಕಣ್ಣಿಗೆ ಕಾಣುವ ರೀತಿಯಲ್ಲಿ; ಆದರೆ ಅದೃಶ್ಯವಾಗಿದ್ದುಕೊಂಡೇ ನಾನು ಬಹಳ ಕಾರ್ಯ ಮಾಡುತ್ತೇನೆ. ನಾನೇನು ಮಾಡುತ್ತೇನೆಂಬುದು ಜನರಿಗೆ ಪೂರ್ಣ ರೂಪದಿಂದ ತಿಳಿಯುವುದೇ ಇಲ್ಲ, ನಿನಗೆ ಎಲ್ಲಾ ತಿಳಿದಿದೆ "ವಿಮೃಶ್ಯ ಹಿತ ಮಹಿತಂ" ತಿಳಿದು ಮಾಡುವ ಶಕ್ತಿ ಇದೆ, ನೀನು ದೈವೀ ಮಾನವನಂತನಾಗಿರುವಿ ನೀನೀಗ ಭಗವಂತನ ವೈಯಕ್ತಿಕ ಅಥವಾ ವ್ಯಕ್ತೀಕೃತ ಶಕ್ತಿಯಾಗಿ ಬೆಳೆಯಬೇಕು. ನೀನು ಮಾನವನೂ ಹೌದು, ದೈವೀ ಪುರುಷನೂ ಹೌದು, ನೀನು ದೈವೀ ನಿದರ್ಶನವಾಗಿ ನಿಲ್ಲಬೇಕು. ನಾನು ನನ್ನ ಅವತಾರಗಳಲ್ಲಿ ಹೇಗಿರುವೆನೋ ನೀನೂ ಕೂಡ ಹಾಗೆಯೇ ಆಗಬೇಕು. ಬಹಳಷ್ಟು ಜನ ಅವಿದ್ಯೆಯಲ್ಲಿಯೇ ಜನಿಸುತ್ತಾರೆ. ಅದರಲ್ಲೇ ಬದುಕುತ್ತಾರೆ. ದಾರ್ಶನಿಕರಾದವರು ಜ್ಞಾನದಲ್ಲಿ ಬದುಕುತ್ತಾರೆ, ಅದರಲ್ಲೇ ನೆಲೆಸಿರುತ್ತಾರೆ. ಆದರೆ ಅಂಥವರು ಭಯಾನಕ ಅಥವಾ ಆತಂಕಕಾರಕ ಉದಾಹರಣೆಗಳನ್ನು ನೀಡಿ ಜನರನ್ನೂ ಗೊಂದಲದಲ್ಲಿ ಕೆಡವಬಾರದು. ತನ್ನ ಜ್ಞಾನ ಮಾರ್ಗವೇ ಶ್ರೇಷ್ಠವೆಂದು ಹೇಳುತ್ತ, ಜಗತ್ತಿನಲ್ಲಿ ಮಾಡಲೇಬೇಕಾದ ಕರ್ಮಗಳನ್ನು ನಿರಾಕರಿಸಿಬಿಡಬಾರದು. ತನ್ನ ಉದಾಹರಣೆ ನೀಡಿದಂತೆ ಮಾಡಿ ಕರ್ಮದ ದಾರವನ್ನು ಮಧ್ಯದಲ್ಲಿಯೇ ಕತ್ತರಿಸಲು ಪ್ರಯತ್ನಿಸಬಾರದು. ನಾನು ಯಾವ ಮಾರ್ಗವನ್ನೂ ಹೆಣೆದಿದ್ದೇನೆಯೋ, ನಿರ್ಮಾಣ ಮಾಡಿದ್ದೇನೆಯೋ ಅದರಲ್ಲಿ ಕೆಲ ಸಿಕ್ಕುಗಳಿವೆ, ಗಂಟುಗಳಿವೆ, ಅಡಚಣೆಗಳಿವೆ, ಅನೇಕ ಏಳು ಬೀಳುಗಳಿವೆ. ಆ ವ್ಯವಸ್ಥಿತ ಶ್ರೇಣೀಬದ್ಧ ಮೆಟ್ಟಲುಗಳ ಮೇಲೆ ಹೊರಟಿರುವ ಮನಗಳಲ್ಲಿ ಗೊಂದಲ

ಹುಟ್ಟಿಸಬಾರದು. ಏನೊಂದು ತಪ್ಪು ಕಲ್ಪನೆ ಮಾಡಿಕೊಂಡು ಯಾರೂ ಮಾರ್ಗ ವಿಮುಖರಾಗಕೂಡದೆಂಬ ಕಾಳಜಿಯನ್ನು ಜ್ಞಾನಿಯಾದವನು ಮಾಡಬೇಕು. ಅಪರಾ ಪ್ರಕೃತಿಯಿಂದ ಪರಾಪ್ರಕೃತಿಯ ಕಡೆಗೆ ಮಾನವ ದಾರಿ ಸವೆಸಬೇಕು. ಮಾರ್ಗಕ್ರಮಣ ಮಾಡಬೇಕೆಂಬ ಅಪೂರ್ವ ಕಾಳಜಿಯಿಂದಲೇ ಈ ಮಾನವನ ಜೀವನದ ಎಲ್ಲ ಕ್ಷೇತ್ರಗಳನ್ನು ನಾನು ಸಂಯೋಜನೆ ಮಾಡಿದ್ದೇನೆ. ಅವುಗಳಲ್ಲಾತ ಗೊಂದಲವನ್ನುಂಟು ಮಾಡಿ, ದಾರಿ ತಪ್ಪಬಾರದು. ತಪ್ಪಿಸಬಾರದು. ಮಾನವನ ಕರ್ಮಗಳನ್ನು, ಚಟುವಟಿಕೆಗಳನ್ನು ನಾನೊಂದು ರೀತಿಯಲ್ಲಿ, ಅವನು ಕೆಳಗಿನ ಹಂತದಿಂದ ಮೇಲಿನ ಹಂತಕ್ಕೆ ಏರುತ್ತ ಹೋಗುವ ಪ್ರಗತಿಯ ದಾರಿಯನ್ನು ನಿರ್ಧಾರ ಮಾಡಿದ್ದೇನೆ; ಅನಾತ್ಮದಿಂದ ಆತ್ಮ, ಅದೈವೀ ಸಂಗತಿಗಳಿಂದ ದೈವೀ ಸಂಗತಿಗಳೆಡೆ ಹೋಗುವ ಮಾರ್ಗವನ್ನು ನಿರ್ಧಾರ ಮಾಡಿದ್ದೇನೆ. ಕಟ್ಟಿದ್ದೇನೆ. ಮಾನವನ ಎಲ್ಲ ಕರ್ಮಗಳು ನಿಜವಾಗಿ ದೈವ ಸಾಕ್ಷಾತ್ಕಾರ ಮಾಡಿಕೊಂಡವನ ದಾರಿಯಲ್ಲೇ ಸಾಗಬೇಕು. ಎಲ್ಲ ವೈಯಕ್ತಿಕತೆ, ಸಾಮಾಜಿಕ ಕಾರ್ಯ, ಬುದ್ಧಿಯ ಎಲ್ಲ ಕಾರ್ಯಗಳು ಹೃದಯ ಹಾಗೂ ಶಾರೀರಿಕ ಕರ್ಮಗಳು ಈಗಲೂ ಸಹ ಅವನವೇ, ಅವನೇ ಮಾಡುತ್ತಾನೆ. ಆದರೆ ಅವಾವೂ ಅವನ ವೈಯಕ್ತಿಕ ಸ್ವಾರ್ಥಕ್ಕಾಗಿ ಅಲ್ಲ. ಎಲ್ಲವೂ ಈಶ್ವರನಿಗಾಗಿ, ಪರಮಾತ್ಮನಿಗಾಗಿ, ವಿಶ್ವದಲ್ಲಿ, ವಿಶ್ವದ ಸಕಲ ಜೀವರಾಶಿಗಳಲ್ಲಿ ವಾಸಿಸುವ ಭಗವಂತನಿಗಾಗಿ ವಿಶ್ವದ ಸಕಲ ಜೀವರಾಶಿಗಳೂ ಸಹ ಭಗವಂತನು ಮುನ್ನಡೆದಂತೆ ಅವನ ಜೊತೆ ಮುಂದುವರಿಯಲೇಬೇಕು. ಕರ್ಮ ಯೋಗದ ಮೂಲಕ ಎಲ್ಲರೂ ತಮ್ಮಂತರಂಗದಲ್ಲಿರುವ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವತ್ತ ಪ್ರವೃತ್ತರಾಗಬೇಕು. ಮೇಲ್ನೋಟಕ್ಕೇನೊ ಅವನ ಕರ್ಮಗಳಲ್ಲಿ ಮತ್ತು ಇತರೆ ಸಾಮಾನ್ಯ ಜನರ ಕೆಲಸ ಕಾರ್ಯಗಳಲ್ಲಿ ವಿಶೇಷ ಭೇದ ಕಂಡುಬರಲಿಕ್ಕಿಲ್ಲ; ಯುದ್ಧ, ರಾಜ್ಯ, ಆಡಳಿತ, ನಿಯಮನ, ಬೋಧನೆ, ವಿಚಾರ ಪ್ರವೃತ್ತಿ, ಮಾನವನ ಉಳಿದೆಲ್ಲ ಸಾಮಾನ್ಯ ವ್ಯವಹಾರಿಕ ಕಾರ್ಯಗಳು ಎಲ್ಲವೂ ಭಿನ್ನ ಅನಿಸಲಿಕ್ಕಿಲ್ಲ ಸಾಮಾನ್ಯವೇ ಅನಿಸಬಹುದು. ಆದರೆ ಯಾವ ಪ್ರೇರಣೆಯಿಂದ, ಯಾವ ಸತ್ಯದ ಮೂಲಕ ಅವನು ಹಾಗೆ ಪ್ರವರ್ತಿಸುತ್ತಿದ್ದಾನೆ ಎಂಬುದು ಮುಖ್ಯವಾಗುತ್ತದೆ ಮತ್ತು ತೀರಾ ಭಿನ್ನವಾಗಿರುತ್ತದೆ. ನಿಜವಾಗಿ ಆಂತರಿಕ ಸತ್ವವೇ ಅಸಂಖ್ಯಾತ ಜನರ ಮೇಲೆ ಪ್ರಭಾವ ಬೀರಿ ಅವನೆಡೆಗೆ ಆಕರ್ಷಿತರನ್ನಾಗಿಸುತ್ತದೆ, ಅವನ ದಾರಿಯಲ್ಲಿ ನಡೆಯಲು ಸ್ಫೂರ್ತಿ ತುಂಬುತ್ತದೆ. ಅದೊಂದು ಅದ್ಭುತ ಸನ್ನೆಗೋಲು ಇದ್ದ ಹಾಗೆ; ಅಗಣಿತ ಜನ ಸಮೂಹವನ್ನೇ ಹಿರಿದಾದ ಎತ್ತರಕ್ಕೆ ಸುಲಭವಾಗಿ ಎತ್ತರಿಸಬಲ್ಲ ಸಾಮರ್ಥ್ಯ ಅದರಲ್ಲಿದೆ.

ಭಗವಂತನು ಇಲ್ಲಿ ತನ್ನದೇ ಜೀವಂತ ಉದಾಹರಣೆ ಕೊಡುವ ರೀತಿ ತುಂಬ ವಿಶಿಷ್ಟವಾಗಿದೆ. ಮುಕ್ತನಾದ ಮಾನವನು ಹೇಗಿರುತ್ತಾನೆ ಎಂಬುದನ್ನು ತನ್ನ ಮೂಲಕ ಕೃಷ್ಣ ತೋರಿಸುವ ರೀತಿ ಅನನ್ಯವಾಗಿದೆ ಮತ್ತು ಅದು ನಿಜವಾಗಿ ಇಡೀ ಗೀತೆಯು ಹೇಳುವ ದಿವ್ಯ ಕರ್ಮಗಳ ಆಧಾರ ತತ್ವನ್ನು ಸ್ಪಷ್ಟವಾಗಿ ತೋರಿಸಿಕೊಡುವಂತಿದೆ. ಮುಕ್ತನಾದ ಮಾನವನು ಭಗವಂತನಲ್ಲಿಯೇ ಸಂಪೂರ್ಣವಾಗಿ ಮುಳುಗಿ ಹೋಗಿದ್ದಾನೆ. ದೈವೀ ಸ್ವಭಾವವೇ ಅವನಲ್ಲಿ ಇಳಿದು ಬಂದಿದೆ. ಅಂತೆಯೇ ಅವನ ಕಾರ್ಯಗಳೂ ಸಹ ದೈವೀ ಸ್ವಭಾವಕ್ಕೆ ಅನುಗುಣವಾಗಿಯೇ ಇರಬೇಕು ಮತ್ತು ಇರುತ್ತವೆ. ದೈವೀ ಪ್ರಕೃತಿ ಅಥವಾ ದೈವೀ ಸ್ವಭಾವ ಅಂದರೇನು? ಅದನ್ನು ಸಂಪೂರ್ಣವಾಗಿ ಅಕ್ಷರ ಪುರುಷನ, ನಿಷ್ಕ್ರಿಯ, ನಿಶ್ಚಲ, ನಿರ್ವ್ಯೆಯಕ್ತಿಕ ಪುರುಷನ ಪ್ರಕೃತಿ ಎಂದು ಅರ್ಥೈಸಬಾರದು. ಏಕೆಂದರೆ ಅದು ಮುಕ್ತಾತ್ಮನನ್ನು ನಿಷ್ಕ್ರಿಯತೆಗೆ, ಅಕರ್ಮ ಸ್ಥಿತಿಗೆ ಒಯ್ಯುತ್ತದೆ. ಹಾಗೆಂದು ಅದು ಪೂರ್ಣಕ್ಷರ ಪುರುಷನ ಅಂದರೆ ವ್ಯಕ್ತಿಗತ ಅಥವಾ ಪ್ರಕೃತಿಗಧೀನನಾದ ಪುರುಷನ ಪ್ರಕೃತಿಯೂ ಅಲ್ಲ. ಏಕೆಂದರೆ ಅದು ಅವನನ್ನು ಪುನಃ ಅವನ ವ್ಯಕ್ತಿತ್ವಕ್ಕೆ, ವೈಯಕ್ತಿಕತೆಗೆ, ನಿಮ್ನ ಪ್ರಕೃತಿಯ ಅಧೀನಕ್ಕೆ ಒಯ್ಯುತ್ತದೆ. ಪುರುಷೋತ್ತಮನಲ್ಲಿ ಮಾತ್ರ ಇವರೆಡನ್ನೂ ಸರಿಯಾಗಿ ಸಮತೂಗಿಸಬಲ್ಲ ಕ್ಷಮತೆ ಇದೆ. ಅವನು ಪರಾದೈವತ್ವವು ಎಲ್ಲವನ್ನೂ ಸಮನ್ವಯಗೊಳಿಸಿ ಪುರುಷನ ಅಸ್ಮಿತೆಯ ಪರಮ ರಹಸ್ಯವನ್ನು ಅನಾವರಣಗೊಳಿಸುವ ಕ್ಷಮತೆ ಇದೆ. ರಹಸ್ಯಂ ಹ್ಯೇತದನುತ್ತಮಮ್. ಅವನನ್ನು ಕರ್ತೃ ಎಂದು, ಕೆಲಸಗಳನ್ನು ಮಾಡುವ ಕರ್ತಾರ ಎಂದು ತಿಳಿಯಲಾಗದು. ಅವನು ಪ್ರಕೃತಿಗಧೀನನಾಗಿ ಯಾವ ಕರ್ಮಗಳನ್ನು ಮಾಡುವುದಿಲ್ಲ ಭಗವಂತನೇ ಅವನೊಳಗೆ ನಿಂತು ಎಲ್ಲಾ ಕರ್ಮಗಳನ್ನು ನೆರವೇರಿಸುತ್ತಿರುತ್ತಾನೆ. ಅವನ ಶಕ್ತಿ, ಪ್ರಜ್ಞೆ, ಚೈತನ್ಯ ಎಲ್ಲದರ ಮೂಲಕ ಪರಮಾತ್ಮನೇ ಕಾರ್ಯ ಮಾಡುತ್ತಿರುತ್ತಾನೆ. ಆದರೆ ಅವನು ಎಲ್ಲ ಕರ್ಮಗಳಿಂದ ಮೇಲೆ ನಿಂತಿರುತ್ತಾನೆ. ಅವನು ಯಾವ ಕರ್ಮಗಳಿಗೂ ಬದ್ಧನಾಗಿರುವುದಿಲ್ಲ; ಹಾಗೆಂದು ಪ್ರಕೃತಿಯ ಕರ್ಮಗಳಿಗೆ ಅಭ್ಯಸ್ಥನಾಗಿದ್ದಾನೆ. ಅಭ್ಯಾಸ ಬಲದಿಂದ ಹಾಗೆ ಮಾಡುತ್ತಾನೆ ಅಂತಲೂ ಅರ್ಥವಲ್ಲ. ಅವನು ಈ ಎಲ್ಲ ವಿಕಲ್ಪಗಳಿಂದ ದೂರಾಗಿದ್ದಾನೆ. ಅವನು ಕೆಲಸ ಮಾಡುತ್ತನಾದರೂ, ಮಾಡಿಯೂ ಮಾಡದವನ ಹಾಗೆಯೇ ಇದ್ದಾನೆ. ಕರ್ತಾರಂ ಅಕರ್ತಾರಮ್. ಕೃಷ್ಣ ಸ್ಪಷ್ಟವಾಗಿ ಹೇಳುತ್ತಾನೆ; ಈ ಚತುರ್ವರ್ಣಗಳನ್ನು ನಿರ್ಮಾಣ ಮಾಡಿದವನು ನಾನೇ, ಅವುಗಳ ಮೂಲಕ ಕರ್ಮ ಮಾಡುವವನು

ಕೂಡ ನಾನೇ. ಆದರೆ ನಾನು ಅವಿನಾಶಿ, ನಾನು ಯಾವ ಕರ್ಮಗಳನ್ನೂ ಸ್ವತಃ ಮಾಡುವುದಿಲ್ಲ. ಯಾವ ಕರ್ಮಗಳೂ ನನಗೆ ಅಂಟಿಕೊಳ್ಳುವುದಿಲ್ಲ. ನ ಲಿಂಪತಿ, ನಾನು ಕರ್ಮ ಮಾಡುವುದಿಲ್ಲ. ಕರ್ಮ ಫಲದ ಬಯಕೆ ಕೂಡ ನನ್ನಲ್ಲಿಲ್ಲ? ಆದರೆ ಹಾಗೆಂದು, ಅವನು ನಿಷ್ಕ್ರಿಯ, ತಟಸ್ಥ, ಉದಾಸೀನ, ಸಾಕ್ಷಿಯೂ ಅಲ್ಲ, ಅವನೇ ಎಲ್ಲ ಕರ್ಮಗಳನ್ನು ಎಲ್ಲಾ ಹಂತಗಳಲ್ಲೂ ಮಾಡುತ್ತಾನೆ. ತನ್ನ ಶಕ್ತಿಯ ಮೂಲಕವೇ ಮಾಡುತ್ತಾನೆ. ಪ್ರತಿಯೊಂದು ಚಲನೆ, ಜಗದ ಪ್ರತಿಯೊಂದು ಕಣದಲ್ಲೂ ಆ ಪರಮಾತ್ಮನ ಸಾನಿಧ್ಯ ಇದೆ. ಅವನಿದ್ದಾನೆ, ಅವನ ಸಂಪೂರ್ಣ ಪ್ರಜ್ಞೆ ಕಣ ಕಣದಲ್ಲೂ ಅವಿಭಾಜ್ಯವಾಗಿ ಇದೆ. ಅದೆಲ್ಲವೂ ಅವನ ಸಂಕಲ್ಪದಂತೆ ವರ್ತಿಸುತ್ತದೆ, ಅವನ ಜ್ಞಾನದ ಮೂಲಕ ಸಂರಚಿತವಾಗಿದೆ, ರೂಪಗೊಂಡಿದೆ.

ಅವನು ಪರಮ ಪುರುಷೋತ್ತಮನು, ಅವನಿಗೆ ಯಾವ ಗುಣಗಳೂ ಇಲ್ಲ. ಅವನು ನಿರ್ಗುಣನು, ಆದರೆ ಎಲ್ಲ ಗುಣಗಳು ಇರುವುದೂ ಅವನಲ್ಲಿಯೇ. ಅವನು ಗುಣಗಳ ಬೀಜ ಸ್ವರೂಪ–ನಿರ್ಗುಣೋಗುಣೀ, ಅವನು ಪ್ರಕೃತಿ ಬದ್ಧನಲ್ಲ. ಕರ್ಮ ಬದ್ಧನಲ್ಲ. ನಮ್ಮ ವ್ಯಕ್ತಿತ್ವದಂತೆ ಅವನು ಮಾತ್ರ ಯಾವ ಗುಣಗಳನ್ನು ಹೊಂದಿಲ್ಲ. ಗುಣಗಳ ಮೊತ್ತವೂ ಅವನೇ ಎಂದೂ ಹೇಳಲು ಬರುವುದಿಲ್ಲ. ಮಾನಸಿಕ ನೈತಿಕ ಭಾವನಾತ್ಮಕ, ಪ್ರಾಣಿಕ, ಭೌತಿಕ ಹೀಗೆ ಯಾವ ವಿಶಿಷ್ಟ ಪ್ರವೃತ್ತಿಗಳೂ ಅವನಲ್ಲಿ ಇಲ್ಲ. ತನ್ನ ಸ್ವ–ಇಚ್ಛೆಯಿಂದ ಏನನ್ನು ಬೇಕಾದರೂ ಆತ ಪಡೆಯಬಹುದು, ಸಾಧಿಸಬಹುದು. ಅವನ ಸಂಕಲ್ಪವೇ ಸಿದ್ಧಿ. ಅವನು ಅನಂತ ಸತ್ತೆ. ಉಳಿದೆಲ್ಲ ಗುಣಗಳು, ವ್ಯಕ್ತಿತ್ವ, ಪ್ರವೃತ್ತಿ, ಅಭಿವ್ಯಕ್ತಿ ಎಲ್ಲವೂ ಅವನ ಸಂಭೂತಿಗಳು. ಅವನು ಅಪಾರತೆಯನ್ನು ನಿಸ್ಸೀಮತೆಯನ್ನು ಯಾವ ಮಾನಕಗಳೂ, ಅಳತೆಗಳೂ ಶ್ರುತಪಡಿಸಲಾರವು. ಆಕಾರಗಳು, ಸಂಖ್ಯೆಗಳು ಇವೆಲ್ಲವೂ ನಮ್ಮ ಪ್ರಕಟ ವಿಶ್ವದ ಗಣಿತೀಯ ಮಾನದಂಡಗಳು. ಅವನಿಗೆ ಇವು ಯಾವುವೂ ಅನ್ವಯಿಸುವುದಿಲ್ಲ. ಹಾಗೆಂದು ಅವನು ನಿರ್ಗುಣ, ನಿರಾಕಾರ, ನಿರ್ವ್ಯಕ್ತಿಕ ಅವ್ಯಾಕೃತ ತತ್ವವೇ? ಅಂದರೆ, ಅಲ್ಲ, ಅವನು ಕೇವಲ ಪ್ರಜ್ಞಾಯುಕ್ತ ಅಸ್ತಿತ್ವವಾಗಿದ್ದು ಎಲ್ಲ ಉಪಾಧಿಗಳು, ಆಕಾರಗಳು, ವ್ಯಕ್ತಿತ್ವಗಳು, ನಿರ್ಧಾರಿತಗಳು ಎಲ್ಲವೂ ಅವನ ಮೂಲಕವೇ ಅಸ್ತಿತ್ವಕ್ಕೆ ಬರುತ್ತವೆ. ಅವನು ಸರ್ವಮೂಲ, ಪ್ರಜ್ಞಾಯುಕ್ತ, ಸ್ವಯಂಭೂ, ಅಸ್ತಿತ್ವ ಅಥವಾ ಸತ್ತೆ, ಪರಿಪೂರ್ಣ ವ್ಯಕ್ತಿತ್ವವುಳ್ಳ ಪುರುಷ, ಎಲ್ಲ ರೀತಿಯ ಸಂಬಂಧಗಳು, ಮಾನವೀಯ ಸಂಬಂಧಗಳೂ ಸಹ ಅವನಲ್ಲಿ ಸ್ಥಾಪಿತವಾಗಿರುತ್ತವೆ. ಏಕೆಂದರೆ ಅವನು ಪ್ರಿಯಮಿತ್ರನು, ಸಂಗಾತಿಯು, ಪ್ರೇಮಿಯು, ಪ್ರಿಯಕರನು, ಸಹ ಕ್ರೀಡಾಪಟು,

ಮಾರ್ಗದರ್ಶಕ, ಶಿಕ್ಷಕ, ಬೋಧಕ, ಒಡೆಯ, ಯಜಮಾನ, ಜ್ಞಾನ ಪ್ರದಾತೃ, ಆನಂದ ಪ್ರದಾಯಕನೂ ಹೌದು; ಅವನಿಗೆ ಎಲ್ಲ ಸಂಬಂಧಗಳೂ, ತೀರ ಆಪ್ತ, ಮಾನವೀಯ ಸಂಬಂಧಗಳೂ ಸಹ ಅನ್ವಯಿಸುತ್ತವೆ. ದಿವ್ಯತ್ವವನ್ನು ಪಡೆದ ಮಾನವನೂ ಸಹ ಇವೆಲ್ಲ ಗುಣ ಧರ್ಮಗಳನ್ನು ಪಡೆಯುತ್ತಾನೆ. ಅವನು ಓರ್ವ ವ್ಯಕ್ತಿಯಾಗಿ ಕಂಡರೂ ನಿರ್ವ್ಯಕ್ತಿಕನಾಗಿರುತ್ತಾನೆ. ಅವನಿಗೆ ಯಾವ ಗುಣಗಳೂ, ಧರ್ಮಗಳೂ, ಸಂಬಂಧಗಳೂ ಇಲ್ಲವಾದರೂ ಅವನು ಇವೆಲ್ಲವನ್ನೂ ಸಂಭಾಳಿಸುತ್ತಾನೆ. ಅವನು ವಾಸ್ತವವಾಗಿ ಯಾವ ಧರ್ಮ(ಮತ)ಕ್ಕೂ ಸಂಬಂಧ–ಪಟ್ಟವನಲ್ಲವಾದರೂ ಎಲ್ಲ ಧರ್ಮಗಳನ್ನು ಪಾಲಿಸುತ್ತಿರುವವನಂತೆ ಕಾಣುತ್ತಾನೆ. ಕ್ರಿಯಾಶೀಲನಾದ ವ್ಯಕ್ತಿಯ ಶಕ್ತಿಯುತ ಕಾರ್ಯಗಳೇ ಆಗಲಿ, ಸನ್ಯಾಸಿಯ ನಿಷ್ಕ್ರಿಯ (ಜ್ಞಾನದ) ಬಳಕೇ ಆಗಲಿ ಅಥವಾ ಕರ್ಮ ಯೋಗಿಯ ಪ್ರಬಲ ಹಾಗೂ ಉತ್ಸಾಹಪೂರಿತ ವ್ಯಕ್ತಿತ್ವವೇ ಆಗಲಿ, ಅಷ್ಟೇ ಏಕೆ, ತತ್ವ ಜ್ಞಾನಿಯ ನಿರಾಸಕ್ತ ಅಥವಾ ತಟಸ್ಥ ನಿರ್ವಿಕಾರ ವ್ಯಕ್ತಿತ್ವವೇ ಆಗಲಿ ಯಾವುದೂ ಪರಿಪೂರ್ಣ ದೈವೀ ಆದರ್ಶವಲ್ಲ. ಈ ಪ್ರಪಂಚದಲ್ಲಿ ಎರಡು ರೀತಿಯ ಅಥವಾ ಮಾದರಿಯ ವ್ಯಕ್ತಿತ್ವಗಳು ನಮ್ಮ ಕಣ್ಮುಂದೆ ಇವೆ – ಮೌನ, ಶಾಂತ, ನಿರ್ಮೋಹಿ ತತ್ವ ಚಿಂತಕ ಅಥವಾ ಸನ್ಯಾಸಿ ಇನ್ನೊಂದು ಕರ್ಮರತನಾಗಿರುವ ಮಾನವ ಮೊದಲಿನವನು ಅಕ್ಷರ ಪುರುಷನ ಶಾಂತಿಯಲ್ಲಿ ನೆಲೆಸಲು ಬಯಸುತ್ತಿದ್ದರೆ ಎರಡನೆಯವನು ಶರ ಪುರುಷನ ನೆಲೆಯಲ್ಲಿ ವಿವಿಧ ಕರ್ಮಗಳಲ್ಲಿ ನಿರತನಾಗಿದ್ದಾನೆ. ಆದರೆ ಪರಿಪೂರ್ಣವಾದ ದೈವೀ ಆದರ್ಶವು ಪುರುಷೋತ್ತಮನಾಗಿದ್ದು, ಎಲ್ಲ ಹೋರಾಟ, ದ್ವಂದ್ವಗಳನ್ನು ಮೀರಿ ನಿಲ್ಲುತ್ತದೆ ಹಾಗೂ ಎಲ್ಲ ತರಹದ ದ್ವೈವೀ ಗುಣಗಳನ್ನು ಹೊಂದಿರುತ್ತದೆ.

ಕ್ರಿಯಾಶೀಲನಾದ ವ್ಯಕ್ತಿಯು ತನ್ನ ವಿಶ್ವಾತ್ಮಕವಾದ, ವಿಶ್ವತೋಮುಖವಾದ ಸ್ವಭಾವದ ಸಾರ್ಥಕತೆ ಕಾಣದ ವಿನಃ ಯಾವ ಅನ್ಯ ಆದರ್ಶಗಳಿಂದಲೂ ತೃಪ್ತನಾಗುವುದಿಲ್ಲ. ವಿಶ್ವ ಪ್ರಕೃತಿಯು ಮೂರು ಗುಣಗಳಿಂದ ನಿರ್ಮಿತವಾದ ಆಡುಂಬೋಲವಾಗಿದೆ. ಇಲ್ಲಿ ತ್ರಿಗುಣಗಳ ಜೊತೆಗೆ ಮಾನವನ ಮನಃ ಹೃದಯ ಹಾಗೂ ಶರೀರಗಳೂ ಭಾಗಿಯಾಗಿವೆ. ಈ ಚಟುವಟಿಕೆ ಅಥವಾ ಕ್ರಿಯೆಯ ಪರಿಪೂರ್ಣ ಸಾರ್ಥಕತೆ ಅಂದರೆ, ಆ ಕ್ರಿಯಾಶೀಲ ವ್ಯಕ್ತಿಯ ಪ್ರಕಾರ, ಮಾನವನ ಸಮಗ್ರ ಪರಿಪೂರ್ಣತೆ, ಮಾನವನಲ್ಲಿ ದೈವೀ ಸಾಧ್ಯತೆಯ ಪ್ರಕಟನೆ ಆಗಿದೆ. ಕೆಲ ವಿಚಾರ ಅಥವಾ ಸಂಗತಿಗಳು ಬುದ್ಧಿಯನ್ನು ತೃಪ್ತಿ ಪಡಿಸಬಹುದು. ಕೆಲವು ಹೃದಯವನ್ನು, ಕೆಲವು ನೈತಿಕ ವ್ಯಕ್ತಿತ್ವವನ್ನು, ಕೆಲವೊಂದು ಮಾನವನ ಪ್ರಕೃತಿಯನ್ನು

ತೃಪ್ತಿ ಪಡಿಸಲೂ ಬಹುದು. ತನ್ನ ಮನ ಪ್ರಾಣ ಶರೀರಗಳಲ್ಲಿ ಅಂಥ ಯಾವುದಾದರೊಂದು ಅಂಶವಿದ್ದಿರಲೇ ಬೇಕೆಂಬುದನ್ನು ಅವನು ಕಂಡುಕೊಳ್ಳುತ್ತಾನೆ. ಏಕೆಂದರೆ ಅದೇ ಅವನ ಧರ್ಮವಾಗಿರುವುದು; ತನ್ನ ನಿಜ ಧರ್ಮವನ್ನು ಬಿಟ್ಟು ಇನ್ನೇತರಿಂದ ಆತ ಕೃತಕೃತ್ಯತೆಯನ್ನು ಅನುಭವಿಸಲು ಸಾಧ್ಯ? ಅವನ ಪ್ರಕೃತಿಯಂತೆ, ಪ್ರತಿಯೊಂದು ಜೀವಿಗೂ ದೇಶಕಾಲ ಬದ್ಧವೇ. ಮತ್ತು ಮಾನವನು ಅದರ ಪರಿಧಿಯ ಮಿತಿಯೊಳಗೇ ಪರಿಪೂರ್ಣತೆ ಪಡೆಯಲು ಶ್ರಮಿಸಬೇಕು. ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ಧರ್ಮದ ಮೂಲಕವೇ ಯಶಸ್ಸು ಪಡೆಯಲು ಪ್ರಯತ್ನಿಸಬೇಕು. ನಮ್ಮ ಮಾನವನ ಸ್ವಭಾವ (ಅಥವಾ ಪ್ರಕೃತಿ) ಹೇಗಿದೆಯೋ ಅದಕ್ಕನುಗುಣವಾಗಿಯೇ ನಮ್ಮ ಪರಿಪೂರ್ಣತೆ ಇರಬೇಕು. ಆದ್ದರಿಂದ ಪ್ರತಿಯೊಬ್ಬನು ತನ್ನ ತನ್ನ ವ್ಯಕ್ತಿತ್ವಕ್ಕೆ ತಕ್ಕಂತೆಯೇ ಬೆಳೆಯಲು ಪ್ರಯತ್ನ ಪಡಬೇಕು. ಸ್ವಧರ್ಮವೇ ಶ್ರೇಯಸ್ಕರವಾದುದು. ಜೀವನ, ಬದುಕು, ಕರ್ಮ ಎಲ್ಲದರಲ್ಲೂ ಅವನು ಸ್ವಧರ್ಮವನ್ನು ಪಾಲಿಸಬೇಕು. ಆ ಮೂಲಕ ಬೆಳೆಯಬೇಕು. ಗೀತೆ ಹೇಳುವಂತೆ, ಈ ಮಾತಲ್ಲಿ ಸತ್ಯವಿದೆ. ಮಾನವನಲ್ಲಿ ದೈವತ್ವದ ಅಭಿವ್ಯಕ್ತಿ ಅಥವಾ ಸಾಕಾರಗೊಳ್ಳುವಿಕೆ, ಭಗವಂತನ ಲೀಲೆ ಇವೇ ವ್ಯಕ್ತಿಯ ನಿಜವಾದ ಪರಿಪೂರ್ಣತೆ, ಆದರೆ ನೀವದನ್ನು ಬಾಹ್ಯದಲ್ಲಿ ಹುಡುಕಿದರೆ, ಬದುಕಿನಲ್ಲಿ ಕರ್ಮಗಳ ತತ್ವದಲ್ಲಿ ಮಾತ್ರ ಹುಡುಕಿದರೆ ಅದು ಎಂದಿಗೂ ಸಿಕ್ಕುವುದಿಲ್ಲ. ಏಕೆಂದರೆ ನೀವಾಗ ನಿಮ್ಮ ಸ್ವಭಾವ ಧರ್ಮಕ್ಕನುಗುಣ ಕಾರ್ಯ ಮಾಡುತ್ತಿರುವುದಿಲ್ಲ. ಬದಲಾಗಿ ನೀವದರ ಬೇರೆ ಅವಸ್ಥೆಗಳಲ್ಲಿ, ದ್ವಂದ್ವಗಳಲ್ಲಿ, ಇಷ್ಟಾನಿಷ್ಟಗಳಲ್ಲಿ, ಸುಖ ದುಃಖಗಳಲ್ಲಿ, ವಿಶೇಷವಾಗಿ ನಿಮ್ಮ ಜೀವನದ ರಾಜಸಿಕ ಅಂಶದಲ್ಲಿ – ಅದರ ಪ್ರಮುಖ ಗುಣವಾದ ಬಯಕೆ, ಕ್ರೋಧ, ದುಃಖ, ಹಂಬಲ ಇವುಗಳ ಬಲೆಯಲ್ಲಿ ಸಿಲುಕಿಕೊಂಡಿ ಕರ್ಮ ಮಾಡುವಿರಿ. ನೀವು ತಳಮಳದಲ್ಲಿ ಸಿಲುಕುವಿರಿ, ಎಲ್ಲವನ್ನು ನಾಶಮಾಡುವ ಬಯಕೆ, ಕಾಮನೆಗಳ ಬಲೆಯಲ್ಲಿ ಸಿಲುಕುವಿರಿ, ಹೊಗೆಯಿಂದ ಹೊಗೆ ಮುಸುಗಿರುವಂತೆ, ಕನ್ನಡಿಯನ್ನು ಧೂಳು ಮಸುಳಿಸಿರುವಂತೆ ಕಾಮನೆಗಳು, ಬಯಕೆಯು ಜ್ಞಾನವನ್ನು ಮುಸುಗಿಸುವೆ. ಕಾಮನೆಗಳನ್ನು ನಾಶ ಮಾಡಲೇಬೇಕು. ಅಂದರೆ ಮಾತ್ರ ಶಾಂತಿಯಲ್ಲಿ, ಸ್ಪಷ್ಟವಾದ ಪ್ರಕಾಶಮಾನವಾದ ಸತ್ಯದ ಆತ್ಮದಲ್ಲಿ ನಿಲ್ಲಲು ಸಾಧ್ಯವಾಗುವುದು. ಇಂದ್ರಿಯಗಳು, ಮನಸ್ಸು, ಬುದ್ಧಿ ಇವೆಲ್ಲ ಪರಿಪೂರ್ಣತೆಯ ಶಾಶ್ವತ ತಾಣಗಳಿದ್ದಂತೆ. ಆದರೆ ಈ ಇಂದ್ರಿಯಾ ಮನಸ್ಸು ಬುದ್ಧಿ ಇವುಗಳ ಮಿತಿಯಲ್ಲಿಯೇ ನೀವು ಪರಿಪೂರ್ಣತೆಗಾಗಿ ಹುಡುಕುವಿರಿ, ಅಂಥ

ಪ್ರಯತ್ನ ನಿರರ್ಥಕ. ಕ್ರಿಯಾಶೀಲತೆಯ ನಿಮ್ಮ ವ್ಯಕ್ತಿತ್ವದ ಭಾಗಕ್ಕೆ ಶಾಂತತೆಯ, ಸ್ಥಿರತೆಯ ಅಂಶವನ್ನು ಬೆಸೆಯಬೇಕು. ನಿಮ್ಮ ನಿಮ್ನ ಪ್ರಕೃತಿಯನ್ನು ಉನ್ನತೀಕರಿಸಬೇಕು. ತ್ರಿಗುಣಗಳನ್ನು ಮೀರಿ ಆಚೆಗೆ ಅದು ಬೆಳೆಯಬೇಕು. ಎಲ್ಲವನ್ನೂ ಮೀರಿದ ಆತ್ಮದ ಸ್ತರದಲ್ಲಿ ಏರಿ ನಿಲ್ಲಬೇಕು. ನಿಮ್ಮಲ್ಲಿ ಈ ಆತ್ಮ ಶಾಂತಿಯು ಸ್ಥಾಪನೆಗೊಂಡಿತೆಂದರೆ ಆಗ ಮಾತ್ರ ನೀವು ಸ್ವತಂತ್ರ ಹಾಗೂ ದೈವೀ ಕಾರ್ಯ ಮಾಡಲು ಸಮರ್ಥರಾಗುವಿರಿ.

ಇದಕ್ಕೆ ವಿರುದ್ಧವಾಗಿ ಮೌನಿಯಾಗಿರುವವನು, ಶಾಂತವಾಗಿರುವವನು, ಸನ್ಯಾಸಿಯು ಇಂಥ ಪರಿಪೂರ್ಣತೆಯನ್ನು ಪಡೆಯುವುದು ಸಾಧ್ಯವಿಲ್ಲ; ಏಕೆಂದರೆ ಅಲ್ಲಿ ಜೀವನ, ಕರ್ಮ ಪ್ರವೇಶವಾಗುವುದೇ ಇಲ್ಲ. ಈ ಜೀವನ, ಕರ್ಮ ಇವೆಲ್ಲ ಅಪರಿಪೂರ್ಣತೆಯ, ಬಂಧನದ ಸಾಧನಗಳಲ್ಲವೇ? ಎಲ್ಲ ಕರ್ಮಗಳೂ ವಾಸ್ತವಿಕವಾಗಿ ಅಪರಿಪೂರ್ಣವೇ, ಮೂಲತಃ ಅಪಕ್ವವೇ; ಬೆಂಕಿಯ ಜೊತೆ ಹೊಗೆ ಕಾಣಿಸಿಕೊಳ್ಳುವಂತೆ ಕರ್ಮದ ಸ್ವಭಾವವೇ ರಾಜಸಿಕವಾಗಿದೆ. ರಾಜಸಿಕವೆನ್ನುವುದು ಆಶೆಗಳ ಜನಕ ಇದ್ದ ಹಾಗೆ, ತತ್‌ಫಲವಾಗಿ ಜ್ಞಾನವು ಕುಂಠಿತವಾಗುವುದು ಖಂಡಿತ, ರಾಹುಗ್ರಸ್ತವಾಗುವುದು ಖಂಡಿತ; ಆಶೆ ಪದೇ ಪದೇ ಹುಟ್ಟುವುದು, ಕೆಲಸಲ ಗೆಲುವು, ಕೆಲಸಲ ಸೋಲು ಇದೇ ಆಶೆಯ ಪರಿಭ್ರಮಣ ಚಕ್ರ; ಕೆಲಸಲ ಸುಖ, ಕೆಲಸಲ ದುಃಖಗಳ ಓಲಾಟ, ಹೊಯ್ದಾಟ, ಪಾಪ–ಪುಣ್ಯ ಇವುಗಳ ದ್ವಂದ್ವ: ಇದೆಲ್ಲ ಸಹಜ, ಇದ್ದದ್ದೇ. ಈಶ್ವರನು ಜಗತ್ತಿನಲ್ಲಿ ಇರುಬಹುದು. ಆದರೆ ಅವನೇ ಜಗತ್ತಲ್ಲವಲ್ಲ. ಅವನು ತ್ಯಾಗವನ್ನು ಬಯಸುತ್ತಾನೆ. ಅವನು ನಮ್ಮ ಕರ್ಮಗಳ ಪ್ರಭುವೂ ಅಲ್ಲ, ಕಾರಣನೂ ಅಲ್ಲ. ನಮ್ಮ ಕರ್ಮಗಳ ಪ್ರಭು ಅಂದರೆ ನಮ್ಮ ಆಶೆ, ಹಾಗೂ ಕರ್ಮಗಳ ಕಾರಣವೆಂದರೆ ನಮ್ಮ ಅಜ್ಞಾನ. ಈ ಜಗತ್ತು ಅನ್ನುವುದು ನಿಜವಾಗಿಯೂ (ಕ್ಷರ) ಒಂದು ಲೀಲೆಯಾಗಿದೆ ಅನ್ನುವುದಾದರೆ, ಪ್ರಕೃತಿಯ ಅಜ್ಞಾನದ ಜೊತೆಗೆ ಆಡುವ ಅಪರಿಪೂರ್ಣ ಆಟವಿದ್ದಂತೆ ಎಂದು ಹೇಳಬೇಕಾಗುವುದು; ಅದು ಪ್ರಕಟನೆ ಅಥವಾ ಅಭಿವ್ಯಕ್ತಿ ಅನ್ನುವುದಕ್ಕಿಂತ ಭಗವಂತನ ವಿಲುಪ್ತಿ ಅಥವಾ ಅವನನ್ನು ಕಾಣದಂತೆ ಮಾಡುವ ಕ್ರಿಯೆ ಎಂದೇ ಹೇಳುವುದು ಯೋಗ್ಯವಾದೀತು. ಇದೇನೋ ನಮಗೆ ಮೇಲ್ನೋಟಕ್ಕೆ ಗೊತ್ತಾಗಿ ಬಿಡುತ್ತದೆ. ಒಮ್ಮೆ ನೋಡಿದರೆ ಸಾಕು ಇದೇ ಸತ್ಯ ಎಂದೇ ಅನಿಸಿಬಿಡುತ್ತದೆ. ಜಗತ್ತಿನ ಪೂರ್ಣ ಅನುಭವ ಆದ ಮೇಲೆ ಕೂಡ ನಮಗೆ ಹೀಗೆಯೇ ಅನಿಸುವುದು ತಾನೇ? ಅಜ್ಞಾನದ ಚಕ್ರವೇ ಆತ್ಮನನ್ನು ಜನನ ಮರಣಗಳಿಗೆ ಕಟ್ಟಿಹಾಕುವುದು; ಆಶೆ,

ಕಾಮನೆಯ ಪ್ರವೃತ್ತಿಯೇ ಮಾನವನ್ನು ಆಶೆ ಕರ್ಮಗಳಿಗೆ ಅಡಿಯಾಳಾಗಿ ಮಾಡುವುದು; ಆತ್ಮವು ಬೇಸತ್ತು ಕೊನೆಗೆ ಇವೆಲ್ಲವನ್ನು ಕಳಚಿ ಒಗೆಯುವವರೆಗೆ ಈ ಆಟವೇ ಮುಂದುವರಿಯುವುದು. ಕೇವಲ ಬಯಕೆ ಮಾತ್ರ ಅಲ್ಲ. ಕರ್ಮವನ್ನೂ ಸಹ ಮನುಷ್ಯ ಬಿಡಬೇಕಾಗುವುದು. ಸಂಪೂರ್ಣ ಮೌನದಲ್ಲಿ ನೆಲೆಸಿದ ಆತ್ಮವು ಮಾತ್ರ ನಿಶ್ಚಲ ನಿಷ್ಕ್ರಿಯ, ನಿಷ್ಕರ್ಮ, ಶಾಂತ, ಕೇವಲ ಬ್ರಹ್ಮನಲ್ಲಿ ಲೀನವಾಗುವುದು. ಇದೊಂದು ಆಕ್ಷೇಪಣೆ, ಇದಕ್ಕೆ ಉತ್ತರವಾಗಿ ಗೀತೆಯು ಬಹಳ ವಿವರವಾಗಿ ವರ್ಣನೆ ಮಡುತ್ತದೆ. ನಿರಾಕಾರ ಅಥವಾ ನಿರ್ಗುಣ ತತ್ವದ ಈ ಆಕ್ಷೇಪಣೆ ಸುಲಭವಾದದ್ದೇನಲ್ಲ. ಆದರೆ ಗೀತೆ ಹೇಳುತ್ತದೆ ಮತ್ತು ಇದು ಕೇವಲ ರಾಜಸಿಕ ವ್ಯಕ್ತಿಗಿಂತ ಹೆಚ್ಚಾಗಿ ಇಡೀ ಮಾನವ ಕುಲಕ್ಕೇ ಸಂಬಂಧಿಸಿದ ಉತ್ತರವಾಗಿದೆ. ಈ ಶಾಂತತೆ, ತಟಸ್ಥತೆ ಅನ್ನುವುದು ಉನ್ನತವಾದ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡ ಸ್ಥಿತಿಯಾಗಿದೆಯಾದರೂ ಅದೇನೂ ಪರಮೋಚ್ಚ ಸತ್ಯದ ಸಂಪೂರ್ಣ ಅವಸ್ಥೆಯಂತೂ ಅಲ್ಲ, ಹೀಗಿರುವಾಗ ಅದನ್ನೇ ವಿಶ್ವಾತ್ಮಕ ಸಂಪೂರ್ಣ, ಮಾನವನ ಜೀವನದ ಪರಮೋಚ್ಚ ಆದರ್ಶವೆಂದು ಸಾರುವುದು ಜನರಲ್ಲಿ ಗೊಂದಲ–ವನ್ನೆಬ್ಬಿಸುವುದು, ಮಾನವ ಕುಲವು ತನ್ನ ಗುರಿಯೆಡೆಗೆ ಸಾಗುವ ದಾರಿಯಲ್ಲಿ ಅಡಚಣಿಯಾಗುವುದು. ಅಪಾಯಕಾರಿಯಾಗುವುದು. ಕೇವಲ (ರಾಜಸಿಕ) ಕರ್ಮಗಳಿಗೆ ಅಂಟಿಕೊಂಡಿದ್ದರೆ ಜಗತ್ತಿಗೆ ಎಷ್ಟು ಹಾನಿಯಾಗಬಹುದೋ ಅದಕ್ಕಿಂತ ಹೆಚ್ಚಿನ ಹಾನಿ ಈ ಸನ್ಯಾಸತ್ವದಿಂದ ಆಗುತ್ತದೆ. ಪೂರ್ಣ ಸತ್ಯದ ಯಾವುದೋ ಒಂದು ಮುಖವನ್ನು ಹಿಡಿದು ಅದೇ ಪೂರ್ಣ ಸತ್ಯವೆಂದು ಪ್ರತಿಪಾದಿಸಿದರೆ (ಜ್ಞಾನದ) ಬೆಳಕೇನೋ ಬರಬಹುದು. ಆದರೆ ಅದರ ಜೊತೆ ಗೊಂದಲ, ಅನುಮಾನ, ಸಂದೇಹ ಕೂಡ ಬರುವುವು. ಏಕೆಂದರೆ ಸತ್ಯದ ಒಂದು ಅಂಶದ ಶಕ್ತಿಯು ಅದರ ಮಿಥ್ಯಾಗ್ರಹಿಕೆಯ ಅಥವಾ ತಪ್ಪರ್ಥೈಕೆಯ ಶಕ್ತಿಯನ್ನು (ಸಾಧ್ಯತೆಯನ್ನೂ) ಹೆಚ್ಚಿಸುವುದು. ರಾಜಸಿಕ ಅಥವಾ ಉತ್ಸಾಹ ಭರಿತ ಆದರ್ಶವು ಅಜ್ಞಾನವನ್ನು ಬೆಳೆಸಬಹುದು. ಮಾನವನ ಪ್ರಗತಿಯನ್ನು ಕುಂಠಿತಗೊಳಿಸಬಹುದು. ಪರಿಪೂರ್ಣತೆಯು ಗಗನ ಕುಸುಮವಾಗಿರುವಾಗ ಅದನ್ನು ಶೋಧಿಸುವ ಪ್ರಯತ್ನದಲ್ಲಿ ಹಿನ್ನಡೆ ಆಗಲೂ ಬಹುದು. ಅದರೆ ಸನ್ಯಾಸತ್ವದ ಆದರ್ಶವು ಜಗದ್ವಿನಾಶಕಾರಿಯ ಬೀಜವನ್ನು ತನ್ನೊಳಗೆ ಹುದುಗಿಸಿಕೊಂಡಿರುವುದು. ಕೃಷ್ಣ ಹೇಳುತ್ತಾನೆ: ನಾನೇ ಆ ವಿಷಯವಾಗಿ ಏನಾದರೂ ಮಾಡಬೇಕೆನ್ನುವುದಾದರೆ ನಾನು ಜನರನ್ನೇ ನಾಶ ಮಾಡಬೇಕಾಗುತ್ತದೆ, ಗೊಂದಲವನ್ನುಂಟು ಮಾಡಬೇಕಾಗುತ್ತದೆ. ಯಾರೊಬ್ಬ

ವ್ಯಕ್ತಿಯ ಅಪರಾಧವಾಗಲಿ, ದೈವೀ ಪುರುಷನ ತಪ್ಪಾಗಲಿ, ಇಡೀ ಮಾನವ ಕುಲವನ್ನು ನಾಶಮಾಡಲು ಸಾಧ್ಯವಿಲ್ಲ; ಬಹಳ ಹೆಚ್ಚೆಂದರೆ ಸಂದೇಹ, ಗೊಂದಲಗಳನ್ನು ಸೃಷ್ಟಿಸಬಹುದು. ಅದರಿಂದ ಮಾನವನ ಜೀವಿತದ ತತ್ವವೇ ಕೆಟ್ಟುಹೋಗುವುದು, ಗೊಂದಲದ ಸ್ವಭಾವವೇ ಅದು, ನಾಶ ಮಾಡುವುದೇ ಅದರ ಸ್ವಭಾವ. ಅದರಿಂದಾಗಿ ಪ್ರಗತಿಯ ದಾರಿಯಲ್ಲಿ ಕೂಡ ಅಡ್ಡಿ ಬರುವುದು.

ಆದ್ದರಿಂದ ಮಾನವನಲ್ಲಿರುವ ಕರ್ಮ ತ್ಯಾಗ ಹಾಗೂ ಧ್ಯಾನ ಪರಾಯಣ ಶಾಂತ ವೃತ್ತಿಗೆ ತನ್ನಲಿರುವ ಕೊರತೆಯ ಅರಿವಾಗುವಂತೆ ವ್ಯವಸ್ಥೆ ಮಾಡುವ ಅನಿವಾರ್ಯತೆ ಈಗ ಹೆಚ್ಚಾಗಿದೆ. ಕರ್ಮ ಪರಾಯಣ ವೃತ್ತಿಯ ಹಿಂದೆ ಒಂದು ಮಹತ್ತರವಾದ ಸತ್ಯ ಇದೆ. ಮಾನವನಲ್ಲಿ ಭಗವಂತನ ಪರಿಪೂರ್ತಿ ಮಾನವನರೆಲ್ಲರ ಎಲ್ಲ ವಿಧ ಕರ್ಮಗಳಲ್ಲಿ ಈಶ್ವರನ ಉಪಸ್ಥಿತಿ, ಈ ತರಹದ ಸತ್ಯಗಳು ಮಾನವನ ಕರ್ಮ ಪರಾಯಣ ವೃತ್ತಿಯಲ್ಲಿಯೇ ಇವೆ, ಈ ಸತ್ಯವು ಶಾಂತಿಮಯ ಅವಸ್ಥೆಯಲ್ಲಿ ಎಷ್ಟಿದೆಯೋ ಅಷ್ಟೇ ಮಹತ್ವದ ಸತ್ಯವು ಅದರ ಕೊರತೆಯನ್ನು ಮನದಟ್ಟುಮಾಡಿಕೊಡುವಲ್ಲಿ ಕೂಡ ಇದೆ. ಭಗವಂತನು ಶಾಂತಿಯಲ್ಲಿ ಇರುವಂತೆಯೇ ಕರ್ಮದಲ್ಲೂ ಇದ್ದಾನೆ. ಪ್ರಕೃತಿಯಿಂದ ಅಬಾಧ್ಯವಾಗಿರುವ ತಟಸ್ಥ ಆತ್ಮದ ಕರ್ಮ ತ್ಯಾಗ ಮತ್ತು ತದನು ಶಾಂತಿ ಹಾಗೂ ಕರ್ಮ ಪರಾಯಣ ಆತ್ಮವು ಪ್ರಕೃತಿಗೆ ಸಂಪೂರ್ಣ ಶರಣಾಗಿ ವಿಶ್ವವೆಂಬ ಮಹಾಯಜ್ಞ ಅಥವಾ ಪುರುಷ ಯಜ್ಞವನ್ನು ಸಾಂಗವಾಗಿ ನೆರವೇರಿಸಲು ಸಹಾಯ ಮಾಡುವುದು ಇವೆರಡೂ ಶಾಶ್ವತದ ದೃಷ್ಟಿಯಲ್ಲಿ ನಿತಾಂತ ಸತ್ಯವೂ ಅಲ್ಲ. ಅಸತ್ಯವೂ ಅಲ್ಲ. ಅವು ಪರಸ್ಪರ ವಿರುದ್ಧ ಸತ್ಯಗಳೂ ಅಲ್ಲ, ಅವುಗಳ ಪೈಕಿ ಒಂದು ಶ್ರೇಷ್ಠ, ಇನ್ನೊಂದು ಕನಿಷ್ಠವೆಂಬುದಿಲ್ಲ, ಅವು ಪರಸ್ಪರ ವಿನಾಶಕಾರಿ ಶಕ್ತಿಗಳಲ್ಲ. ಅವು ದೈವೀ ಪ್ರಕಟನೆಯ ಎರಡು ಅಭಿವ್ಯಕ್ತಿ ಅವಸ್ಥೆಗಳು ಮಾತ್ರ. ದೈವೀ ಸಾರ್ಥಕತೆಯಲ್ಲಿ ಅಕ್ಷರ (ಪುರುಷ) ಮಾತ್ರ ಏಕೈಕ ಬೀಗದ ಕೈ ಅಲ್ಲ. ಅದೇ ಅತ್ಯುನ್ನತ ರಹಸ್ಯವೂ ಅಲ್ಲ. ಈ ಎರಡೂ ಸ್ಥಿತಿ, ಅವಸ್ಥೆ ಅಥವಾ ಹಂತಗಳ ಪರಿಪೂರ್ಣ ಸಾರ್ಥಕತೆಯು ಪುರುಷೋತ್ತಮನ ಪರಿಕಲ್ಪನೆಯಲ್ಲಿ ಸಮ್ಮಿಳಿತವಾಗಿರುವುದು. ಗೀತೆಯ ಮಟ್ಟಿಗೆ ಕೃಷ್ಣನೇ ಆ ಪುರುಷೋತ್ತಮ. ವಿಶ್ವ ಪ್ರಭು, ವಿಶ್ವ ನಿಯಾಮಕ. ಅವನು ಪರಮೋಚ್ಚ ತತ್ವದ ಅವತಾರ. ದಿವ್ಯನಾಗಿ ಬದಲಾದ ದೇವ ಮಾನವನು ಮೊದಲು ಹೇಗೆ ಮಾಡುತ್ತಿದ್ದನೋ ಹಾಗೆ ಕರ್ಮ ಪರಾಯಣನಾಗಿ ಕರ್ಮ ಮಾಡುತ್ತಾನೆ. ಅವನು ಎಂದಿಗೂ ಕರ್ಮ ತ್ಯಾಗ ಮಾಡುವುದಿಲ್ಲ. ಮಾನವನು ಅಜ್ಞಾನದಲ್ಲಿ ಇರುವಾಗಲೂ

ಅವನ ಮೂಲಕ ಪರಮಾತ್ಮ ಕೆಲಸ ಮಾಡುತ್ತಾನೆ. ಅದೇ ರೀತಿ ಜ್ಞಾನದಲ್ಲೂ ಸಹ ಅವನು ಕೆಲಸ ಮಾಡುತ್ತಾನೆ. ಆ ಪರಮಾತ್ಮನನ್ನು ಅರಿತುಕೊಳ್ಳುವುದೇ ನಮ್ಮ ಆತ್ಮದ ಪರಮ ಕರ್ತವ್ಯ. ಅದು ಅತ್ಯುಚ್ಚ, ಅತಿ ಕಲ್ಯಾಣಕರ ಕರ್ಮವಾಗಿದೆ. ಇದೇ ಪರಿಪೂರ್ಣತೆಯ ವ್ಯಾಖ್ಯಾನ ಕೂಡ ಹೌದು. ಹಾಗೆಂದು ಆತ್ಮನ ಕರ್ಮ ಸನ್ಯಾಸದ, ವಿಶ್ವಾತೀತ ಪರಬ್ರಹ್ಮನ ಸಾಕ್ಷಾತ್ಕಾರ ಮಾತ್ರವೇ ಏಕೈಕ ಪರಮ ಸಿದ್ಧಿ ಎಂದು ತಿಳಿಯಬಾರದು. ನಾವು ಅರ್ಥ ಮಾಡಿಕೊಳ್ಳಬೇಕಾದ ಗ್ರಹಿಸಬೇಕಾದ ರಹಸ್ಯವೇನೆಂದರೆ, ಶಾಶ್ವತನಾದ, ಅವ್ಯಕ್ತನಾದ ಅಜಾತನಾದ ಪರಮಾತ್ಮನ ಜೊತೆಗೆ ಅವನ ದಿವ್ಯ ಜನ್ಮ. ದಿವ್ಯ ಕರ್ಮಗಳನ್ನು ತಿಳಿದುಕೊಳ್ಳಬೇಕು. ಎರಡರ ಅರ್ಥವನ್ನು, ರಹಸ್ಯ ಸತ್ಯವನ್ನು ಗ್ರಹಿಸಬೇಕು. “ಜನ್ಮ ಕರ್ಮ ಚ ಮೇ ದಿವ್ಯಂ” ಎಂದು ಕೃಷ್ಣನೇ ಹೇಳುತ್ತಾನೆ. ಈ ರಹಸ್ಯ ಜ್ಞಾನದ ಹಿನ್ನೆಲೆಯಲ್ಲಿ ಮಾಡಿದ ಯಾವ ಕರ್ಮಗಳೂ ಬಂಧನಕಾರಿಯಾಗುವುದಿಲ್ಲ. ವ್ಯಕ್ತಿ ಕರ್ಮ ಸಂಗದಿಂದ ಮುಕ್ತನಾಗಿರುತ್ತಾನೆ. “ಯಾರು ನನ್ನನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೋ ಅವರು ಕರ್ಮಗಳಿಂದ ಬಂಧಿತರಾಗಿರುವುದಿಲ್ಲ” ಎಂದು ಕೃಷ್ಣನು ಸ್ಪಷ್ಟವಾಗಿಯೇ ಹೇಳುತ್ತಾನೆ. ಕರ್ಮದ ಬಂಧನದಿಂದ, ಅವರ ಸಂಸರ್ಗದಿಂದ ಪಾರಾಗುವುದು, ಪುನರ್ಜನ್ಮದ ಚಕ್ರದಿಂದ ಮುಕ್ತನಾಗುವುದು ಇದೇ ಮಾನವನ ಗುರಿ ಹಾಗೂ ಆದರ್ಶವಾಗಿದ್ದರೆ ಈ ಜ್ಞಾನವು ಮಾತ್ರ ಅವಶ್ಯ ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು. ಮುಕ್ತಿಯನ್ನು ಪಡೆಯಲು ಇದು ರಹದಾರಿ ಎಂದು ತಿಳಿದುಕೊಳ್ಳಬೇಕು. ಏಕೆಂದರೆ ಗೀತೆ ಹೇಳುವಂತೆ “ಯಾರು ನನ್ನ ದಿವ್ಯ ಜನ್ಮ ಹಾಗೂ ದಿವ್ಯ ಕರ್ಮಗಳ ಹಿಂದಿನ ತತ್ವವನ್ನು ಸರಿಯಾಗಿ ಗ್ರಹಿಸುತ್ತಾರೋ, ಅವರು ತಮ್ಮ ಶರೀರಾವಸಾನದ ನಂತರ ನನ್ನಲ್ಲಿ ಬಂದು ಸೇರಿಕೊಳ್ಳುತ್ತಾರೆ, ಅಂಥವರು ಪುನಃ ಜನನ ಮರಣಗಳ ಚಕ್ರದಲ್ಲಿ ಬೀಳುವುದಿಲ್ಲ.” ದಿವ್ಯ ಜನ್ಮ ಹಾಗೂ ದಿವ್ಯ ಕರ್ಮದ ಜ್ಞಾನದ ಮೂಲಕ ಅವನು ನಿಧಾನವಾಗಿ ಅಜಾತನಾದ, ವ್ಯಕ್ತನಾದ, ಅಗೋಚರನಾಗಿರುವ, ಅವಿನಾಶಿಯಾಗಿರುವ ಆತ್ಮನೆಡೆಗೆ ಸಾಗುತ್ತಾರೆ. ಅಂಥ ಅವ್ಯಯ, ಅಜಾತ ಆತ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೆ. ದಿವ್ಯ ಕರ್ಮಗಳ ಹಿಂದಿನ ತತ್ವವನ್ನು ತಿಳಿದ ಜ್ಞಾನಿಯು “ಸರ್ವಭೂತಾನಾಂ ಈಶ್ವರ”ನಾಗಿರುವ ಕರ್ಮ ಪ್ರಭುವಿನೆಡೆಗೆ ಸಾಗುತ್ತಾನೆ. ಅರ್ಥಾತ್ ಅಂಥ ಜ್ಞಾನಿಯಾದವನು ಶಾಂತ, ಅಜ ಆತ್ಮನಲ್ಲಿ ನೆಲೆಸುತ್ತಾನೆ, ಹಾಗೂ ಅವನ ಕರ್ಮಗಳು ವಿಶ್ವ ಪ್ರಭುವಿನ ಆದೇಶದಂತೆ, ಸಂಕಲ್ಪದಂತೆ ನಡೆಯುತ್ತವೆ.

(ಸಶೇಷ)

# ತ್ರಾಟಕ ಸೂರ್ಯ

## 3

**– ಪುಟ್ಟು ಕುಲಕರ್ಣಿ**

ಅಲ್ಲಿ – ಬರಿಸಾಲದಲ್ಲಿ ನೋಡಿ, ಏನೂ ಆಗಿಯೇ ಇಲ್ಲ ಎನ್ನುವಂತಿದೆಯಲ್ಲವೇ? – ಯಾವುದೇ ಅಶಾಂತಿ, ತೊಂದರೆ ಇಲ್ಲ, ಕಾನೂನನ್ನು ಯಾರೂ ಮುರಿಯುವದಿಲ್ಲ. ಅದಕ್ಕೆ ತದ್ವಿರುದ್ಧವಾಗಿ ಇಲ್ಲಿ ನೀವು ಮಾತ್ರ, ಸಹನಾಶೀಲರಾಗಿ ಮತ್ತು ಸ್ವಯಂ–ನಿಗ್ರಹದಲ್ಲಿ – ನೀವು ಸದಾ ಕಾನೂನಿನ ನಾಲ್ಕು ಗೋಡೆಗಳ ಮಧ್ಯದಲ್ಲಿಯೇ ನಿಮ್ಮನ್ನು ಸದಾ ಇರಿಸಿಕೊಂಡಿದ್ದೀರಿ. ಆದರೆ ಈಗ ವ್ಯಂಗ್ಯವೆಂದರೆ ನೀವು ದಂಡ ತೆರಬೇಕಾಗಿರುವದು, ನಿಮ್ಮಲ್ಲಿರುವ ದೇಶಭಕ್ತಿಯ ಸಲುವಾಗಿ! ಸ್ವದೇಶಿ ಮಂತ್ರದ ಅನುಸರಣೆಗಾಗಿ! ಅದರಲ್ಲೂ ಸುವ್ಯಸ್ಥಿತವಾಗಿಯೇ ವಿದೇಶಿ ವಸ್ತುಗಳಿಗೆ ಹಾಕಿರುವ ಬಹಿಷ್ಕಾರಕ್ಕಾಗಿ ನೀವೀಗ ದಂಡ ತೆತ್ತಬೇಕಾಗಿದೆ. ಆದರೆ ಈ ಝಾಲಕಾಟಿಯ ಮಹಾಜನತೆ ಈ ರೀತಿಯ ದಂಡದ ಕರವನ್ನು ಪಾವತಿಸಲು – ಅದರಲ್ಲೂ ದೇಶಭಕ್ತಿಯ ವಿಷಯದಲ್ಲಿ ಯಾವುದೇ ಆಪಾದನೆ ಇಲ್ಲದಂತೆ ಮತ್ತು ಇಂತಹ ಘಟನೆಗಳನ್ನು ಎದುರಿಸಲು ಸದಾ ಸಿದ್ಧರಿರುವ ಉದಾರ ಹೃದಯವಂತರಾಗಿದ್ದೀರಿ!!

ಇಲ್ಲಿಗೇ ಇದು ನಿಲ್ಲುವದಿಲ್ಲ, ಇದೇ ಮುಂದೆ ಸಾಗಿ ಗಡಿಪಾರ ಆಗುವವರೆಗೂ ಬರುತ್ತದೆ. ನಿಮ್ಮ ಆತ್ಮೀಯರನ್ನು, ಅದರಲ್ಲೂ ದೇಶಭಕ್ತಿಯ ಸಲುವಾಗಿಯೇ ತಮ್ಮನ್ನು ಸಮರ್ಪಣೆ ಮಾಡಿಕೊಂಡವರಿಂದ ದೂರವಿರಲು ಒತ್ತಡಗಳು ಹೆಚ್ಚುತ್ತವೆ. ಈಗಾಲೇ ಈ ಜಿಲ್ಲೆಯಲ್ಲಿ ದೇಶಭಕ್ತಿಗಾಗಿ ಮತ್ತು ಈ ಪವಿತ್ರ ಕಾರ್ಯಕ್ಕಾಗಿ ತೊಡಗಿಕೊಂಡವರಿಂದ ದೂರವಿರಬೇಕಾಗುವದು. ಬರಿಸಾಲದ ತನ್ನ ಪಾಲಿಗಿಂತ ಅಧಿಕವಾಗಿಯೇ ಈ ಗಡಿಪಾರಿನ ಘಟನೆಗಳನ್ನು ಕಾಣುತ್ತಿದೆ ಅಲ್ಲವೇ? ಈ ರೀತಿ ಗಡಿಪಾರಾಗಿರುವ ಮೂವರು ಇದೇ ಜಿಲ್ಲೆಯವರು ಆಗಿದ್ದಾರೆ. ಯಾರ ಹೆಸರು ಸದಾ ಜನರ ಮಾತಿನಲ್ಲಿ ಬರುತ್ತದೆಯೋ ಆ ವ್ಯಕ್ತಿಯು ಚಿರಂಜೀವಿಯಾಗುತ್ತಾನೆ – ಏಕೆಂದರೆ ಅವರೇ – ನವ ರಾಷ್ಟ್ರವನ್ನು ರೂಪುಗೊಳಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ, ಅವರಲ್ಲಿ ಓರ್ವರು ಇಲ್ಲಿಯವರೇ ಆದ ಅಶ್ವಿನಿಕುಮಾರ ದತ್ತ ಒಬ್ಬರು. ಆದರೆ ಅವರನ್ನು ನಿಮ್ಮಿಂದ ದೂರ ಮಾಡಲಾಗಿದೆ. ಅಶ್ವಿನಿದತ್ತನ ಕ್ರಿಯಾಶೀಲ ಮತ್ತು ಸಮರ್ಪಣಾ ಮನೋಭಾವದ ಮುಂದಾಳತ್ವವು ನಿಮ್ಮಿಂದ

ದೂರ ಮಾಡಲ್ಪಟ್ಟಿದೆ. ಹೃದಯಪೂರ್ವಕವಾಗಿಯೇ ದೇಶಭಕ್ತಿಯನ್ನು ಹೊಂದಿದ್ದ ಅಶ್ವಿನಿದತ್ತ ನನ್ನ ಆತ್ಮೀಯ ಮಿತ್ರನಾಗಿದ್ದನು ಎನ್ನುವದೇ ನನಗೆ ಹೆಮ್ಮೆಯ ವಿಷಯ. ಅದೇ ರೀತಿಯಲ್ಲಿಯೇ ಮನೋರಂಜನ ಗುಹಾನನ್ನು ಕಳೆದುಕೊಂಡಿದ್ದೀರಿ. ಯಾಕೆ ಇವರನ್ನು ಈ ರೀತಿಯಲ್ಲಿ ನಿಮ್ಮ ಮನಸ್ಸಿನಿಂದ ಹೊರಗೆ ಹಾಕಲಾಯಿತು? ಅವರು ಯಾವ ತಪ್ಪನ್ನು ಎಸಗಿದ್ದರು? ಈ ವಿಷಯವಾಗಿ ಬರಿಸಾಲದಲ್ಲಿ ಒಂದಾದರೂ ಪ್ರತಿಕ್ರಿಯೆ ನಡೆಯಿತೆ? ಅವರನ್ನು ಈ ರೀತಿಯಲ್ಲಿ ದೂರ ಮಾಡುವದರ ಸಲುವಾಗಿ ಏನು ಕಾರಣ ಎಂದು ಒಬ್ಬರಾದರೂ ಹೇಳುತ್ತೀರಾ?

ಆದರೆ ಅಶ್ವಿನಿಕುಮಾರ ಮಾತ್ರ ಈ ಕಾರ್ಯ ಮಾಡಿದ್ದರು, ಅವರು ಅದಕ್ಕಾಗಿಯೇ ಬದ್ಧತೆಯನ್ನು ಹೊಂದಿದ್ದರು. ಇಂತಹ ಉದಾತ್ತ ಚಿಂತನೆಯ ಮತ್ತು ಪರಿಶುದ್ಧ ವ್ಯಕ್ತಿತ್ವವನ್ನು ಹೊಂದಿದ ಬಗೆಗೆ ಗೌರವ ಅಭಿಮಾನವಾದರೂ ಬೇಡವೇ? ಕೃಷ್ಣಕುಮಾರ ಮಿತ್ರನ ವಿಷಯದಲ್ಲಿನ ಈ ಇಡೀ ಪ್ರದೇಶಕ್ಕೇ ಅಪಮಾನಜನಕವಾದ ಘಟನೆಯ ಕುರಿತು ಒಂದಾದರೂ ಧ್ವನಿ ಕೇಳುತ್ತಿದೆಯೇ? ಅವರೆಲ್ಲರ ಮೇಲೂ ಸುಳ್ಳು ಆಪಾದನೆಗಳು, ನಾಚಿಕೆಯಿಲ್ಲದ ಆರೋಪಗಳನ್ನೇ ಮಾಡಲಾಯಿತು. ಇವರೆಲ್ಲರೂ ಯಾವ ಕಾನೂನಿನ ಅಡಿಯಲ್ಲಿ ಗಡಿಪಾರು ಮಾಡಲ್ಪಟ್ಟರೋ, ಆದರೆ ಅಲ್ಲಿ ಯಾವ ಆಪಾದನೆಗಳೂ ಇರಲಿಲ್ಲ. ಹೀಗಾಗಿ ಅವರನ್ನು ಗಡಿಪಾರು ಮಾಡಲು ಸಾಧ್ಯವಿರಲಿಲ್ಲ. ಈ ರೀತಿಯಲ್ಲಿ ಗಡಿಪಾರು ಮಾಡಲು ಇದ್ದ ಕಾನೂನಿನ ವಿಷಯದ ಕುರಿತು ಸಂಸತ್ ಸಭೆಯಲ್ಲಿಯೂ ತೀವ್ರ ಚರ್ಚೆಯಾಗಿ, ಇದೊಂದು ಪ್ರಾಚೀನ ಕಾಲದ ವಿಸಂಗತಗಳಿಂದ ಕೂಡಿರುವ ನಿಯಮ ವಿರುದ್ಧವಾಗಿರುವ ಕ್ರಿಯೆಯಂತೆ ಇದೆ, ಹೀಗಾಗಿ ಇದನ್ನು ವರ್ತಮಾನದ ಅವಧಿಯಲ್ಲಿ ಅನುಷ್ಠಾನಗೊಳಿಸಲು ಸಾಧ್ಯವಿಲ್ಲ ಎಂದೇ ಅಲ್ಲಿ ಚರ್ಚೆಗೆ ಒಳಪಟ್ಟಿತ್ತು. ಈ ರೀತಿಯಲ್ಲಿ ಆ ಕ್ರಿಯೆಯು ತೀವ್ರವಾದ ವಿರೋಧದ ದಾಳಿಯನ್ನು ಎದುರಿಸಿದ ಭಾರತ ಸರಕಾರದ ನೀತಿಯನ್ನೇ ತೀವ್ರವಾಗಿಯೇ ಪ್ರಶ್ನಿಸಲಾಗಿತ್ತು. ಆ ಅವಧಿಯಲ್ಲಿ ವೈಸರಾಯ ಆಗಿದ್ದ ಲಾರ್ಡ ಮೊರಲೀ, ಸದಾ ತನ್ನದೇ ಹಠಮಾರಿ ನಿರ್ಣಯಗಳ ಮೂಲಕವೇ ಆಡಳಿತ ನಡೆಸುತ್ತಿದ್ದ. ಅದೂ ಅಲ್ಲದೇ ಅವನ ಈ ಬ್ರಿಟೀಶ – ರಾಜತಾಂತ್ರಿಕತೆಯ ಧೋರಣೆಯಲ್ಲಿ ತಾನೇ ಅವತಾರಗೊಂಡ ವ್ಯಕ್ತಿಯಂತೆ ವರ್ತಿಸುತ್ತಿದ್ದಂತೆ ನಮಗೆ ತೋರುತ್ತಿದೆ. ಅವನು ನೀಡಿದ್ದ ಉತ್ತರ ಒಬ್ಬ ರಾಜನೀತಿಜ್ಞನ ಉತ್ತರವಾಗಿರಲೇ ಇಲ್ಲ, ಅದೊಂದು ಅಟಾರ್ನಿ ನೀಡುವ ಉತ್ತರದಂತಿತ್ತು. 'ಕಾನೂನು ಹೇಳುತ್ತಿರುವದೇನೆಂದರೆ' ಎಂದೇ ಮೋರಲಿ

ಪ್ರಾರಂಭ ಮಾಡುತ್ತಿದ್ದುದು, ಪ್ರತಿ ಮಾತಿನಲ್ಲಿಯೂ ಅವರು ಹೇಳುತ್ತಿದ್ದುದು. 'ಶಾಸನ ಗ್ರಂಥದಲ್ಲಿ ಯಾವುದಾದರೂ ಒಂದು ಒಳ್ಳೆಯ ನಿಯಮವಿದೆಯೇ?' ಇದೇ ಅವರ ಧೋರಣೆ. 'ಒಳ್ಳೆಯ ನಿಯಮ' ಎಂದರೆ ಇದರರ್ಥವಾದರೂ ಏನು? ಹಾಗೆ ಒಂದು ದೃಷ್ಟಿಯಲ್ಲಿ ಗಮನಿಸಿದರೆ, ಪ್ರತಿಯೊಂದು ಕಾನೂನು ಸಹಿತ ಒಳ್ಳೆಯ ಕಾನೂನು ಆಗಿದೆ. ಅದು ಒಂದು ಪರಿಣಿತ ಪ್ರಾಧಿಕಾರದಿಂದ ರೂಪಣೆಯನ್ನು ಪಡೆದುಕೊಂಡಿರುತ್ತದೆ.

ಒಂದು ವೇಳೆ ಸ್ವದೇಶಿ ವಸ್ತುಗಳನ್ನು ಖರೀದಿಸುವದು ಕಾನೂನುಬಾಹಿರ ಎಂದು ಹೇಳುವ ನಿಯಮ ಎಲ್ಲಿಯಾದರೂ ಇದೆಯಾ? ಹಾಗಿದ್ದಲ್ಲಿ, ಸ್ವದೇಶಿ ಬಟ್ಟೆಯನ್ನು ಖರೀದಿಸುವದೂ ಕಾನೂನು ಬಾಹಿರ ಕೆಲಸವಾಗುತ್ತದೆ. ಅಷ್ಟೇ ಅಲ್ಲ ಅದೊಂದು ಅಪರಾಧಿಕ ಕ್ರಿಯೆಯಾಗುತ್ತಿತ್ತು. ಮತ್ತು ಇದಕ್ಕೆ ಕಾನೂನಿನ ಅಡಿಯಲ್ಲಿಯೇ ನ್ಯಾಯ ಮಂಡಳಿಯು ಶಿಕ್ಷೆಯನ್ನೂ ವಿಧಿಸಬಹುದಿತ್ತು. ಇಂತಹ ಕಾನೂನುಗಳನ್ನು ಅವರು ಈ ಮೊದಲೇ ಬಲ್ಲವರಾಗಿದ್ದರು. ಇತಿಹಾಸದಲ್ಲಿ ಅವುಗಳನ್ನು ಉಪಯೋಗಿಸಿದ್ದರೂ ಕೂಡಾ. ಒಂದು ವೇಳೆ ಈ ರೀತಿಯ ಕಾನೂನುಗಳು ಆಯ್ಕೆಯಾದ ಶಾಸಕಾಂಗದಿಂದಲೇ ರಚಿತವಾಗುತ್ತಿದ್ದರೆ ಅವು ಖಂಡಿತವಾಗಿಯೂ ಈ ಮೋರಲಿಯದೇ ಆದ ಜಗತ್ತಿನ ದೃಷ್ಟಿಯಲ್ಲಿ ಮಾತ್ರ ಇಂತಹ 'ಒಳ್ಳೆಯ ಕಾನೂನು' ಕಾನೂನು ಗ್ರಂಥದಲ್ಲಿ ಸೇರಲು ಸಾಧ್ಯ. ಹಾಗಾದರೆ 'ಒಳ್ಳೆಯ ಕಾನೂನು' ಎನ್ನುವದು ನಿಜವಾದ ಅರ್ಥದಲ್ಲಿ ಕಾನೂನಿನ ಅಪಹಾಸ್ಯವೇ ಅಥವಾ ನ್ಯಾಯದ ಅಪಹಾಸ್ಯವೇ? ಆದರೆ ಲಾರ್ಡ ಮೋರಲಿ ಹೇಳುತ್ತಿರುವದು ಇದೇ 'ಒಳ್ಳೆಯ ಕಾನೂನು!' ಆದರೆ ನಾವಿದನ್ನು ನ್ಯಾಯವೇ ಇಲ್ಲದ ನ್ಯಾಯ ಅಥವಾ ಕಾನೂನು ಎಂದೇ ಕರೆಯಬೇಕಾಗಿದೆ. ಏಕೆಂದರೆ ಇದೊಂದು ಅಪ್ರಾಮಾಣಿಕವಾದ ನಿಯಮವಾಗಿದೆ. ಇದು ಯಾವುದೇ ರೀತಿಯಲ್ಲಿಯೂ ಕಾನೂನು ಅಲ್ಲವೇ ಅಲ್ಲ ಎಂದೇ ಹೇಳಬೇಕಾಗಿದೆ.

ಮನಸ್ಸಿನಲ್ಲೆಲ್ಲವೂ ಭಾರತದ ಪ್ರಸ್ತುತ ಪ್ರಕ್ಷುಬ್ಧತೆಯನ್ನು ಕಂಡು ಕನಲುತ್ತಿದೆ. ಏಕೆ ಈ ರೀತಿಯಲ್ಲಿ ಸಂಪೂರ್ಣವಾಗಿ ವ್ಯಕ್ತಿತ್ವರಹಿತ ಜೀವನಕ್ಕೆ ಪ್ರಜೆಗಳು ತಮ್ಮನ್ನು ತಾವೇ ಕ್ಷೀಣಗೊಳಿಸಿಕೊಂಡಿದ್ದಾರೆ? ದೇವಿಯ ಬಯಕೆ ಇದೇ ಆಗಿದೆಯೇ? ಸಾಧ್ಯವೇ ಇಲ್ಲ. ಮಾತೆಯ ಅಳಲನ್ನು ಕೇಳದ ಹಾಗೆ ನಾಟಕ ಮಾಡುತ್ತಿದ್ದಾರೆ ಇವರೆಲ್ಲ ಎಂದು, ಒಂದು ಕ್ಷಣ ಭಾವ ತೀವ್ರತೆಯಲ್ಲಿ ಉಸಿರು ನಿಂತಂತಾಯಿತು. ತಮವೇ ತುಂಬಿರುವ ಕೂಪವನ್ನೇ ಸುಖದ ತಾಣವಾಗಿಸಿಕೊಂಡಿದ್ದಾರಲ್ಲ, ಏನು

ಹೇಳಬೇಕು, ಇವರಿಗೆ, ಅದರೂ ಅಲ್ಲದೇ ಜಡತೆಯನ್ನೇ ಹಾಸು–ಹೊದ್ದವರಂತೆ ನಿದ್ರೆಯಲ್ಲಿ ಮುಳುಗಿದ್ದಾರೆ. ದಿನನಿತ್ಯವೂ ವಸಂತದ ಕಲ್ಪನೆಯನ್ನೇ – ಅದೂ ಕೃತಕ ಕಲ್ಪನೆಯನ್ನೇ ಆಧರಿಸಿಕೊಂಡು ಸಾಗುತ್ತಿದ್ದಾರೆ, ಅದನ್ನೇ ಹಾಸವೆಂದೂ ಭ್ರಮಿಸಿದ್ದಾರೆ. ನಾಟಕದ ಸಲುವಾಗಿ ಕಾವ್ಯ–ಪುರಾಣ ಪಠಣಗಳನ್ನು ನಡೆಸುವ ಯಂತ್ರವಾಗಿದ್ದಾರೆ. ದ್ರವ್ಯ–ಭೋಗ–ವೈಭೋಗ ಇವೇ ಪುರುಷಾರ್ಥಗಳು ಎಂದು ಭಾವಿಸಿ ತೆವಳುತ್ತಿದ್ದಾರೆ. ಶೃಂಗಾರ ಭಾವದ ಭರತದಲ್ಲಿ ಮುಳುಗಿ ಮುಳುಗಿ, ಗಾನ–ತಾನಗಳ ಛಂದದಲ್ಲಿ, ಬಂಧದಲ್ಲಿ ಲಲಿತ ಭಾವನೆಯನ್ನು ಬಯಸುತ್ತಿದ್ದಾರೆ.

ಅಯ್ಯೋ, ಬರೀ ಆಕ್ರಂದವೇ ತುಂಬಿ ತುಂಬಿ ಇಡೀ ಭರತ ಭೂಮಿ ಹೂತು ಹೋಗುತ್ತಿದೆ. ದುರುಳ ಖಳರಾಗಿ ಬಂದವರೆಲ್ಲರೂ ಮಾತೆಯ ಒಡಲನ್ನೇ ಬಗೆದು ಬಗೆದು ಕ್ರೂರ ಕರ್ಮ ಎಸಗುತ್ತಿದ್ದಾರೆ. ಅಂಥವರ ಪಾದ ಸೇವೆಯನ್ನೇ ಸ್ವಾರ್ಥದ ಸಲುವಾಗಿ ಆಯ್ದುಕೊಳ್ಳುತ್ತಿದ್ದಾರೆ. ಆದರೆ ಆ ಖಳರೆಲ್ಲರೂ ನನ್ನ ಸಹೋದರರ ರಕ್ತದಿಂದಲೇ ಮಿಂದೆದ್ದಿದ್ದಾರೆ. ಇದನ್ನು ಎಷ್ಟು ದಿನ ತಾಳಬೇಕು? ಮಾತೆಯನ್ನು ನಾನು ಪ್ರಾರ್ಥಿಸಲೇಬೇಕಾಗಿದೆ. ನನ್ನ ಭೋಗ–ಸುಖಗಳನ್ನು ಮರೆತು ಹೃದಯಪೂರ್ವಕವಾಗಿ ಮಾತೆಯನ್ನು ಪ್ರಾರ್ಥಿಸಿದಲ್ಲಿ, ಅಭೀಪ್ಸೆಯನ್ನು ಹೊಂದಿದಲ್ಲಿ, ಆ ನಿತ್ಯ ಕೃಪೆಯ ಭೂಮಹಸ್ತವು ನನ್ನನ್ನು ಸ್ಪರ್ಶಿಸುತ್ತದೆ. ಆ ಸ್ಪರ್ಶದಿಂದ ನನ್ನ ಅಕ್ಷಿಗಳಲ್ಲಿ ಕಾಂತಿಮಯಗೊಂಡದ್ದು ಪ್ರತ್ಯಕ್ಷವಾಗಿರುವ ಕಾಳಿಮಾತೆಯ ದಿವ್ಯ ಕೃಪಾ ದೃಷ್ಟಿಯ ಧಾರೆ ಧಾರೆ.

ಇದೇನಿದು! ಕಾಳಿಮಾತೆ ತನ್ನ ಭೀಕರ ಸ್ವರೂಪದಲ್ಲಿ ಪ್ರತ್ಯಕ್ಷಗೊಳಿಸಿ–ಕೊಳ್ಳುತ್ತಿದ್ದಾಳೇ, ನರರ ನರಗಳನ್ನೇ ಸರಮಾಲೆ ಮಾಡಿಕೊಂಡು, ರುಂಡಗಳನ್ನು ಸಾಲುಸಾಲಾಗಿ ಪೋಣಿಸಿಕೊಂಡು ಅಬ್ಬರದಿಂದ ಬರುತ್ತಿದ್ದಾಳೆ. ಹಸಿದು ಹಲ್ಲು ಹಿಸಿಯುತ್ತಿರುವ ಕ್ರೂರ ತೋಳದ ರೌದ್ರ ಅಕ್ಷಿಗಳಂತೆ ಕೆಂಪಡರಿವೆ, ಇಲ್ಲೆಲ್ಲವೂ ದಾರಿದ್ರ್ಯ ತುಂಬಿ ತುಳುಕುತ್ತಿದೆ. ಮತ್ತೆ ಆಡಳಿತದಲ್ಲಿರುವ ರಾಕ್ಷಸರ ಸೊಕ್ಕಿನ ಅಕ್ಕಸದ ಘಾತಾನುಘಾತಗಳು, ಬೆನ್ನಿಗೇ ಇರಿಯುತ್ತಿರುವದರಿಂದ, ಗಾಯದ ಉರಿಯೂ ಉಲ್ಬಣಗೊಳ್ಳುತ್ತಿದೆ. ಇದೆಲ್ಲವನ್ನೂ ಸಿಂಹಿಣಿಯ ತೆರದಲ್ಲಿ ಗರ್ಜಿಸುತ್ತ ಬಂದ ಮಾತೆ, ಈ ತಲ್ಲಣಕ್ಕೆ ಕಾರಣವಾದ ಎಲ್ಲ ತುಮುಲಗಳನ್ನು ಮುರಿದು ಚೂರಾಗಿಸಲು ಸನ್ನದ್ಧವಾಗಿದ್ದಾಳೆ. ಇಂತಹ ವಿಪ್ಲವಗಳನ್ನೇ ನುಂಗಿ ನೊಣೆಯುವಂಥ ರಣ ಹಸಿವಿನಲ್ಲಿ ನಿಗಿಗುಡುತ್ತಿವ ಕೆಂಡಗಣ್ಣು, ಇಡೀ ಲೋಕವೆಲ್ಲವೂ ವ್ಯಾಕುಲಕ್ಕೆ ಸಿಲುಕಿ

ತಹತಹಿಸಿ ಸೋತು ಹೋಗುತ್ತಿದೆ. ಇದನ್ನು ನಿಯಂತ್ರಿಸಿಯೇ ಸಿದ್ಧ ಎಂದು ಹೂಂಕಾರಲ್ಲಿ ಠೇಂಕಾರ ಮಾಡುತ್ತ, ಕಟು ಸ್ವರದ ಹುಯ್ಲು ಎಬ್ಬಿಸುತ್ತ ಬರುತ್ತಿರುವ ಮಾತೆಯ ಅಬ್ಬರವನ್ನು ದೇವ ಗಣವೂ ಸಹಿತ ಬೊಬ್ಬಳಕ್ಕೆ ಸಿಲುಕಿ ಅಳುಕುತ್ತಿದೆ. ಪಶುವಿನ ಅಬ್ಬರದಲ್ಲಿಯೇ ಬೊಬ್ಬೆ ಹಾಕುತ್ತ, ಈ ಭುವನವನ್ನೇ ನುಂಗಲೆಂದು, ಆ ಕ್ರೂರ ದವಡೆಗಳಲ್ಲಿ ಕಟಕಟನೇ ನುರಿದು ನುರಿದು, ರೌದ್ರ ನರ್ತನ ಮಾಡುತ್ತಿರುವ ಓ ಮಾತೆಯೇ, ನೀನೇ ಇದಕ್ಕೆಲ್ಲ ಸಾಕ್ಷಿಯೂ ಆಗಿದ್ದೀಯಾ. ಇಲ್ಲೆಲ್ಲ ಇರುವದು ತಮೋ ಲೋಕದಲ್ಲಿ ನಿಂತಿರುವ ತಾಮಸದ ಮಂದೆ. ಜೊತೆಗೆ ಸದಾ ವಾಂಛೆ ತುಂಬಿರುವ ದೃಷ್ಟಿಯಲ್ಲಿಯೇ ಇರುವ ವಿಷಣ್ಣ ಸ್ಥಿತಿ.

ಈಗಲಾದರೂ ನೀನು ಬಂದು, ನಿನ್ನ ಕೇಶಗಳ ಪಾಶದಲ್ಲಿ ಶಿಖರ ಸ್ವರೂಪದಲ್ಲಿರುವ ಎಲ್ಲ ಕ್ಲೇಶಗಳನ್ನೂ ಕಿತ್ತು ಕಿತ್ತು ಬೀಸಾಡು. ನಿನ್ನ ಕ್ರೂರ ದವಡೆಗಳನ್ನು ಕಾಣುತ್ತಲೇ ಸಾಗರವೂ ದೂರ ದೂರ ಸರಿಯಬೇಕು, ತನ್ನ ಉಕ್ಕುಬ್ಬರದ ಸೊಕ್ಕನ್ನು ತಣಿಸಿಕೊಳ್ಳಬೇಕು. ನಿನ್ನ ಏಕೈಕ ಶ್ವಾಸಕ್ಕೇ ಇಡೀ ನಭವೇ ಚೂರ್ಣವಾಗುತ್ತಿದೆ. ನಿನ್ನ ಪಾದದ ಅಪ್ಪಳಿಕೆಯಲ್ಲಿ ಭೂಮಿಯೂ ಗದಗದಿಸಿ ಸೋಲುತ್ತಿದೆ. ಇನ್ನಾದರೂ ಏಳಿ, ಮೇಲೇಳಿ, ಮಾತೆಯ ಆರ್ತವನ್ನು ಕೇಳಿ, ಏನಿದೆ ಈಗ ಇಲ್ಲಿ? ತಾರೆಗಳೇ ಇರದ ಸೂರು, ನಿಲ್ಲಲು ಸಾಧ್ಯವಾಗದ ಊರು! ಇಲ್ಲಿ ಎಲ್ಲೆಡೆಯಲ್ಲಿಯೂ ತುಂಬಿ ತುಳುಕುತ್ತಿರುವದು ಬರಿ ಗೋಳು. ನಿನ್ನನ್ನು ರಕ್ಷಿಸಲೆಂದೇ ಮಾತೆ ಕೃಪೆದೋರಿ ಆಗಮಿಸುತ್ತಿದ್ದಾಳೆ. ತನ್ನದೇ ಮಾರ್ದನಿಯನ್ನು ಇಲ್ಲಿ ಅವಳೀಗ ಆಲಿಸಬಯಸಿದ್ದಾಳೆ,

ಮೊದಲೇ ಭೀತಗೊಂಡಿರುವ ಮನಸ್ಸಿಗೆ ಮತ್ತಷ್ಟು ಉದ್ವಿಗ್ನತೆಯನ್ನು ನೀಡಿದಲ್ಲಿ ಮನಸ್ಸು ತಲ್ಲಣಕ್ಕೆ ಸಿಲುಕುತ್ತದೆ. ಇಂತಹ ಸ್ಥಿತಿಯಲ್ಲಿ ಸಮಾಧಾನ ರೂಪಿಸಿ, ಆಮೇಲೆ ಕಾರ್ಯ ಪ್ರವೃತ್ತರಾಗಬೇಕಲ್ಲವೇ? ನಾನೀಗ ಅದನ್ನು ಸಮರ್ಥವಾಗಿ ಎದುರಿಸುವೆ, ನಾನು, ನಾವು ಎಂದಿಗೂ ಈ ರೀತಿಯ ಸಾವನ್ನು ಬಯಸುವದಿಲ್ಲ, ನಿದ್ದೆಯಿಂದೆದ್ದು, ತಮವನ್ನು ದೂರವಿಟ್ಟು ಎಲ್ಲವನ್ನೂ ಎದುರಿಸುವೆ ಎನ್ನುವ ಆತ್ಮಸ್ಥೈರ್ಯವನ್ನು ಹೊಂದಿ, ಅದನ್ನೇ ಇಲ್ಲಿ ತಿಳಿಸಿಕೊಡಬೇಕಿದೆ. ಓ ಮಾತೆ, ಓ ಭೀಮೆ, ನನ್ನಲ್ಲಿ ಕರುಣೆ ತೋರಿ ನನ್ನ ಪಥವನ್ನು ಸುಗಮಗೊಳಿಸು, ನನ್ನ ಕಾರ್ಯವನ್ನು ನಿಗದಿಗೊಳಿಸು... ಎಂದು ಮನಸ್ಸಿನಾಳದಲ್ಲಿಯೇ ಪ್ರಾರ್ಥಿಸುತ್ತ ತುಂಬಿದ ಸಭೆಯನ್ನೊಮ್ಮೆ ಗಮನಿಸಿದೆ.

ಎಲ್ಲರೂ ಏಕಾಗ್ರಚಿತ್ತರಾಗಿ ಆಲಿಸುತ್ತಿದ್ದಾರೆ. ಅವರ ಮಾತೃಭೂಮಿಯ ಕುರಿತು ಮನಸ್ಸಿನಲ್ಲಿ ಕಲಮಲ ಪ್ರಾರಂಭಗೊಂಡಂತೆ ತೋರಿತು. ನನಗೆ ಮಾತೆಯು ವಹಿಸಿರುವ ಕಾರ್ಯದ ಬಗೆಗೆ ಕಳೆದ ಎರಡು–ಮೂರು ದಿನಗಳ ಯೋಗ ಸಾಧನೆಯ ಅಂಶಗಳೂ ಇದಕ್ಕೆ ಸಹಕಾರಿಯಾದವು. ಯೋಗದ ಮಾರ್ಗ ನನಗೆ ನಾನೇ ವಹಿಸಿಕೊಂಡಿರುವ ಪಥವಾಗಿದೆ, ನನ್ನ **ಕಾವ್ಯ ನನಗೆ ಜ್ಞಾನ ಮಾರ್ಗ**ವಾದರೆ **ರಾಷ್ಟ್ರ ಪ್ರೇಮ – ಸ್ವರಾಜ್ಯ ಸಿದ್ಧಿ ನನಗೆ ಕರ್ಮ ಯೋಗ**. ಇದಕ್ಕಾಗಿ **ಸಮರ್ಪಣಾ ಮನೋಭಾವದಲ್ಲಿಯೇ ಭಕ್ತಿ ಯೋಗ**ವನ್ನು ಅನುಸರಿಸುತ್ತಿದ್ದೇನೆ ಅಲ್ಲವೇ ಎಂದು ಮನಸ್ಸಿನಲ್ಲಿ ತರಂಗವೊಂದು ಉದಿಸಿತು, ಅದನ್ನೇ ಧ್ಯಾನಿಸುತ್ತ ಮತ್ತೆ ಮಾತು ಮುಂದುವರೆಸಿದೆ, ಯಾವ ಉದ್ದೇಶಕ್ಕಾಗಿ ಮತ್ತು ಯಾವ ಅರ್ಥದಲ್ಲಿ ಇಂತಹ ಕಾನೂನು ರೂಪಿಸಿದ್ದಾರೆ ಎನ್ನುವದನ್ನು ತಿಳಿದುಕೊಳ್ಳಲೇಬೇಕು. ಯಾವುದೇ ಆಧಾರಗಳೂ ಇಲ್ಲದೆ ಯಾವ ವ್ಯಕ್ತಿಯ ವಿರುದ್ಧವಾಗಿ ಆಪಾದನೆ ಮಾಡಲು ಸಾಧ್ಯವಾಗುವದಿಲ್ಲ. ಇಂತಹ ಯಾವುದೇ ಸಾಕ್ಷ್ಯಾಧಾರಗಳೂ ಇಲ್ಲದೇ ಒಂದೇ ಒಂದು ಕ್ಷಣವೂ ನ್ಯಾಯಾಲಯದಲ್ಲಿ ನಿಲ್ಲಲು ಸಾಧ್ಯವಾಗುವದಿಲ್ಲ. ಯಾವುದೇ ನ್ಯಾಯ ಮಂಡಳಿಯ ಎದುರೂ ಏನೂ ಮಾಡಲಾಗುವದಿಲ್ಲ. ಕೇವಲ ಆ ವ್ಯಕ್ತಿಯ ಅಸ್ತಿತ್ವವೇ ತೊಂದರೆದಾಯಕವಾದಂತೆ ಕಾಣುತ್ತದೆ ಎಂದು ನ್ಯಾಯಾಲಯದ ಮುಂದೆ ಹೋದರೆ, ಅಲ್ಲಿ ಯಾವುದೇ ಆಪಾದನೆಯೂ ಸ್ಥಿರಗೊಳ್ಳುವದಿಲ್ಲ. ಆಗ ಅವರು ಆ ಅಪಾದಿತನೆಂದು ಪರಿಗಣಿತನಾದವನ್ನು ಮನೆಯಿಂದ ಹೊರಗೆ (ಗಡಿಪಾರು) ಮಾಡಬಹುದು, ಅವನ ಮಿತ್ರರಿಂದ ದೂರವಿಡಬಹುದು, ಅವನ ದೈನಂದಿನ ನ್ಯಾಯಸಮ್ಮತ ಚಟುವಟಿಕೆಗಳನ್ನು ನಿರ್ಬಂಧಿಸಬಹುದು, ಮತ್ತೆ ಅವನ ಮುಂದಿನ ಜೀವನವನ್ನೆಲ್ಲಾ ಸೆರೆಮನೆಯಲ್ಲಿಯೇ ಕಳೆಯುವಂತೆ ಮಾಡಬಹುದು. ಯಾವುದೇ ಕಾನೂನು ಗ್ರಂಥದಲ್ಲಿ ಇರಬಹುದಾದ 'ಒಳ್ಳೆಯ ಕಾನೂನು ಇದು!' ಆದರೆ ಇದು ಕಾನೂನು ಗ್ರಂಥದಲ್ಲಿ ಇರಬೇಕು ಎಂದರೆ ಏನರ್ಥ? ಇದರ ಅಂತರಾರ್ಥವೆಂದರೆ, ಕೆಲವೊಂದು ಸಂದರ್ಭಗಳಲ್ಲಿ ಅಥವಾ ಯಾವಾಗ ಯಾವಾಗ ಪರಮಾಧಿಕಾರ ಹೊಂದಿರುವ ಪ್ರಾಧಿಕಾರವು ಆಯ್ಕೆ ಮಾಡಿಕೊಳ್ಳುತ್ತದೆಯೋ ಬ್ರಿಟೀಶ ಚಕ್ರಾಧಿಪತ್ಯದ ಯಾವುದೇ ವಿಷಯದಲ್ಲಿಯೂ ಇಲ್ಲಿ ಯಾವುದೇ ಕಾನೂನು – ಅಂದರೆ ವ್ಯಕ್ತಿಯ ರಕ್ಷಣೆ ಮತ್ತು ಸ್ವಾತಂತ್ರ್ಯದ ಕುರಿತು – ಇಲ್ಲ.

ಈಗಾಗಲೇ ಒಂಬತ್ತಕ್ಕೂ ಹೆಚ್ಚಿನ ಸಮರ್ಪಣಾ ಮನೋಭಾವದ ದೇಶ ಭಕ್ತರನ್ನು ಈ ಕಾನೂನಿನ ಅಡಿಯಲ್ಲಿಯೆ ಗಡಿಪಾರು ಮಾಡಲಾಗಿದೆ. ಅವರಲ್ಲಿ

ಕೆಲವರ ಹೆಸರುಗಳು ಭಾರತೀಯ ಮನೆಮನೆಯಲ್ಲಿಯೂ ಜನಜನಿತವಾಗಿವೆ ಮತ್ತು ಅವು ಎಂದಿಗೂ ಈ ರೀತಿಯಲ್ಲಿ ರಾಕ್ಷಸೀ ಕೃತ್ಯಗಳಿಗೆ ಎಂದಿಗೂ ಸಂಬಂಧ ಹೊಂದಿಲ್ಲ. ಇಲ್ಲಿ ಗಮನಿಸಲೇಬೇಕಾದ ಸಂಗತಿ ಎಂದರೆ, ಪಾರ್ಲಿಮೆಂಟದಲ್ಲಿ ಈ ವಿಷಯದ ಕುರಿತು ಚರ್ಚೆ ನಡೆದಾಗ, ಯಾವ ಆಪಾದನೆಯ ಮೇಲೆ ಈ ನಿರ್ಣಯ ತೆಗೆದುಕೊಳ್ಳಲಾಯಿತು ಎಂದು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಪ್ರಶ್ನಿಸಿದಾಗ, ಅಲ್ಲಿ ಸೂಕ್ತ ದಾಖಲಾತಿಗಳನ್ನೂ ಸಲ್ಲಿಸಲಿಲ್ಲ ಜೊತೆಗೆ ಯಾವುದೇ ಗುರುತರವಾದ ಆಪಾದನೆಯಯನ್ನೂ ತೋರಿಸಲಿಲ್ಲ! ಇದರ ಕೂಲಂಕಷ ತನಿಖೆಗಾಗಿ ಪಾಟೀ ಸವಾಲಿಗೆ ಒತ್ತಾಯಪೂರ್ವಕವಾಗಿಯೇ ವಿಚಾರಣೆಯನ್ನು ನಡೆಸಿದಾಗ, ಅಲ್ಲಿ ಯಾವದೇ ಆಧಾರವಿಲ್ಲದ, ಅಸ್ಪಷ್ಟವಾದ ವಿವರಗಳನ್ನೇ ಕೊಟ್ಟಿದ್ದಾರೆ.

ಅಲ್ಲಿ ಅವರು ಹೇಳಿದ್ದು, ಈ ಗಡಿಪಾರು ಶಿಕ್ಷೆಗೆ ಒಳಗಾಗಿರುವ ವ್ಯಕ್ತಿಗಳೆಲ್ಲರೂ ಅರಾಜಕತೆಯನ್ನು ಹುಟ್ಟುಹಾಕಿ ಮತ್ತೆ ರಕ್ತಪಾತವನ್ನು ಮಾಡುವ ಸಲುವಾಗಿ ಯೋಜನೆ ರೂಪಿಸಿ ಅದಕ್ಕೆ ಹಣಕಾಸಿನ ಸಹಾಯ ಮಾಡಿದ್ದಾರೆ ಎಂದೇ ಮಂಡಿಸಲಾಗಿದೆ. ಹಾಗಾದರೆ ಯಾವ ವಿಷಯವನ್ನು ಆಧಾರ ಮಾಡಿಕೊಂಡು ಈ ಪ್ರಾಧಿಕಾರ ಈ ರೀತಿಯ ಆಪಾದನೆ ಮಾಡಿತು? ಈ ರಾಕ್ಷಸೀ ಸ್ವಭಾವದ ಸುಳ್ಳು ಆರೋಪವನ್ನೇ ಹಾಂ–ಹಾಂ ಈ ರಾಕ್ಷಸೀ ಸ್ವಭಾವದ ಸುಳ್ಳು ಆರೋಪವನ್ನೇ, ಈ ಘನತೆವೆತ್ತ ರಾಜನ ಮಂತ್ರಿಗಳಿಂದ ವಿಚಾರಣೆ ನಡೆಸಲ್ಪಟ್ಟಿತು ಮತ್ತು ಅವರಿಂದ ಉಗ್ಗಡಿಸಲ್ಪಟ್ಟಿತು ಎನ್ನುವದೇ ಆಶ್ಚರ್ಯದ ಸಂಗತಿಯಾಗಿದೆ, ಈ ಮೂಲಕ ಹೌಸ್ ಆಫ್ ಕಾಮನ್ಸದ ವಾತಾವರಣವನ್ನೂ ಹದಗೆಡಿಸಲಾಗಿದೆ. ಅಶ್ವಿನಿಕುಮಾರ ದತ್ತನೇ ಆಗಲಿ ಅಥವಾ ಕೃಷ್ಣಕುಮಾರ ಮಿತ್ರನೇ ಆಗಿರಲಿ ಇವರು ಕ್ರಾಂತಿಗೆ ಕಾರಣರಾಗಿದ್ದಾರೆ, ಹಣಕಾಸಿನ ಸಹಾಯ ಮಾಡಿದ್ದಾರೆ ಮತ್ತು ರಕ್ತಪಾತಕ್ಕೆ ಪ್ರಚೋದನೆ ನೀಡಿದ್ದಾರೆ ಎಂದರೆ ನಂಬಲು ಸಾಧ್ಯವೇ? ನೀವು ಇದನ್ನು ಒಪ್ಪುತ್ತೀರಾ? ಅವರು ಅರಾಜಕತೆಯನ್ನು ಹಬ್ಬಿಸುತ್ತಿದ್ದಾರೆ ಎಂದರೆ ಹೇಗೆ ವಿಶ್ವಾಸವಿಡುವದು? ಯಾರ ಹೆಸರುಗಳನ್ನು ಸಮಾಜದಲ್ಲಿ ಸದ್ಗುಣಗಳಿಗೆ ಪರ್ಯಾಯವಾಗಿ ಹೇಳಲಾಗುತ್ತದೆಯೋ, ಪರಿಶುದ್ಧತೆಗೆ ಇನ್ನೊಂದು ಹೆಸರಾಗಿದೆಯೋ ಮತ್ತು ತಮ್ಮ ಇಡೀ ಜೀವನವನ್ನೇ ಸಮಾಜದ ಉದ್ಧಾರಕ್ಕಾಗಿ ತೊಡಗಿಸಿಕೊಂಡಿದ್ದಾರೆಯೋ, ಅದೇ ರೀತಿಯಲ್ಲಿ ಜನ ಸಾಮಾನ್ಯರ ಎದುರು ಬದುಕುತ್ತಿದ್ದಾರೆಯೋ ಅಂತಹ ವ್ಯಕ್ತಿತ್ವಗಳ ಮೇಲೇ ಈ ರೀತಿಯ ಹುಸಿ ಆಪಾದನೆಗಳು? ಮತ್ತೆ ಮೇಲಾಗಿ ಕೇವಲ ಪೊಲೀಸರ ಹೇಳಿಕೆಯ ಮೇರೆಗೆ ಇವರಿಗೆ ಗಡಿಪಾರು ವಿಧಿಸಿಲ್ಲ ಎನ್ನುವ ಸಮಝಾಯಿಸಿ ಬೇರೆ. ಆದರೆ

ಈ ಹೇಳಿಕೆಗಳೆಲ್ಲ ಮೊದಲಿನ ಹೇಳಿಕೆಗೆ ತದ್ವಿರುದ್ಧವಾಗಿವೆ. ಮೊದಲು ಹೇಳಿದ್ದಾದರೂ ಏನು? ಪೊಲೀಸರು ಒದಗಿಸಿರುವ ಮಾಹಿತಿಯನ್ನು ಆಧರಿಸಿಯೇ ಅವರನ್ನು ಗಡಿಪಾರಿಗೆ ನಿರ್ಣಯಿಸಲಾಗಿತ್ತು. ಅದನ್ನೇ ಪ್ರಾಧಿಕಾರವು ಇವರ ವಿಷಯದಲ್ಲಿ ಅಸಮಾಧಾನ ಹೊಂದಿತ್ತು ಎಂದೇ ಸಮರ್ಥಿಸಿಕೊಳ್ಳಲಾಗಿತ್ತು. ಆದರೆ ಇದೀಗ ಪೊಲೀಸ್ ಮಾಹಿತಿಯು ಸುಳ್ಳಿನಿಂದ ಕೂಡಿದೆ ಮತ್ತು ವಿಶ್ವಾಸಾರ್ಹವಾಗಿಲ್ಲ ಎಂದಿದ್ದರೂ, ನ್ಯಾಯ ನಿರ್ಣಯವನ್ನು ಸೂಕ್ತವಾಗಿ ಕೊಡಲಿಲ್ಲ. ಆ ಮಾಹಿತಿಯಲ್ಲಿ ಏನು ಇದ್ದಿರಬಹುದೆನ್ನುವದು ಅರಿಯದ ವಿಷಯವೇನಲ್ಲ. ಮುಖ್ಯವಾಗಿ ನಾನು ಇಲ್ಲಿ ಆ ಇಡೀ ಮಂಡಳಿಯ ಮೇಲೆ – ಯಾರನ್ನೂ ಬಿಡದ ಹಾಗೆ – ಕಣ್ಣುಮುಚ್ಚಿಕೊಂಡು ಆಪಾದನೆ ಮಾಡುತ್ತಿಲ್ಲ. ಪೊಲೀಸ ವಲಯದಲ್ಲಿಯೂ ಸರಿಯಾಗಿ ಯೋಚಿಸಬಲ್ಲ ಮತ್ತು ಸತ್ಯ ಏನು ಎಂದು ತಿಳಿದಿರುವ ಹಾಗು ಪ್ರಾಮಾಣಿಕ ಅಧಿಕಾರಿಗಳಿದ್ದಾರೆ. ನಾನು ಅವರನ್ನು ಬಲ್ಲೆ, ಅವರನ್ನು ಅಷ್ಟೇ ಗೌರವದಿಂದ ಕಾಣುತ್ತೇನೆ. ಆದರೆ ಈ ಪೊಲೀಸ್ ಖಾತೆಯಲ್ಲಿ ಯಾವ ರೀತಿಯ ವಾತಾವರಣ ಇದೆ ಎನ್ನುವದು ಮತ್ತು ಸಾಮಾನ್ಯರೊಡನೆ ಅವರು ವ್ಯವಹರಿಸುವ ರೀತಿ ಏನು ಎನ್ನುವದು ತಿಳಿದ ವಿಷಯ, ಇದಕ್ಕಿಂತ ಮುಖ್ಯವಾಗಿ ಅವರ ಮೇಲೆ ಅತ್ಯಂತ ಕಡಿಮೆ ವಿಶ್ವಾಸವನ್ನು ಇಡುವ ವಾತಾವರಣವೇ ತುಂಬಿದೆ.

ಮಿಡ್ನಾಪೂರ ಪೊಲೀಸ್ ಮಾಹಿತಿಯು ಒಂದು ನಿರ್ಣಾಯಕವಾದ ಸಾಕ್ಷಿಯಾಗಿಯೇ ಇದೆ. ಈ ಪೊಲೀಸ್ ಮಾಹಿತಿಯ ಹೊರತಾಗಿ ಮತ್ತೇನಾದರೂ ಇದೆಯೇ? ಇಲ್ಲಿ ಹಾಜರು ಪಡಿಸಿರುವ ಮಾಹಿತಿಯು ಸುಳ್ಳು ಸಾಕ್ಷಿಯಾಗಿದ್ದು, ನಕಲಿಯಾಗಿದ್ದು ಬಹುತೇಕವಾಗಿ ಹಣಕೊಟ್ಟು ಹೇಳಿಸಿದ ಸಾಕ್ಷಿಗಳಾಗಿವೆ. ಇದನ್ನು ಮಾಫಿಸಾಕ್ಷಿದಾರನು ತನ್ನನ್ನು ತಾನು ರಕ್ಷಿಸಿಕೊಳ್ಳಲು ಆಧಾರರಹಿತವಾದ ಆಪಾದನೆಗಳನ್ನು ಮಾಡಿದಂತಿದೆ. ಈ ನೆಲದ ಕಳಂಕರಹಿತವಾದ ವ್ಯಕ್ತಿತ್ವದ ಮೇಲೆ ಕೆಸರು ಎರಚುವಂತಿದೆ. ಇಷ್ಟೆಲ್ಲಾ ಆದಾಗ್ಯೂ ಮತ್ತೂ ಇಲ್ಲಿ ಬೇರೆ ವಿಷಯಗಳನ್ನು ತೋರಿಸುತ್ತಿದ್ದಾರೆ ಎಂದರೆ ಅವೆಲ್ಲವೂ ನಮ್ಮೆಲ್ಲರ ಮಧ್ಯದಲ್ಲಿಯೇ ಇರುವ 'ವಿಭೀಷಣರ ಕಿಡಿಗಳೇ' ಆಗಿದ್ದಾರೆ. ಅವರ ಗುರಿ ಎಂದರೆ ತಮ್ಮ ಒಳಿತಿಗಾಗಿ ಯಾವುದೇ ಸುಳ್ಳನ್ನೂ ಸಹಿತ ಹೇಳಬಲ್ಲರು. ಈ ಸುಳ್ಳಿನಿಂದ ಸಂತುಷ್ಟರಾಗುವ ಅಧಿಕಾರಿ ವರ್ಗದ ಸಹಾಯದಿಂದ ತಮ್ಮ ವೈಯಕ್ತಿಕ ಜೀವನದ ವೈರಿಗಳನ್ನು ಘಾತಿಸುವದಷ್ಟೇ ಅವರ ಗುರಿ! ಅದಕ್ಕಾಗಿ ಅವರು ಯಾವುದೇ ಸುಳ್ಳನ್ನೂ ಹೇಳಲು ಹಿಂಜರಿಯುವದಿಲ್ಲ. ಒಂದು ವೇಳೆ ಈ ದೇಶದ ಸರಕಾರವು ಕೇವಲ ಇಂತಹ

ಹೇಳಿಕೆಗಳ ಮೇಲೆ – ಅದೂ ಅಶ್ವಿನಿಕುಮಾರ ದತ್ತ ಮತ್ತು ಕೃಷ್ಣಕುಮಾರ ಮಿತ್ರರಂತಹ ನಿಷ್ಕಳಂಕ ವ್ಯಕ್ತಿಗಳ ಮೇಲೆ ಈ ರೀತಿಯ ಆರೋಪ ಹೊರಿಸುತ್ತಿದೆ ಎಂದರೆ 'ಅಸಂತುಷ್ಟ ಸ್ಥಿತಿಯಲ್ಲಿರುವ ಈ ದೇಶದಲ್ಲಿ ಇದೆಂತಹ ಸುಳ್ಳು ಮತ್ತು ಅಜ್ಞಾನದಿಂದ ತುಂಬಿರುವ ಕಾನೂನುಗಳನ್ನು ನಾವೆಲ್ಲ ಎದುರಿಸಬೇಕಾಗಿದೆ' ಎಂದೇ ಘಂಟಾಘೋಷವಾಗಿ ಹೇಳಬೇಕಾಗಿದೆ.

ಈ ರೀತಿಯ ಗಡಿಪಾರಿನ ಜೊತೆಗೆ ಮತ್ತೆ ಕೆಲವೊಂದು ದಮನಕಾರಿ ಸಂಗತಿಗಳನ್ನು ನಾವು ಅನುಭವಿಸುತ್ತಿದ್ದೇವೆ, ನಮ್ಮ ಮೇಲೆ ರಾಜದ್ರೋಹದ ಆಪಾದನೆ, ದರೋಡೆಯ ಆಪಾದನೆ, ಅಶಾಂತಿಯನ್ನು ಹರಡುತ್ತಿರುವ ಆಪಾದನೆ... ಓ... ಓ ಏನೇನೆಲ್ಲಾ ಏನೆಲ್ಲಾ ಆಪಾದನೆಗಳನ್ನು ನಮ್ಮ ತರುಣ ಜನಾಂಗದ ಮೇಲೆ ಹೇರಲಾಗುತ್ತಿದೆ. ಈ ತರುಣ ಜನಾಂಗವೇ ನಮಗೆ ನಮ್ಮ ದೇಶದ ಭವಿಷ್ಯವಾಗಿದ್ದಾರೆ ಅಲ್ಲವೇ? ನಮ್ಮನ್ನು ಛಿದ್ರ–ಛಿದ್ರಗೊಳಿಸುವ ಸಲುವಾಗಿಯೇ ಇರುವ ಈ ಆಪಾದನೆಗಳನ್ನು ಒಂದು ನಿಷ್ಪಕ್ಷಪಾತ ನ್ಯಾಯಮಂಡಳಿಯ ಸಮಕ್ಷಮ ಮಂಡಿಸಿದಲ್ಲಿ, ಒಂದಾದರೂ ಆಪಾದನೆಯನ್ನು ಪುರಾವಿಸಲು ಸಾಧ್ಯವಿಲ್ಲ. ಆದರೆ ಅಂತಹ ಅವಕಾಶವನ್ನೇ ಕೊಡದೇ ದಮನಕಾರೀ ನೀತಿಯನ್ನೇ ಹೇರಿ ನಾವೆಲ್ಲ ಯಾತನೆ ಪಡುವಂತೆ ಮಾಡಲಾಗುತ್ತಿದೆ. ಸರಕಾರದ ಆಜ್ಞಾನುವರ್ತಿಗಳಾದ ಕೆಳ ದರ್ಜೆಯ ನೌಕರರಿಂದಲೇ ಅನುಷ್ಠಾನಗೊಳಿಸುವಂತೆ ಸದಾ ಕಾರ್ಯನಿರತ–ವಾಗಿರುತ್ತದೆ. ಈ ಮೂಲಕ ದೇಶಕ್ಕಾಗಿ ತಮ್ಮನ್ನೇ ಸಮರ್ಪಣೆ ಮಾಡಿಕೊಳ್ಳುವ ಸ್ವಭಾವದ, ಉತ್ಸಾಹಶೀಲ, ಕ್ರಿಯಾಶೀಲ ಮತ್ತು ಸ್ವಾರ್ಥಬುದ್ಧಿಯನ್ನು ಎಂದಿಗೂ ಹೊಂದದೆ ಮಾತೃಭೂಮಿಗಾಗಿ ಹೋರಾಟ ಮಾಡುವವರನ್ನು ಅದುಮಿಡಲು ಪ್ರಯತ್ನಿಸುತ್ತಿದೆ.

ಒಂದರೆ ಕ್ಷಣ ನಿಧಾನಿಸಿ, ಮತ್ತೊಮ್ಮೆ ಅಲ್ಲ ಸೇರಿದ್ದವರನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸಿದೆ, ನನ್ನ ಮಾತುಗಳನ್ನೇನೋ ಮೌನವಾಗಿ ಆಲಿಸುತ್ತಿದ್ದಾರೆ,.. ಆದರೆ ಯಾವ ಭಾವನೆಗಳು ಅವರಲ್ಲಿ ಉದಿಸುತ್ತಿರಬಹುದು? ಮುಖಭಾವವನ್ನು ಗ್ರಹಿಸುವಷ್ಟು ಸಾಮಿಪ್ಯ ಇಲ್ಲ, ಇನ್ನು ಮುಂದೆ ಕುಳಿತವರೋ ಕೇಳಿಸಿಕೊಂಡಿದ್ದರೂ, ಅಪರಾಧ ಪ್ರಜ್ಞೆಯಲ್ಲಿದ್ದಾರೆಯೋ ಎನ್ನುವ ಭಾವ. ಅದಕ್ಕೆ ತಕ್ಕುದಾದ ಆಂಗಿಕ ವಿನ್ಯಾಸಗಳಲ್ಲಿ ಅವರಿಗರಿಯದಂತೆಯೇ ಪ್ರದರ್ಶಿಸುತ್ತಿದ್ದರು. ಅದರೆಲ್ಲವನ್ನೂ ಬಿಟ್ಟು ಮತ್ತೆ ವಿಷಯಕ್ಕೆ ಬಂದು, ನಿಮಗೆ ನೆನಪಿದೆಯಲ್ಲವೇ, ಕೇವಲ ಮೂರೇ ಮೂರು ವರ್ಷದ ಹಿಂದೆ ಅಂದ್ರೆ 1906 ರಲ್ಲಿ ಅಲ್ಲವೇ ಡಾಕಾದ ಆಲ್ ಇಂಡಿಯಾ ಮುಸ್ಲಿಂ

ಲೀಗ್ ಸ್ಥಾಪನೆಯಾದದ್ದು, ಅದರ ಉದ್ದೇಶವೇನಾಗಿತ್ತು? ಗೊತ್ತೇ? ಗೊತ್ತೇ? ವೈಸರಾಯ ಆಗಿದ್ದ ಲಾರ್ಡ ಮಿಂಟೋನನ್ನು ಭೇಟಿಯಾಗಿ ಅವರು ಕೋರಿದ್ದು, ಈ ಪ್ರದೇಶದ ಮುಸ್ಲಿಂ ಸಮುದಾಯದ ರಕ್ಷಣೆ!! ಯಾವ ತೊಂದರೆ ಅವರಿಗಿತ್ತು ಇನ್ನುವದು ಇವತ್ತಿಗೂ ಗೊತ್ತಿಲ್ಲ. ಅವರ ಉದ್ದೇಶವೇ ಬೇರೆ ಇತ್ತೋ ಅಥವಾ ಒಡೆದು ಆಳುವ ನೀತಿಯನ್ನೇ ನಂಬಿಕೊಂಡ ಆಂಗ್ಲ ಸರಕಾರ ಅವರನ್ನು ಎತ್ತಿ ಕಟ್ಟಿ, ಅವರಿಂದಲೇ ಈ ಪ್ರದೇಶವನ್ನು ತಮ್ಮ ನಿಯಂತ್ರಣದಲ್ಲಿಯೇ ಇರಿಸಿಕೊಳ್ಳುವ ಉದ್ದೇಶದ ಸಂಚು ಆಗಿನಿಂದಲೇ ರೂಪುಗೊಂಡಿತೋ, ಕೇವಲ ಮೂರು ವರ್ಷಗಳಲ್ಲಿ, ಅಖಂಡವಾಗಿದ್ದ ವಂಗ ದೇಶವನ್ನು ಭಂಗಗೊಳಿಸಿದರು! ಅದಕ್ಕಾಗಿ ಅಲ್ಲವೆ ಇಲ್ಲಿ ಈಗ ಗಡಿಪಾರು! ಶಿಕ್ಷೆ!! ಸ್ವದೇಶಿ ವಸ್ತು ಖರೀದಿಯೂ ಅಪರಾಧ!!

ಇದಕ್ಕಿಂತ ಸ್ಪಷ್ಟ ಚಿತ್ರಣ ಬೇಕೇ? ಯಾವ ಉದ್ದೇಶಕ್ಕಾಗಿ ಈ ವಂಗ–ಭಂಗ? ಆತ್ಮಸಾತ್ ವಿಶ್ವಾಸದಿಂದ ಆರಾಧಿಸುತ್ತಿರುವ ಮಾತೃಭೂಮಿಯನ್ನು ಮತ್ತೆ ಸೇರದ ಹಾಗೆ ಗಡಿಪಾರು ಶಿಕ್ಷೆ..., ಇವತ್ತು ಶನಿವಾರ ಕೂಡ, ಇದೂ ಏನನ್ನೋ ಸಂಕೇತಿಸುತ್ತಿದೆಯೋ? ಅದೆಲ್ಲಾ ಇರಲಿ, ಈಗಾಗಲೇ ನಾವೆಲ್ಲರೂ ಈ ಗಡಿಪಾರಿನ ಜೊತೆಜೊತೆಗೆ ಇತರೇ ಆಘಾತಗಳನ್ನೂ ಕಂಡಿದ್ದೇವೆ, ಡಕಾಯಿತ, ಅಶಾಂತಿ ಹರಡುವ ಕಾರ್ಯ ಮಾಡುತ್ತೇವೆ, ದ್ವೇಷ ಭಾವವನ್ನು ಬಿತ್ತಲಾಗುತ್ತಿದೆ ಎಂದು ನಮ್ಮ ತರುಣ ಜನಾಂಗದ ಮೇಲೆ ಆಪಾದನೆ ಹೇರುತ್ತಿಲ್ಲವೇ? ನಮ್ಮ ದೇಶದ ಭವಿಷ್ಯವಾಗಿರುವ ತರುಣರನ್ನು ಅವರನ್ನು ನಿಶ್ಯಕ್ತರನ್ನಾಗಿಸಲಾಗುತ್ತಿದೆ. ಈ ಸಂಗತಿ ಪಕ್ಷಪಾತವಿಲ್ಲದ ನ್ಯಾಯಾಧಿಕರಣವೊಂದರಿಂದ ಮಾತ್ರ ಗುರುತಿಸಲ್ಪಡುವದು. ಆದರೆ ನಿಶ್ಯಕ್ತರಾಗಿ ನಾವು ಸದಾ ಯಾತನೆಯಲ್ಲಿಯೇ ಇರಬೇಕೆನ್ನುವದೇ ಅವರ ಅಂತರಂಗವಾಗಿದೆ. ಇದನ್ನು ಆಡಳಿತದ ಕೆಳ ಹಂತದವರಿಂದಲೇ ವ್ಯವಸ್ಥಿತವಾಗಿ ಸರಕಾರ ಮಾಡಿಸುತ್ತಿದೆ, ಅದರಲ್ಲೂ ಯಾರು ಸಾಮರ್ಥ್ಯಶೀಲರಾಗಿದ್ದಾರೆಯೋ, ಸಂಪೂರ್ಣವಾಗಿ ಸಮರ್ಪಣಾ ಮನೋಭಾವದಲ್ಲಿ ತಮ್ಮ ವೈಯಕಿಕ ಜೀವನವನ್ನೂ ಮರೆತು ಮಾತೃಭೂಮಿಗೆ ಅರ್ಪಿಸಿಕೊಳ್ಳುತ್ತಿದ್ದಾರೆಯೋ, ಅವರ ವಿಷಯದಲ್ಲಂತೂ ಸರಕಾರ ಕಠೋರವಾಗಿದೆ. ಈ ರೀತಿಯ ಯುವ ಸಮುದಾಯದ ಮನೋಭಾವವು, ನಮ್ಮ ರಾಷ್ಟ್ರೀಯ ಜೀವನದಲ್ಲಿ ಪರಿವರ್ತನಶೀಲವಾಗುತ್ತಿರುವ ಮತ್ತು ಅದೊಂದು ಸಂಚಲನವನ್ನೇ ಸೃಷ್ಟಿಸುತ್ತಿರುವ ಸಂಗತಿಯಾಗಿದೆ. ಇದನ್ನೇ ಅದುಮಿ ತುಳಿಯಲು ಸರಕಾರ ಯತ್ನಿಸುತ್ತಿದೆ. ಈ ಮೂಲಕ ರಾಷ್ಟ್ರೀಯ ಜೀವನಕ್ಕೆ ಮತ್ತು ಅದರ ವಿಕಾಸಕ್ಕೆ ತಡೆ ಒಡ್ಡಬಹುದು ಎಂದು ಸರಕಾರ ಭಾವಿಸಿದಂತಿದೆ. ಆದರೆ ಆದರೆ..

ಇದೊಂದು ಮೂರ್ಖತನದ ನಿರ್ಣಯವೆಂದು ಸರಕಾರಕ್ಕೇ ತಿಳಿದಿಲ್ಲ, ಇಂತಹ ಅದೆಷ್ಟೋ ಆಘಾತಪೂರ್ಣವಾದ ಘಟನಾವಳಿಗಳಲ್ಲಿ ನಮ್ಮ ದೇಶ ಸಾಗಿ, ವಿಕಾಸಗೊಳ್ಳುತ್ತಲೇ ಬಂದಿದೆ. ಇಂತಹ ವಿಪ್ಲವಕಾರೀ ಘಟನಾವಳಿಗಳಲ್ಲಿಯೇ ಮತ್ತೆ ಜಾಗ್ರತಿಗೊಂಡು ಶೋಭಾಯಮಾನವಾಗಿದೆ. ಅದಕ್ಕಿಂತ ಮುಖ್ಯವಾದ ಸಂಗತಿ ಎಂದರೆ, ಒಮ್ಮೆ ಜಾಗ್ರತಗೊಂಡ ರಾಷ್ಟ್ರವು – ಆಗಿನಿಂದಲೂ ದೇವರ ವಾಣಿಯಂತೆಯೇ ಜಾಗ್ರತಗೊಂಡ ರಾಷ್ಟ್ರವನ್ನು ಕೇವಲ ದೈಹಿಕ ಆಕ್ರಮಣ ಮಾಡಿ ನಿರ್ಬಂಧನಗೊಳಿಸಲು ಸಾಧ್ಯವೇ ಇಲ್ಲ, ಸಾಧ್ಯವೇ ಇಲ್ಲ! ಇಂತಹ ಯಾವುದೇ ಪ್ರಯತ್ನವೂ ಯಶಸ್ವಿಯಾದ ಸಂಗತಿ ಇತಿಹಾಸದಲ್ಲಿಯೂ ಇಲ್ಲ, ಹೀಗಾಗಿ ಇದು ಭಾರತದಲ್ಲಿ ಮತ್ತೆ ಇಂತಹ ನಿರ್ಬಂಧದ ಸ್ಥಿತಿ ಸ್ಥಾಪನೆ ಸಾಧ್ಯವೂ ಆಗುವದಿಲ್ಲ, ಇದೀಗ ಬಿರುಗಾಳಿಯೊಂದು ಬೀಸಿದಂತೆ ನಮಗೆ ಭಾಸವಾಗಿರಬಹುದು, ಆದರೆ ಅದೇ ಮತ್ತೆ ಶಾಂತಿಯ ತಂಗಾಳಿಯಾಗಿ ಬಂದೇ ಬರುತ್ತದೆ, ಅದು ಆಗಮಿಸಿರುವದನ್ನೂ ನಾನು ಕಂಡಿದ್ದೇನೆ. ಈ ಚಂಡಮಾರುತದ ಆರ್ಭಟದ ಜೊತೆಗೆ ಧಾರಾಕಾರವಾಗಿರುವ ವರ್ಷಾಧಾರೆ ಏನೆಂದುಕೊಂಡಿದ್ದೀರಾ? ಸಾಮರ್ಥ್ಯಪೂರ್ಣವಾಗಿ ನಮ್ಮೆಲ್ಲರನ್ನೂ ಆವರಿಸಿರುವ ಸ್ಥಿತಿ ಯಾಕೆ? ಗೊತ್ತಿದೆಯೇ? ಅದಕ್ಕಾಗಿಯೇ ನನ್ನ ಹೃದಯದಲ್ಲಿಯೇ ಹೇಳಿಕೊಂಡಿದ್ದೇನೆ, ಈ ಚಂಡಮಾರುತದ ಬಲಾಢ್ಯ ರೆಕ್ಕೆಗಳು ಪರಮಾತ್ಮನದೇ ಆಗಿವೆ, ಅವುಗಳ ಮೂಲಕವೇ ಇಂತಹ ವಿಪ್ಲವಕಾರೀ ಸ್ಥಿತಿಯನ್ನು ನಿರ್ಮಿಸಿದ್ದಾನೆ, ಇದೆಲ್ಲವೂ ನಮ್ಮ ಅಸ್ತಿತ್ವವನ್ನೇ ಅಲುಗಾಡಿಸುತ್ತಿರುವಂತೆ, ನಮ್ಮ ರಕ್ಷಣೆಗೆಂದೇ ಇದ್ದ ನಮ್ಮದೇ ಮೇಲ್ಛಾವಣಿಗಳೂ ತೂರಿ ಹೋಗುವ ಹಾಗೆ ಕಾಣುತ್ತಿದೆ, ಇದೆಲ್ಲವೂ ನಮ್ಮ ರಾಷ್ಟ್ರೀಯ ಜೀವನವನ್ನೇ ಗುಡಿಸಿ ಹಾಕುತ್ತಿವೆ. ನಾವೆಲ್ಲ ಆರಾಧನೆ ಮಾಡುತ್ತಿರುವ ಮಾತೆಯ ಸಲುವಾಗಿ ನಾವೇ ನಾವು ಸೇರಿ ಕಟ್ಟಿರುವ ದೇವಸ್ಥಾನದಲ್ಲಿಯೇ ಮತ್ತೆ ಪ್ರತಿಷ್ಠಾಪಿಸಿ, ಅದನ್ನೊಂದು ನಿತ್ಯ ನೂತನವಾಗಿರುವ ಸುಸಜ್ಜಿತವಾದ ಭವನವೊಂದನ್ನು ರಚಿಸಿಕೊಂಡಿದ್ದೇವಲ್ಲವೇ? ನಾವು ಕಟ್ಟಿರುವ ಇಂತಹ ಭವನಗಳ ಮೇಲೆ ಅವನು ಹಾರಿ ಬಂದಿದ್ದಾನೆ, ಅದರ ಭದ್ರ ಛಾವಣಿಯನ್ನೇ ಕಂಪಿಸುವಂತೆ ಮಾಡಿದ್ದಾನೆ, ಅವನ ಬಾಹುಬಲದಲ್ಲಿ ಇಡೀ ಕಟ್ಟಡವೇ ಪುಡುಪುಡಿಯಾಗಿಸಿದ್ದಾನೆ, ಏಕ ಈ ರೀತಿಯಾಗಿ ‘ಅವನು’ ಮಾಡುತ್ತಿದ್ದಾನೆ? ಈ ರೀತಿಯ ದಮನಕಾರೀ ಕ್ರಿಯೆ ಎಂದರೆ ಇದೊಂದು ಸುತ್ತಿಗೆಯ ಪೆಟ್ಟು ಎನ್ನುವದನ್ನು ಅರಿತುಕೊಳ್ಳಬೇಕಿದೆ. ಅದರಲ್ಲೂ ನಮ್ಮನ್ನು ಮೂರ್ತಿಗೊಳಿಸುವ ಉದ್ದೇಶದಿಂದಲೇ ಈ ರೀತಿಯ

ಪ್ರಹಾರ ಮಾಡುತ್ತಿದ್ದಾನೆ. ಅವನು ಇಚ್ಛಿಸಿದ ಆಕಾರ ಬರುವವರೆಗೂ ಈ ರೀತಿಯ ಪೆಟ್ಟುಗಳನ್ನು ಅವನು ನಿಲ್ಲಿಸುವದಿಲ್ಲ. ಸಾಮಾರ್ಥ್ಯಪೂರ್ಣ ರಾಷ್ಟ್ರವೊಂದರ ನಿರ್ಮಾಣವೇ ಅವನ ಇಚ್ಛೆಯಾಗಿದೆ. ಅದಕ್ಕಾಗಿಯೇ 'ಅವನು' ಈ ರೀತಿಯ ಕ್ರಿಯಯಲ್ಲಿ ನಿರತನಾಗಿದ್ದಾನೆ. ನಾವೆಲ್ಲ ಕಬ್ಬಿಣದ ಹಾಗೆ ನಂತರ ಅವನ ಕುಲುಮೆಯ ಅಗ್ನಿಯೊಳಗೆ ನಮ್ಮನ್ನು ಕಾಸಿ ಅವನದೇ ಅಡಿಗಲ್ಲ ಮೇಲೆ ಇಟ್ಟು ಅಪ್ಪಳಿಸಿ ಅಪ್ಪಳಿಸಿ ಸಾಕಾರಗೊಳಿಸುತ್ತಾನೆ. ಇದೆಲ್ಲವೂ ನಮ್ಮನನ್ನು ನಾಶಗೊಳಿಸಲಿಕ್ಕೆ ಅಲ್ಲ, ಬದಲಾಗಿ ನಮ್ಮನ್ನು ಪುನರ್–ಸೃಷ್ಟಿಗೊಳಿಸಲೆಂದೆ ಈ ರೀತಿ ಮಾಡುತ್ತಿದ್ದಾನೆ. ಯಾತನೆ ಪಡದೆ ಸಾಮರ್ಥ್ಯ ಎಂದಿಗೂ ಬಾರದು, – ತ್ಯಾಗವಿಲ್ಲದೇ ಇದ್ದಲ್ಲಿ ಪ್ರಗತಿಯೂ ಸಿಗದು.

ಈ ರೀತಿ ಇದ್ದದ್ದರಿಂದಲೇ ಕೃಷ್ಣಕುಮಾರ ದತ್ತನನ್ನು ಕಳೆದುಕೊಂಡೆವೆಂದಲ್ಲ, ಈಗಲೂ ಆಗ್ರಾ ಜೇಲಿನಲ್ಲಿ ಪಡಬಾರದ ಕಷ್ಟಗಳಿಗೆ ಸಿಲುಕಿ ನಲುಗುತ್ತಿದ್ದಾನೆ. ಅದೇ ರೀತಿಯಲ್ಲಿ ಟಿಳಕರು ಮಂಡಾಲೆಯಲ್ಲಿ ಸೆರೆಮನೆಯಲ್ಲಿ ಅನುಭವಿಸುತ್ತಿರುವ ಸ್ಥಿತಿಗೆ ಇಡೀ ಮಹಾರಾಷ್ಟ್ರ ದುಃಖಿಸುತ್ತಿದೆ. ಇದೆಲ್ಲವನ್ನೂ ಮಾಡಿದ್ದು 'ಅವನೇ'. ಇವರೆಲ್ಲರನ್ನೂ ಈ ರೀತಿಯ ಪರೀಕ್ಷೆಗೆ ಒಳಪಡಿಸಿ, ತನ್ನದೇ ದಾರಿಯಲ್ಲಿ ಸಾಗುವಂತೆ ಮಾಡುತ್ತಿದ್ದಾನೆ. ಜನ ಸಮುದಾಯದ ಪಥದಂತೆ 'ಅವನ' ಪಥವಿರುವದೇ ಇಲ್ಲಿ. ಬರಿಸಾಲದಿಂದ ಅಶ್ವಿನಿಕುಮಾರ ದತ್ತನನ್ನು ಕರೆಸಿಕೊಂಡವನೂ 'ಅವನೇ'. ಏಕೆಂದರೆ ಅವನು ಎಲ್ಲವನ್ನು ಬಲ್ಲವನು; ಜ್ಞಾನಿ. ನಮ್ಮ ಅಭ್ಯುದಯಕ್ಕಾಗಿ ಏನು ಮಾಡಬೇಕೆನ್ನುವದು ನಮಗಿಂತ 'ಅವನಿಗೇ' ಸ್ಪಷ್ಟವಾಗಿ ತಿಳಿದಿದೆ. ಅಶ್ವಿನಿಕುಮಾರ ಇಲ್ಲದಿದ್ದರೂ ಹೋರಟ ನಿಂತಿತೇನು? ಇಲ್ಲವಲ್ಲ...! ಸ್ವದೇಶಿ ಚಳವಳಿ ನಿಂತಿತೆ? ಇದೀಗ ಆಡಳಿತದಲ್ಲಿರುವ ವಲಯ ತಮ್ಮ ಅಲ್ಪ ಜ್ಞಾನವನ್ನೇ ಆಧರಿಸಿಕೊಂಡು ಹೋರಾಟದ ಮುಂದಾಳುಗಳನ್ನೇ ಕತ್ತರಿಸಿದಲ್ಲಿ, ಸಹಜವಾಗಿಯೇ ಹೋರಾಟವು ನಿಲ್ಲುತ್ತದೆ ಎಂದು ತಿಳಿದುಕೊಂಡಿದ್ದಾರೆ. ಅವರಿಗೆ ಈ ಅಶ್ವಿನಿಕುಮಾರ ದತ್ತಾ ಎಷ್ಟು ಪ್ರಮುಖ ವ್ಯಕ್ತಿ ಎನ್ನುವದೂ ತಿಳಿದಿಲ್ಲ. ಅಶ್ವಿನಿಕುಮಾರ ದತ್ತ ಕೇವಲ ಈ ಚಳವಳಿಯ ಮುಖಂಡ ಅಲ್ಲ – ಅದೇ ರೀತಿಯಲ್ಲಿ ಅತ್ತ ಟಿಳಕರೂ ಸಹಿತ ಮುಖಂಡರಲ್ಲ. ಇಲ್ಲಿ ಮುಂದಾಳ್ತನ ವಹಿಸುತ್ತಿರುವದು ಆ ಪರಮಾತ್ಮ, ಹೌದು ಆ ಪರಮಾತ್ಮ ನಮ್ಮೆಲ್ಲರ ಮುಖಂಡನಾಗಿದ್ದಾನೆ.

(ಸಶೇಷ)

## ರಂಗೇರಿದಂಥ ಇದರ ನಾದಗಳು ಭವ್ಯದಲಿ ತೇಲಿ ಸಾಗಿ

**– ಅನು: ಪುಟ್ಟು ಕುಲಕರ್ಣಿ**

ದೇವನಾ ಕೃಪೆಯ ನಿಬಿಡದಾನಂದ ಚಿದ್ಘನದ ಸಾಂದ್ರ ಲೀಲ
ಸೃಷ್ಟಿಲೀಲೆಗಳ ಸ್ಪರ್ಶಗೊಳ್ಳುತಿರೆ ಪುಳಕದಲಿ ಉದಿತ ತಾಲ.
ಗತಿಸಿ ಹೋಗಿದ್ದ ಚಿದಾನಂದವದು ಸ್ಮೃತಿಗೀಗ ಉದಿತಗೊಂಡು
ನೀರವದ ಮೌನದಲಿ ಇರುವ ಬೇರುಗಳಲೀಗ ಸುಪ್ತಿಗೊಂಡು

ಲೋಕ–ಲೋಕದಾ ನಿಸ್ಸಂಗಭಾವ ಸೌಂದರ್ಯವನ್ನು ಬೇಗ
ಹುಟ್ಟು–ಸಾವುಗಳ ಮೂಲ ಗುಟ್ಟಿನಲಿ ಒಟ್ಟೈಸಿಕೊಂಡು ಈಗ,
ಓ, ದಿವ್ಯ ಸಚ್ಚಿದಾನಂದವನ್ನು ಪ್ರತಿಬಿಂಬಗೊಳಿಸಿತೀಗ.
ಆ ಆತ್ಮಭಾವದಾಮೋದ–ಮಂದಸ್ಮಿತವಿದುವು ಸುಪ್ತವಾಗಿ
ಅತ್ತ–ಇತ್ತ–ಮೇಲತ್ತ–ಮತ್ತೆ ಸರ್ವತ್ರ ಲಹರಿಯಾಗಿ,

ಪವನದುಸಿರಿನಲಿ ವಹನಗೊಳ್ಳುತಲಿ ದಿವಭಾವ ತುಂಬಿ ಭವಕೆ
ಸಸ್ಯಸಂಕುಲದ ಪ್ರಾಣರಸವಾಗಿ ಶೋಭಾಯಮಾನ ಯುಗಕೆ,
ಆವರಣಗೊಂಡ ಆ ವರ್ಣ–ಮಹಿಮೆ ಆ ಪ್ರಾಣ–ತ್ರಾಣವಾಗಿ
ಎಲೆ–ಚಿಗುರುಗಳಲಿ ಜೊತೆ ಕುಸುಮದಳದಿ ಕೋಮಲದ ತಾಣವಾಗಿ.
ಭಾವಮುಗ್ಧತೆಯ ಮುದಹಸಿತವಿದುವು ಅನುಭೂತಿ ಭೂಮ–ಗುಪ್ತ
ಸಲಿಲ ಜೀವರಸ ಪವನದುಸಿರಿನಲಿ, ಸರ್ವತ್ರ ನಿನದ ಸುಪ್ತ;

ರಂಗೇರಿದಂಥ ಇದರ ನಾದಗಳು ಭವ್ಯದಲಿ ತೇಲಿ ಸಾಗಿ
ಅರಳುತಿವೆ ಈಗ ಬೆಡಗಿನಲಿ ಪರ್ಣ–ಪುಷ್ಪಗಳು ವರ್ಣವಾಗಿ.

**(ಸಾವಿತ್ರಿ; ದಳ 2 ರೇಣು 4 ಪುಟ 139)**

## ಲಯಬದ್ಧ–ಗೀತ–ಸಂಗೀತ ಶ್ರುತಿಯ ತನನದಲಿ ಅದರ ಗರಿಮೆ

**– ಅನು: ಪುಟ್ಟು ಕುಲಕರ್ಣಿ**

ವಿಷ್ಣುವಿನ ಗಾನ ಜೊತೆ ಸ್ಪಂದ ತಾನ ಮನನದಲಿ ಅವನು ಲೀನ
ಮತ್ತದೋ ತೋಷ ಭಾವದಾವೇಶ ಅನುಭೂತಿ ಲೋಕ– ತನನ,
ಅಕ್ಷರದ ಲೋಕ–ನಕ್ಷತ್ರ ರೂಹು ಬ್ರಹ್ಮಾಂಡ ವ್ಯಾಪ್ತಿ–ಪ್ರಾಪ್ತಿ
ಜೊತೆ ಜೀವ–ಬೀಜವಂಕುರಿಸಿ, ಅರಳಿ ಕೈಂಕರ್ಯಕಿಳಿದ ರೀತಿ

ಏಕಾತ್ಮ ಭಾವ ಸ್ಪಂದನದ ಛಂದದನುಬಂಧ ಸಂದುದಿಲ್ಲಿ
ಕ್ಷರ–ಲೋಕವೆಲ್ಲ ತಕ್ಷಣದಿ –ಸ್ಪರ್ಶ–ಕಂಪನವ ಪಡೆಯಿತಿಲ್ಲಿ
ಪ್ರವೃತ್ತಗೊಂಡು ಆವರ್ತಗಳಲಿ ವಿಕಸನದಿ ಈಗ ನಿರತ
ದಿವ್ಯ ಚೇತನದ ಭವ್ಯ ಭೂಮವದು ಗಮ್ಯದೆಡೆ ಕರೆವ ಗೀತ.

ಲಯಬದ್ಧ–ಗೀತ–ಸಂಗೀತ ಶ್ರುತಿಯ ತನನದಲಿ ಅದರ ಗರಿಮೆ
ಜೊತೆಜೊತೆಗೆ ತಾಳಮೇಳದಂತಲ್ಲಿ ಅದ್ಭುತದ ದಿವ್ಯ–ಮಹಿಮೆ
ಮುದ ತರುವ ಅದುವು ತಾನುದಿತಗೊಳುವವರೆಗಿವನು ಗಾನಲೋಲ
ಆ ಪರಮದೇವ ಗವಸಣಿಕೆ ತೆರೆವತನಕಿವನು ಕಾರ್ಯಶೀಲ

ಮೃಣ್ಮಯದ ದೇಹಗಳು ಪೂರ್ಣ ದಿವ್ಯ–ಚಿನ್ಮಯವೆ ಆಗುವರೆಗೆ
ಮತ್ತಿದೋ ಜೀವ–ಜೀವನವು ಪರಮ ತೋಷವನು ತಳೆವವರೆಗೆ,
ಸಾವಿರದ ಮಧುರ–ಮಾಧುರ್ಯ ಕುಸುಮ ಕೋಮಲದ ಸ್ಪಂದ ಕರೆಗೆ
ಶಾಶ್ವತದ ಶಕ್ತಿಯೊಡನದುವು ಹೆಣೆದು ಅನುಬಂಧಗೊಳುವವರೆಗೆ,

ಹೃದಯವದು ಹೃದಯದೊಡನಾಡಿಯಾಗಿ ಅನುಭೂತಿಗೊಳುವವರೆಗೆ
ಚಿಂತನವು ನೇರ ಪೂರ್ಣ ಚಿಂತನವ ತಾ ದೃಷ್ಟಗೊಳುವವರೆಗೆ,

**(ಸಾವಿತ್ರಿ; ದಳ 6 ರೇಣು 1 ಪುಟ 416–17)**

---

**ಟಿಪ್ಪಣಿ:** ಇಲ್ಲಿ ವಿಷ್ಣು ಎಂದರೆ ಬ್ರಹ್ಮಾಂಶವನ್ನು ಪ್ರಶಾಸನಕ್ಕೆ ಒಳಪಡಿಸುವ ಮಹಾಬಲಶಾಲಿ. ಇವನೇ ಮಾನವ–ವರ್ಗದ ಕ್ರಿಯೆಗಳಿಗೆ/ಕರ್ಮಗಳಿಗೆ, ದೇಹಕ್ಕೆ, ಚಿಂತನಕ್ಕೆ ಒಡೆಯನಾಗಿದ್ದಾನೆ. ಆ ಪರಮೋಚ್ಚ ದೇವತೆಯು ಊರ್ಧ್ವಾತಿಊರ್ಧ್ವ ಗಮನಕ್ಕೆ–ತುರೀಯಕ್ಕೆ ಮಾರ್ಗದರ್ಶಿಯಾಗಿದ್ದಾನೆ. ಅವನಿರುವ ಸ್ಥಾನಕ್ಕೆ 'ಪರಾರ್ಧ' ಅಥವಾ 'ಸಚ್ಚಿದಾನಂದ' ಎಂದು ನಿರ್ಧರಣೆ ಇದೆ.

# ವಿಶ್ವಕಲ್ಯಾಣಕೀಗ ಉತ್ಕಂಠ ಅವನ ಆಗಮನವಿಲ್ಲಿ

**– ಅನು: ಪುಟ್ಟು ಕುಲಕರ್ಣಿ**


ವಿಶ್ವಕಲ್ಯಾಣಕೀಗ ಉತ್ಕಂಠ ಅವನ ಆಗಮನವಿಲ್ಲಿ
ತಾರಕದ–ಮುರಲಿ ಕುಂಡಲಿಯ–ನಾದ ತೋಷದಾ ವಾಣಿಯಲ್ಲಿ,
ವೃಕ್ಷ–ವೃಕ್ಷಗಳ ಮೇಲೆಲ್ಲ ತೂಗಿ ಹಿಂಜೋಲು–ಜ್ಯೋತಿ ಪಥದಿ
ಅವನ ಆ ಶಿರೋಭೂಷಣದ ಮೋರಮುಕುಟವದು ವ್ಯಾಪ್ತ ನಭದಿ
ಅವನ ಹೂ–ಬಿಸಿಯ ಉಸಿರುಸಿರು ತೋಷಕಿದೊ ಸತತ ಕರೆಯನಿತ್ತು
ಕರ್ತೃತ್ವಪೂರ್ಣ ಆಹ್ವಾನಗಳನು ಮೋದದಲಿ ಪುಲಕವಿತ್ತು,
ಆ ಘನದ ಸಾಂದ್ರ ವೈಭೋಗವರ್ಧನವು ನಭದ ನೀಲವಾಗಿ
ನಭೋದತ್ತದನಿಮೇಷ ದಿಟ್ಟಿ ಅದು ಅವನ ನೋಟವಾಗಿ.

**(ಸಾವಿತ್ರಿ; ದಳ 4 ರೇಣು 1 ಪುಟ 353)**

# ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ಹೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926 (Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |
| 34 | ಭವಾನಿ ಭಾರತಿ |
| 35 | ಶಿಕ್ಷಣ |
| 36 | ಯೋಗಾರಂಭ |



ಫೋಟೊ: ಅರೂಪ ಮಿತ್ರ

ಮುದ ತರುವ ಅದುವು ತಾನುದಿತಗೊಳುವವರೆಗಿವನು ಗಾನಲೋಲ
ಆ ಪರಮದೇವ ಗವಸಣಿಕೆ ತೆರೆವತನಕಿವನು ಕಾರ್ಯಶೀಲ

**– ಪುಟ್ಟು ಕುಲಕರ್ಣಿ**
**(ಶ್ರೀ ಅರವಿಂದರ 'ಸಾವಿತ್ರಿ'; ದಳ 6 ರೇಣು 1 ಪುಟ 416–17)**

**RNI No. 22511/1971**
No. of Pages **76 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಫೋಟೋ: ಇಮೇಜಿಂಗ್ ಸಾವಿತ್ರಿ

ವಿಶ್ವಕಲ್ಯಾಣಕೀಗ ಉತ್ಕಂಠ ಅವನ ಆಗಮನವಿಲ್ಲಿ
ತಾರಕದ–ಮುರಲಿ ಕುಂಡಲಿಯ–ನಾದ ತೋಷದಾ ವಾಣಿಯಲ್ಲಿ,
ವೃಕ್ಷ–ವೃಕ್ಷಗಳ ಮೇಲೆಲ್ಲ ತೂಗಿ ಹಿಂಜೋಲು–ಜ್ಯೋತಿ ಪಥದಿ
ಅವನ ಆ ಶಿರೋಭೂಷಣದ ಮೋರಮುಕುಟವದು ವ್ಯಾಪ್ತ ನಭದಿ
ಅವನ ಹೂ–ಬಿಸಿಯ ಉಸಿರುಸಿರು ತೋಷಕಿದೊ ಸತತ ಕರೆಯನಿತ್ತು
ಕರ್ತೃತ್ವಪೂರ್ಣ ಆಹ್ವಾನಗಳನು ಮೋದದಲಿ ಪುಲಕವಿತ್ತು,
ಆ ಘನದ ಸಾಂದ್ರ ವೈಭೋಗವರ್ಧನವು ನಭದ ನೀಲವಾಗಿ
ನಭೋದತ್ತದನಿಮೇಷ ದಿಟ್ಟಿ ಅದು ಅವನ ನೋಟವಾಗಿ.

– **ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 4 ರೇಣು 1 ಪುಟ 353)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.